ಸಾಹಿತ್ಯ ದಾಸೋಹ – 240

ಸಂಚಿಕೆ 64 – ಸೆಪ್ಟೆಂಬರ್ 2025 31.08.2025ರ ದಾಸೋಹದ ಬರಹಗಳ ಸಂಕಲನ



ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಪುಟ ತೆರೆಯುವ ಮುನ್ನ...

ನಮ್ಮ ಮಾತು

ಆತ್ಮೀಯರೆ,

೩೧ನೆಯ ಆಗಸ್ಟ್ ೨೦೨೫ರಂದು ನಡೆದ ೨೪೦ನೆಯ ದಾಸೋಹದ ಸಂಚಿಕೆ ಇಲ್ಲಿದೆ. ೧೫ ಆಗಸ್ಟ್ ೧೯೯೯ರಂದು ಮೊದಲ ಬಾರಿಗೆ ಆರಂಭವಾದ ನಮ್ಮ ಸಾಹಿತ್ಯ ದಾಸೋಹ ಪರಿಕ್ರಮ ತನ್ನ ನಿರಂತರತೆಯನ್ನು ಉಳಿಸಿಕೊಂಡು ಈಗ ೨೬ ವರ್ಷಗಳನ್ನು ಪೂರೈಸಿರುವುದು ಸಂತಸದ ಸಂಗತಿ. ಮೊದಲ ಇಪ್ಪತ್ತು ವರ್ಷ ವೇದಿಕೆಯ ವಿವಿಧ ಸದಸ್ಯರ ಮನೆಮನೆಗಳಲ್ಲಿ, ಆನಂತರ ರಾಣಿ ಸರಳಾದೇವಿ ಶಾಲೆ ಮತ್ತು ಬಿ.ಎಂ.ಶ್ರೀ. ಪ್ರತಿಷ್ಠಾನದ ಸಭಾಂಗಣದಲ್ಲಿ, ಕೋವಿಡ್ ಕಾಲಘಟ್ಟದಿಂದೀಚೆಗೆ ಗೂಗಲ್ ಮೀಟ್ ಅಂತರ್ಜಾಲ ವ್ಯವಸ್ಥೆಯ ಮೂಲಕ ನಡೆದುಬಂದ ದಾಸೋಹ ಸರಣಿ ಹಲವು ಹೊಸ ಬರಹಗಾರರನ್ನು ಸೃಷ್ಟಿಸಿದೆ. ೨೦೨೦ರಿಂದೀಚೆಗೆ ಅಂತರ್ಜಾಲ ಮುಖೇನ ನಡೆದ ದಾಸೋಹಗಳಲ್ಲಿ ಮಂಡಿಸಲಾದ ಎಲ್ಲ ಬರಹಗಳನ್ನೂ ಪಿಡಿಎಫ್ ರೂಪದಲ್ಲಿ ಆಯಾ ತಿಂಗL 'ಸಾಹಿತ್ಯ ದಾಸೋಹ' ಸಂಚಿಕೆಗಳಲ್ಲಿ ಪ್ರಕಟಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಇದು ೬೩ನೆಯ ಸಂಚಿಕೆ. ಈ ಸಂಚಿಕೆಗಲು ನಮ್ಮ ವೇದಿಕೆಯ ಜಾಲತಾಣದಲ್ಲೂ ಲಭ್ಯವಿದ್ದು, ದಾಸೋಹದ ನೇರಪ್ರಸಾರದ ವಿಡಿಯೋಗಳು ವೇದಿಕೆಯ ಯುಟ್ಯೂಬ್‌ನಲ್ಲಿ ದಾಖಲಾಗಿದೆ. ಹೀಗೆ ನಮ್ಮ ದಾಸೋಹದ ಪರಿಕಲ್ಪನೆಯು ಹಲವು ಮಜಲುಗಳನ್ನು ದಾಟುತ್ತಾ ಸಾಗಿಬರುವಲ್ಲಿ ಸಹಕರಿಸಿದ ಎಲ್ಲ ಪ್ರಸ್ತುತಿಕಾರರಿಗೂ, ಎಲ್ಲ ದಾಸೋಹಗಳ ಅಧ್ಯಕ್ಷರಿಗೂ, ವೀಕ್ಷಕರಿಗೂ, ಸಂಘಟಕರಿಗೂ ಮತ್ತು ತಂತ್ರಜ್ಞರಿಗೂ ನಮ್ಮ ಕೃತಜ್ಞತೆಗಳು. ಮುಂದಿನ ದಿನಗಳಲ್ಲೂ ನಿಮ್ಮೆಲ್ಲರ ಪ್ರೋತ್ಸಾಹ ಹೀಗೇ ಮುಂದುವರಿಯಲಿ ಎಂಬುದೇ ನಮ್ಮ ಅಪೇಕ್ಷೆ.

೨೪೦ನೆಯ ದಾಸೋಹದ ಅಧ್ಯಕ್ಷತೆವಹಿಸಿ, ಎಲ್ಲ ಬರಹಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ದಾಖಲಿಸಿದ ಶ್ರೀಮತಿ ಪೂರ್ಣಿಮ ಭಗವಾನ್ ಅವರಿಗೂ, ತಿಂಗಳ ಬೆಳಕು ಕಾರ್ಯಕ್ರಮದಲ್ಲಿ ಭಾಗವಹಿಸಿ, ಶ್ರಾವಣ ಮಕ್ಕಳ ಕಥಾರಚನೆ ಅಭಿಯಾನದಲ್ಲಿ ಮೂಡಿಬಂದ ವಿವಿಧ ಕತೆಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಲೇಖನ ರೂಪದಲ್ಲಿ ನೀಡಿದ ಶ್ರೀಮತಿ ಜಿ.ವಿ. ನಿರ್ಮಲ ಅವರಿಗೂ, ವೀಕ್ಷಕರು ಹಾಗೂ ತಾಂತ್ರಿಕ ನೆರವು ನೀಡಿದವರಿಗೂ ನಮ್ಮ ವಂದನೆಗಳು.

ಈ ಸಂಚಿಕೆಯ ಬಗೆಗಿನ ತಮ್ಮ ಅನಿಸಿಕೆಗಳಿಗೆ ಸ್ವಾಗತ.

ವಂದನೆಗಳೊಂದಿಗೆ,

ಸಂಚಾಲಕ ಸಮಿತಿ

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ 30.09.2025

ದಾಸೋಹದ ಪುಟಗಳಲ್ಲಿ...

ಮುಖಚಿತ್ರ – ಜೋಗ ಜಲಪಾತ (ಚಿತ್ರ ಕೃಪೆ: ಅಂತರ್ಜಾಲ)

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ – 240


ಕಾರ್ಯಕ್ರಮ ವರದಿ: ರಾಧಿಕಾ ವಿ. ಗುಜ್ಜರ್

31ನೆಯ ಆಗಸ್ಟ್ 2025ರಂದು ಭಾನುವಾರ ಇಳಿ ಮಧ್ಯಾಹ್ನ 3.30ಕ್ಕೆ 240ನೇಯ ಸಾಹಿತ್ಯ ದಾಸೋಹ ಕಾರ್ಯಕ್ರಮವು ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯಲ್ಲಿ ಅಂತರಜಾಲ ಗೂಗಲ್ ಮೀಟ್ ಮುಖೇನ ಆರಂಭವಾಯಿತು. ಶ್ರೀಮತಿ ಪೂರ್ಣಿಮ ಭಗವಾನ್ ಅವರು ದಾಸೋಹದ ಅಧ್ಯಕ್ಷತೆ ವಹಿಸಿದ್ದರು.

ದಾಸೋಹದ ಸಂಚಾಲಕರಾದ ಶ್ರೀ ಕೆ.ಎನ್.ಮಹಾಬಲ ಅವರು ಎಲ್ಲರನ್ನೂ ಔಪಚಾರಿಕವಾಗಿ ಸ್ವಾಗತಿಸಿ, 240ನೆಯ ದಾಸೋಹಕ್ಕೆ ಚಾಲನೆ ನೀಡಿದರು.

ಶ್ರೀಮತಿ ಶೀಲಾ ಅರಕಲಗೂಡು ಅವರು ಸಭಾಧ್ಯಕ್ಷರು ಮತ್ತು ಸಭೆಯ ಎಲ್ಲರಿಗೂ ಸ್ವಾಗತ ಕೋರಿ, ದಾಸೋಹದ ಅಧ್ಯಕ್ಷರಾದ ಶ್ರೀಮತಿ ಪೂರ್ಣಿಮಾ ಭಗವಾನ್ ಅವರನ್ನು ಪರಿಚಯಿಸಿದರು.

ಸಂಚಾಲಕ ಸಮಿತಿಯ ಪರವಾಗಿ ಶ್ರೀ ಬೆಂ.ಶ್ರೀ.ರವೀಂದ್ರ ಅವರು ತಮ್ಮ ಪ್ರಾಸ್ತಾವಿಕ ನುಡಿಗಳ ಮೂಲಕ ಈ ಕೆಳಕಂಡ ಕೆಲವು ವಿಷಯಗಳನ್ನು ಪ್ರಮುಖವಾಗಿ ಪ್ರಸ್ತಾಪಿಸಿದರು.



- ನಮ್ಮ ಮೊದಲನೆಯ ಸಾಹಿತ್ಯ ದಾಸೋಹವು 1999ರ ಆಗಸ್ಟ್ ತಿಂಗಳಲ್ಲಿ ಶ್ರೀ ಪರಶುರಾಮಪ್ಪನವರ ಸಂಚಾಲಕತ್ವದಲ್ಲಿ ಶ್ರೀ ವಿಠ್ಠಲ ಇಜೇರಿಯವರ ಮನೆಯಲ್ಲಿ ನಡೆದಿತ್ತು. ಅಂದಿನ ಕಾರ್ಯಕ್ರಮದ ಅತಿಥಿಯಾಗಿ ಶ್ರೀ ಕಿ.ರಂ. ನಾಗರಾಜ ಅವರು ಬಂದಿದ್ದರು. ಅಲ್ಲಿಂದೀಚೆಗೆ ನಮ್ಮ ಸದಸ್ಯರೆಲ್ಲರ ಉತ್ಸಾಹದ ಪಾಲ್ಗೊಳ್ಳುವಿಕೆಯಿಂದಾಗಿ ನಿರಂತರತೆಯನ್ನು ಕಾಯ್ದುಕೊಂಡ ದಾಸೋಹವು ಇಂದು 240ನೆಯ ಸಾಹಿತ್ಯ ದಾಸೋಹಕ್ಕೆ ಕಾಲಿಟ್ಟಿರುವುದು ಹೆಮ್ಮೆಯ ಸಂಗತಿ. ತಿಂಗಳಿಗೊಂದರಂತೆ ಲೆಕ್ಕ ಹಾಕಿದಲ್ಲಿ 25 ವರ್ಷಗಳಲ್ಲಿ 300 ದಾಸೋಹಗಳಾಗಬೇಕಿತ್ತು. ಅಂದರೆ ಸುಮಾರು 60 ಮಾಸಿಕ ದಾಸೋಹಗಳು ತಪ್ಪಿ ಹೋಗಿವೆ. ಇದಕ್ಕೆ ಕಾರಣ ಆರಂಭದ ದಿನಗಳಲ್ಲಿ ದಾಸೋಹಗಳು ಎರಡು ಮೂರು ತಿಂಗಳಿಗೊಮ್ಮೆ ನಡೆದದ್ದು. ಮೊದಲ 40 ದಾಸೋಹಗಳು ಶ್ರೀ ಪರಶುರಾಮಪ್ಪನವರ ನೇತೃತ್ವದಲ್ಲಿ ನಡೆದವು. 2008ರಲ್ಲಿ ಶ್ರೀ ಬಿ.ಎಸ್. ಚಂದ್ರಶೇಖರ್ ಅವರು ಸಾಹಿತ್ಯ ದಾಸೋಹದ ಸಂಚಾಲಕತ್ವವನ್ನು ವಹಿಸಿ ಕೊಂಡ ನಂತರ ತತವಾಗಿ 110 ದಾಸೋಹಗಳನ್ನು ನಡೆಸಿ ಮಾಸಿಕ ದಾಸೋಹದ ಕಾರ್ಯಕ್ರಮಕ್ಕೆ ಒಂದು ಸ್ಥಿರತೆ ಮತ್ತು ಬದ್ಧತೆಯನ್ನು ತಂದುಕೊಟ್ಟರು. 151ನೆಯ ದಾಸೋಹದಿಂದ ದಾಸೋಹದ ಸಂಚಾಲಕತ್ವವನ್ನು ಶ್ರೀ ಕೆ.ಎನ್.ಮಹಾಬಲ

ಅವರು ವಹಿಸಿಕೊಂಡು ಮುನ್ನಡೆಸುತ್ತಿದ್ದಾರೆ. ಇಂದು ಅವರ ಸಂಚಾಲಕತ್ವದಲ್ಲಿ ನಡೆಯುತ್ತಿರುವ 90ನೆಯ ಸಾಹಿತ್ಯ ದಾಸೋಹವಾಗಿದೆ. ಆರಂಭದ ಹತ್ತೊಂಬತ್ತು ವರ್ಷಗಳ ಕಾಲ ಅಂದರೆ 1999ರ ಆಗಸ್ಟ್ ತಿಂಗಳಿಂದ 2018ರ ಮಾರ್ಚ್ ವರೆಗಿನ ಸುಮಾರು 152 ದಾಸೋಹಗಳು ವಿವಿಧ ಸದಸ್ಯರ ಮನೆಗಳಲ್ಲಿ ನಡೆದುವು. 2018ರ ಏಪ್ರಿಲ್ ತಿಂಗಳಿನಲ್ಲಿ ಮೊದಲ ಬಾರಿಗೆ ಸಾಹಿತ್ಯ ದಾಸೋಹವು ಮನೆಯ ಕಾರ್ಯಕ್ರಮದ ಬದಲಾಗಿ ರಾಣಿ ಸರಳಾದೇವಿ ಶಾಲೆಗೆ ಸ್ಥಳಾಂತರಗೊಂಡಿತು. ಅಲ್ಲಿ ಕೆಲವು ತಿಂಗಳು ನಡೆದ ನಂತರ 2019ರಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಮುಂದುವರೆಯಿತು. ಕರೋನಾ ಕಾರಣದಿಂದ 2020ರ ಮಾರ್ಚಿ ತಿಂಗಳ ದಾಸೋಹವು ರದ್ದಾಯಿತು. ಮರು ತಿಂಗಳು ಅಂದರೆ ಏಪ್ರಿಲ್ 2020ರ ದಾಸೋಹವನ್ನು ಶ್ರೀ ಗುರುಪ್ರಸಾದ್ ಹಾಲ್ಕುರಿಕೆಯವರ ತಾಂತ್ರಿಕ ಜ್ಞಾನ ಮತ್ತು ಪ್ರೇರಣೆಯಿಂದ ದಾಸೋಹವನ್ನು ಮೊದಲ ಬಾರಿಗೆ 'ನೋಡಿಯೋ ಸಾಹಿತ್ಯ ದಾಸೋಹ' ವೇದಿಕೆಯಲ್ಲಿ ಅಂತರಜಾಲದ ಮೂಲಕ ನಡೆಸಲಾಯಿತು. ಇದು ದಾಸೋಹದಲ್ಲಿ ಪ್ರಸ್ತುತಪಡಿಸಲಾದ ಬರಹಗಳನ್ನು ಪಿಡಿಎಫ್ ರೂಪದಲ್ಲಿ ಪ್ರಕಟಿಸುವುದಕ್ಕೆ ನಾಂದಿಯಾಯಿತು. ಈಗ ಅಂತರಜಾಲದ ಮುಖೇನ ಕೇವಲ ದಾಸೋಹಗಳನ್ನು ಮಾತ್ರವಲ್ಲದೆ ಇತರ ಕಾರ್ಯಕ್ರಮಗಳೂ ನಡೆಯುತ್ತಿವೆ. ಇದು ಕಳೆದ ಇಪ್ಪತ್ತೈದು ವರ್ಷಗಳಲ್ಲಿ ನಮ್ಮ ಸಾಹಿತ್ಯ ದಾಸೋಹ ದಾಸೋಹವು ನಡೆದು ಬಂದ ದಾರಿಯ ಹಿನ್ನೋಟ.

- ವೇದಿಕೆಯ ಸಾಹಿತ್ಯ ಚಟುವಟಿಕೆಗಳ ಮಾಸಿಕ ಪಿಡಿಎಫ್ ತಯಾರಿಕೆಯನ್ನು 2020ರಲ್ಲಿ ಶ್ರೀ ಗುರುಪ್ರಸಾದ ಹಾಲ್ಕುರಿಕೆಯವರು ಸ್ವಯಂ ಪ್ರೇರಣೆಯಿಂದ ಆರಂಭಿಸಿದರು. ನಂತರ ಕೆಲವು ಸಂಚಿಕೆಗಳನ್ನು ಶ್ರೀ ಗುರುರಾಜ ಶಾಸ್ತ್ರಿ ಅವರು ಸಂಕಲಿಸಿದರು. ಈಗ ಸುಮಾರು ನಾಲ್ಕು ವರ್ಷಗಳಿಂದ ಸಂಚಿಕೆಯು ಶ್ರೀ ಶೃಂಗೇಶ್ವರ ಶರ್ಮ ಅವರಿಂದ ಕಳೆಕಳೆಯಾಗಿ ಯಾವುದೇ ಮಾಸಿಕ ಸಂಚಿಕೆಗಳಿಗೂ ಕಡಿಮೆ ಇಲ್ಲದಂತೆ ಮೂಡಿಬರುತ್ತಿದೆ. ಈ ಸಾಹಿತ್ಯ ಸಂಚಿಕೆಯನ್ನು ಸಿದ್ಧಪಡಿಸುತ್ತಿರುವ ಶ್ರೀ ಶೃಂಗೇಶ್ವರ ಶರ್ಮ ಅವರಿಗೂ, ಅವರಿಗೆ ಸಹಾಯ ನೀಡುತ್ತಿರುವ ಉಳಿದ ಎಲ್ಲಾ ಸದಸ್ಯರಿಗೂ ಅಭಿನಂದನೆಗಳು.

- ಕಳೆದ ತಿಂಗಳು ನಮ್ಮ ವೇದಿಕೆಯು ಸದಾ ಚಟುವಟಿಕೆಯಿಂದ ತುಂಬಿತ್ತು. ಡಾ.ಆರ್.ಕೆ.ಪದ್ಮನಾಭ ಅವರ ಕಾದಂಬರಿಗಳ ಬಗ್ಗೆ ವಿಚಾರ ಸಂಕಿರಣ ಮತ್ತು ಎಚ್ಚೆಸ್ಕೆ ದತ್ತಿ ಉಪನ್ಯಾಸ ಕಾರ್ಯಕ್ರಮಗಳು ನಡೆದವು. ವೇದಿಕೆಯು ಹಮ್ಮಿಕೊಂಡಿದ್ದ ಶ್ರಾವಣದ ಮಕ್ಕಳ ಕಥೆಗಳ ಅಭಿಯಾನದಲ್ಲಿ 60 ಸದಸ್ಯರು ಸುಮಾರು 900 ಕಥೆಗಳನ್ನು ಬರೆದು ದಾಖಲಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ಮೂರು ಮಧ್ಯಾವಧಿ ಸಂವಾದಗಳೂ ನಡೆದಿವೆ. ಶ್ರೀ ಗುರುರಾಜ ಶಾಸ್ತ್ರಿ ಹಾಗೂ ಶ್ರೀ ರಂಗರಾಜನ್ ಅವರು ಈ ಅಭಿಯಾನದ ನೇತೃತ್ವ ವಹಿಸಿಕೊಂಡು ಇದನ್ನು ಅತ್ಯಂತ ಯಶಸ್ವಿಯಾಗಿ ನಡೆಸಿದ್ದಾರೆ. ಕಳೆದ ಬಾರಿ ಪ್ರಕಟಿಸಿದ "ತುಂತುರು" ಸಣ್ಣ ಕಥಾ ಸಂಕಲನದ ರೀತಿಯಲ್ಲಿಯೇ, ಈ ಬಾರಿಯ ಅಭಿಯಾನದಲ್ಲಿ ಮೂಡಿಬಂದ ಕೆಲವು ಆಯ್ದ ಕತೆಗಳನ್ನೊಳಗೊಂಡ ಮಕ್ಕಳ ಕಥಾ ಸಂಕಲನವನ್ನೂ ಮುದ್ರಣ ರೂಪದಲ್ಲಿ ಹೊರತರುವ ಬಗ್ಗೆ ಯೋಚಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಎಲ್ಲರ ಸಹಕಾರ ಅಗತ್ಯ.

- ಕಳೆದ ನಾಲ್ಕು ವರ್ಷಗಳಿಂದ, ಪ್ರತಿ ಶ್ರಾವಣದಲ್ಲೂ ವಿವಿಧ ಅಭಿಯಾನವನ್ನು ಹಮ್ಮಿಕೊಳ್ಳಲಾಗುತ್ತಿದೆ. ಅಭಿಯಾನಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುವ ಕೆಲವು ಸದಸ್ಯರು ಅಭಿಯಾನದ ನಂತರ ಮತ್ತೆ ನಿರಂತರವಾಗಿ ಬರೆಯುವುದನ್ನು ನಿಲ್ಲಿಸಿಬಿಡುತ್ತಾರೆ. ಹಾಗಾಗಬಾರದು. ಸಾಹಿತ್ಯ ಕೃಷಿ ಕೇವಲ ಅಭಿಯಾನಕ್ಕೆ ಬರೆಯುವುದಷ್ಟಕ್ಕೇ ಸೀಮಿತವಾಗದೆ, ನಿರಂತರವಾಗಿ ನಡೆಯುತ್ತಿರಬೇಕು, ಸಾಹಿತ್ಯ ಚಟುವಟಿಕೆಗಳು ಸದಾ ಮುಂದುವರಿಯಬೇಕು ಎಂಬುದು ವೇದಿಕೆಯ ಆಶಯ.

ಶ್ರೀ ಬೆಂ.ಶ್ರೀ.ರವೀಂದ್ರ ಅವರ ಪ್ರಸ್ತಾವಿಕ ನುಡಿಗಳ ನಂತರ ಶ್ರೀ ಶೃಂಗೇಶ್ವರ ಶರ್ಮ ಅವರು 239ನೆಯ ಸಾಹಿತ್ಯ ದಾಸೋಹದ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಶ್ರೀ.ಕೆ.ಆರ್.ಎಸ್.ಮೂರ್ತಿ ಅವರ ಕೃಷ್ಣ–ರಾಧೆಯ ವರ್ಣ ಚಿತ್ರದ ಮುಖಪುಟ

ಹಾಗೂ ಅದಕ್ಕೆಂದೇ ಅವರು ಬರೆದ ಕವನದಿಂದ ಸಂಚಿಕೆಯು ಕಳೆಗಟ್ಟಿರುವುದನ್ನು ವಿವರಿಸಿದರು. ಈ ಬಾರಿಯ ಸಂಚಿಕೆಯು ನಾಲ್ಕು ಪ್ರಮುಖ ಕಾರ್ಯಕ್ರಮಗಳ ಚಿತ್ರಗಳ, ವರದಿಗಳು, ಲೇಖನಗಳು ಹಾಗೂ ವಿವರಗಳ ದಾಖಲೆಯಾಗಿದೆ ಎಂದರು.

ತದನಂತರ ದಾಸೋಹದಲ್ಲಿ ಲೇಖನಗಳನ್ನು ಪ್ರಸ್ತುತಪಡಿಸಲು ನೋಂದಾಯಿಸಿದ್ದ ವೇದಿಕೆಯ ಸದಸ್ಯರಿಂದ ಲೇಖನಗಳ ವಾಚನವು ಆರಂಭವಾಯಿತು. ಹದಿನೇಳು ಸದಸ್ಯರು ಪ್ರಸ್ತುತಿಗಾಗಿ ನೋಂದಾಯಿಸಿದ್ದು, ಹದಿನಾಲ್ಕು ಲೇಖಕರು ವಾಚಿಸಿದರು.

ಪ್ರಸ್ತುತಿಗಳು ಮುಗಿದ ನಂತರ ದಾಸೋಹದ ಅಧ್ಯಕ್ಷತೆ ವಹಿಸಿದ ಶ್ರೀಮತಿ ಪೂರ್ಣಿಮಾ ಭಗವಾನ್ ಅವರು ತಮ್ಮ ಅಧ್ಯಕ್ಷೀಯ ಅನಿಸಿಕೆಗಳನ್ನು ದಾಖಲಿಸುವುದಕ್ಕೂ ಮುನ್ನ ಉತ್ಸಾಹ ಲಯ ಚೌಪದಿಯಲ್ಲಿ ತಾವೇ ರಚಿಸಿದ "ಮಣಿ ಮಹೇಶ" ಎಂಬ ತಮ್ಮ ಪ್ರಸ್ತುತಿಯನ್ನು ವಾಚಿಸಿದರು. ನಂತರ 240ನೆಯ ಸಾಹಿತ್ಯ ದಾಸೋಹದ ಅಧ್ಯಕ್ಷತೆಯ ಅವಕಾಶ ನೀಡಿದುದಕ್ಕಾಗಿ ಸಂಚಾಲಕರಿಗೆ ನಮನಗಳನ್ನು ಸಲ್ಲಿಸುತ್ತಾ, 25 ವರ್ಷಗಳ ಸುದೀರ್ಘ ಇತಿಹಾಸವಿರುವ ಸಾಹಿತ್ಯ ದಾಸೋಹವನ್ನು ಮತ್ತೊಮ್ಮೆ ಪ್ರಸ್ತಾಪಿಸಿ, ಸಂಚಾಲಕರ ಶ್ರದ್ಧೆಗೆ ಕೃತಜ್ಞತೆಗಳನ್ನು ತಿಳಿಸಿದರು. ಎಲ್ಲ ಪ್ರಸ್ತುತಿಕರ್ತರ ಸಾಹಿತ್ಯ ಕೃಷಿಯ ಒಂದು ಪುಟ್ಟ ಪರಿಚಯದ ನೋಟ ನೀಡುವುದರೊಂದಿಗೆ ದಾಸೋಹದಲ್ಲಿ ಪ್ರಸ್ತುತವಾದ ಎಲ್ಲ ಬರಹಗಳನ್ನೂ ಅವಲೋಕಿಸಿದರು. ಅತ್ಯಂತ ಸಮಾಧಾನದ, ಬರಹಗಳ ಅಂತರಾಳದ ಮಹತ್ವ ಸಾರುವ ಮತ್ತು ಪ್ರತೀ ಬರಹಗಳ ಅರ್ಥ ವಿಶ್ಲೇಷಣೆಯನ್ನು ನೀಡಿ, ಅತ್ಯುತ್ತಮ ನುಡಿಗಳನ್ನು ದಾಖಲಿಸುವುದರ ಮೂಲಕ ಅಧ್ಯಕ್ಷೀಯ ಸ್ಥಾನಕ್ಕೆ ಅತ್ಯಂತ ನ್ಯಾಯಯುತವಾದ ಗೌರವ ತಂದುಕೊಟ್ಟರು.

ಶ್ರೀ ಕೆ.ಎನ್.ಮಹಾಬಲ ಅವರು ವಂದನೆಗಳನ್ನು ಸಲ್ಲಿಸುವುದರೊಂದಿಗೆ ಆಗಸ್ಟ್ ತಿಂಗಳ ನೋಡಿಯೋ ಸಾಹಿತ್ಯ ದಾಸೋಹವು ಸಮಾಪ್ತವಾಯಿತು.

ಸಾಹಿತ್ಯ ದಾಸೋಹದ ಸಂಚಾಲಕತ್ವ : ಶ್ರೀ ಕೆ.ಎನ್.ಮಹಾಬಲ
ಜಿ ಮೀಟ್ ಆತಿಥ್ಯ : ಶ್ರೀಮತಿ ರಾಧಿಕಾ.ವಿ. ಗುಜ್ಜರ್
ವಿಡಿಯೋ ಸಂಸ್ಕರಣೆ : ಶ್ರೀ.ಗುರುರಾಜ ಶಾಸ್ತ್ರಿ
ಪಿಡಿಎಫ್ ಆವೃತ್ತಿ ತಯಾರಕರು : ಶ್ರೀ ಶೃಂಗೇಶ್ವರ ಶರ್ಮ ಎಸ್.

ಸಾಹಿತ್ಯ ದಾಸೋಹ 240ರ ಸಂಪೂರ್ಣ ಕಾರ್ಯಕ್ರಮವು ವೇದಿಕೆಯ ಯುಟ್ಯೂಬ್ ಹಾಗೂ ಜಾಲತಾಣದಲ್ಲಿ ವೀಕ್ಷಣೆಗೆ ಲಭ್ಯವಿದೆ.

***

ತಿಂಗಳ ಬೆಳಕು - 18

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಶ್ರಾವಣ ಮಕ್ಕಳ ಕತೆ ರಚನಾ ಅಭಿಯಾನ
ಕತೆಗಾರ್ತಿಯ ಅನಿಸಿಕೆಗಳು – ಜಿ.ವಿ. ನಿರ್ಮಲ

ವರದಿ: ಹು.ವಾ. ಶ್ರೀಪ್ರಕಾಶ್

ತಿಂಗಳ ಬೆಳಕು ಸರಣಿಯ 18ನೆಯ ಕಾರ್ಯಕ್ರಮದ ಅಂಗವಾಗಿ ದಿನಾಂಕ 23ನೆಯ ಆಗಸ್ಟ್ 2025ರಂದು ಶನಿವಾರ ಸಂಜೆ 5.00 ಗಂಟೆಗೆ 'ಶ್ರಾವಣ ಮಕ್ಕಳ ಕಥೆ ರಚನಾ ಅಭಿಯಾನ'ದಲ್ಲಿ ಮೂಡಿಬಂದ ಕತೆಗಳ ಬಗ್ಗೆ ಅಂತರ್ಜಾಲ–ಗೂಗಲ್ ಮೀಟ್ ಮುಖೇನ ಸಂವಾದವನ್ನು ಏರ್ಪಡಿಸಲಾಗಿತ್ತು



ಆರಂಭದಲ್ಲಿ ಶ್ರೀಮತಿ ರೇಣುಕಾ ದೇಸಾಯಿಯವರು ಮಾತನಾಡಿ, ಪ್ರಸಕ್ತ ವಿಶ್ವಾವಸು ಸಂವತ್ಸರದ ಶ್ರಾವಣ ಮಾಸದಲ್ಲಿ (ಜುಲೈ–ಆಗಸ್ಟ್ 2025) ವೇದಿಕೆಯು ಹಮ್ಮಿಕೊಂಡ ಮಕ್ಕಳ ಕಥಾ ರಚನೆ ಅಭಿಯಾನ ಹಾಗೂ ತಿಂಗಳ ಬೆಳಕು ಕಾರ್ಯಕ್ರಮದ ರೂಪುರೇಷೆಗಳನ್ನು ವಿವರಿಸಿದರು. ಅಭಿಯಾನದಲ್ಲಿ ಪ್ರಸ್ತುತಪಡಿಸಿದ ಕತೆಗಳ ಬಗ್ಗೆ ಈಗಾಗಲೇ ಶ್ರೀಮತಿ ಸರಸ್ವತಿ ನಟರಾಜ್ ಹಾಗೂ ಶ್ರೀಮತಿ ಶಾಂತಿ ವಾಸು ಅವರ ನೇತೃತ್ವದಲ್ಲಿ ಎರಡು ಮಧ್ಯಾವಧಿ ಸಂವಾದಗಳನ್ನು ಏರ್ಪಡಿಸಲಾಗಿದ್ದು, ಇಂದಿನದು ಈ ನಿಟ್ಟಿನಲ್ಲಿ ಮೂರನೆಯ ಕಾರ್ಯಕ್ರಮ ಎಂದರು.

ಶ್ರೀ ಗುರುರಾಜ ಶಾಸ್ತ್ರಿಯವರು, ಕಾರ್ಯಕ್ರಮದ ಮುಖ್ಯ ಉಪನ್ಯಾಸಕರಾದ ಶ್ರೀಮತಿ ಜಿ.ವಿ. ನಿರ್ಮಲ ಅವರನ್ನು ಹಾಗೂ ಸಂವಾದದಲ್ಲಿ ಮಕ್ಕಳ ಕಥಾರಚನೆಯ ಬಗ್ಗೆ ತಮ್ಮ ಅನುಭವಗಳನ್ನು ಹಂಚಿಕೊಳ್ಳಲಿರುವ ಶ್ರೀ ಕೆ.ಆರ್.ಎಸ್. ಮೂರ್ತಿ, ಶ್ರೀಮತಿ ಗಾಯತ್ರಿ ಮೂರ್ತಿ, ಶ್ರೀಮತಿ ಅನಿತಾ ಪೈ ಮತ್ತು ಶ್ರೀ ಬಿ.ಎಸ್.ಶ್ರೀನಿವಾಸ್ ಮತ್ತು ಸಭಿಕರನ್ನು ಸ್ವಾಗತಿಸಿದರು.

ಶ್ರೀ ಕೆ.ಆರ್.ಎಸ್.ಮೂರ್ತಿಯವರು ಮಾತನಾಡಿ, ಮಕ್ಕಳ ಕಥೆಗಳಲ್ಲಿ ಎರಡು ವಿಧಗಳಿವೆ. 1. ಮಕ್ಕಳಿಗೆ ಹೇಳಬಹುದಾದಂತಹ ಕತೆಗಳು. ಇವುಗಳಲ್ಲಿ ಕಥಾವಸ್ತು ವಿಸ್ತಾರವಾಗಿದ್ದು, ಅದರಲ್ಲಿ ನೈಜತೆ, ಸ್ವಲ್ಪಮಟ್ಟಿಗೆ ಫ್ಯಾಂಟಸಿ ಇರುತ್ತದೆ. 2. ಮಕ್ಕಳ ಪ್ರಪಂಚದಲ್ಲೇ ನಡೆಯಬಹುದಾದಂತಹ ಘಟನೆಗಳಾಗಿದ್ದು, ಈ ಕತೆಗಳಲ್ಲಿ ಬೆರಗುಹುಟ್ಟಿಸುವ ಸಂಗತಿಗಳು, ಹಾಸ್ಯಮಯ ವಿಚಾರಗಳು, ನಿಜ ಜೀವನದ ಘಟನೆಗಳು ಇರಬಹುದು. ಮಕ್ಕಳ ಕತೆಗಳು ತಿಳಿವಳಿಕೆ ಮೂಡಿಸುವ ಹಾಗೂ ಆಸಕ್ತಿದಾಯಕವಾದ ವಿಷಯಗಳನ್ನು ಹೊಂದಿದ್ದು, ಸರಳ ಭಾಷೆಯಲ್ಲಿರಬೇಕು, ಮಕ್ಕಳ ಯೋಚನೆಗೆ ನಿಲುಕುವಂತಹ ಪಾತ್ರಗಳನ್ನು ಸೃಷ್ಟಿಸುವುದು ಅಗತ್ಯ. ಎಲ್ಲಕ್ಕಿಂತ ಮುಖ್ಯವಾಗಿ ಮಕ್ಕಳ ಕತೆಯು ಉತ್ತಮ ಸಂದೇಶಗಳನ್ನು ನೀಡುವ, ಕಲ್ಪನಾಶಕ್ತಿ ಮತ್ತು ನೈತಿಕ ಮೌಲ್ಯಗಳನ್ನು ವಿಸ್ತರಿಸುವಂತಿರಬೇಕು ಎಂದರಲ್ಲದೆ, ತಾನು ಬರೆದ 18 ಕತೆಗಳ ಪೈಕಿ ಆಯ್ದ ಮೂರು ಕತೆಗಳಲ್ಲಿನ ವಸ್ತು ಮತ್ತು ಮುಖ್ಯ ಸಂದೇಶಗಳನ್ನು ವಿವರಿಸಿದರು.

ಶ್ರೀ ಬಿ.ಎಸ್. ಶ್ರೀನಿವಾಸ್ ಅವರು ತಮ್ಮ ಅನಾರೋಗ್ಯದ ನಡುವೆಯೂ ಸಾಕಷ್ಟು ಶ್ರಮವಹಿಸಿ ದಿನಕ್ಕೊಂದರಂತೆ ಎಲ್ಲಾ 29 ದಿನಗಳೂ ಕತೆಗಳನ್ನು ಪ್ರಸ್ತುತಪಡಿಸಿದ ಅನುಭವವನ್ನು ತಿಳಿಸಿದರು.

ಶ್ರೀಮತಿ ಅನಿತಾ ಪೈಯವರು ಮಾತನಾಡಿ, ಲಲಿತ ಪ್ರಬಂಧಗಳಿಗಷ್ಟೇ ಸೀಮಿತವಾಗಿದ್ದ ನನ್ನ ಬರಹಗಳು ಕಥಾ ರಚನೆಯತ್ತ ತಿರುಗಲು ಈ ವೇದಿಕೆಯ ಮಕ್ಕಳ ಕಥಾರಚನೆ ಅಭಿಯಾನವೇ ಕಾರಣ. ಮಕ್ಕಳಿಗೆ ಯಾವ ತರಹದ ಕತೆಗಳು ಇಷ್ಟವಾಗಬಹುದು ಎಂದು ಊಹಿಸುವುದೇ ಕಷ್ಟ. ನಾವೆಲ್ಲ ಚಂದಮಾಮವನ್ನು ಓದಿ ಬೆಳೆದವರು. ಆದರೆ ಇಂದಿನ ಮಕ್ಕಳು ಚಂದಮಾಮದಂತಹ ಕತೆಗಳನ್ನು ಒಪ್ಪುವ ಸಾಧ್ಯತೆ ಕಡಿಮೆ. ಇಂದಿನ ಮಕ್ಕಳ ವಿಚಾರಸರಣಿಗೆ ಹೊಂದಿಕೊಳ್ಳುವಂತಹ ಕತೆಗಳನ್ನು ಬರೆಯುವುದು ಹೇಗೆ ಎಂಬುದೇ ಸವಾಲಾಗಿತ್ತು. ಆದರೂ ದಿನಕ್ಕೊಂದರಂತೆ 30 ಮಕ್ಕಳ ಕತೆಗಳನ್ನು ಬರೆಯುವ ಸೌಭಾಗ್ಯ ನನ್ನದಾಯಿತು ಎಂದು ವಿವರಿಸಿ, ಈ ಅವಕಾಶವನ್ನು ಕಲ್ಪಿಸಿದ ವೇದಿಕೆಗೆ ವಂದಿಸಿದರು.

ಶ್ರೀಮತಿ ಗಾಯತ್ರಿ ಮೂರ್ತಿಯವರು ಮಾತನಾಡಿ, ಹಲವು ದಶಕಗಳ ಹಿಂದೆ ನಾನು ಸಾಹಿತ್ಯ ರಚನೆ ಶುರುಮಾಡಿದ್ದೇ ಮಕ್ಕಳ ಕಥಾರಚನೆಯಿಂದ. ನನ್ನ ಮೊದಲ ಮಕ್ಕಳ ಕತೆ ಸುಧಾ ವಾರಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಮಕ್ಕಳಿಗಾಗಿ ವೈಜ್ಞಾನಿಕ ಕತೆಗಳನ್ನು ಬರೆಯುವುದು ನನಗೆ ಇಷ್ಟ. ಮೂಲತಃ ಭೌತವಿಜ್ಞಾನದ ಪ್ರಾಧ್ಯಾಪಕಿಯಾದ ನಾನು ಮಕ್ಕಳಿಗೆ ವಿಜ್ಞಾನವನ್ನು ಸರಳವಾಗಿ ಪರಿಚಯಿಸುವಂತಹ ಐದು ಪುಸ್ತಕಗಳನ್ನು ರಚಿಸಿದ್ದು. ಈ ಮಕ್ಕಳ ಕಥಾ ಅಭಿಯಾನದಲ್ಲಿ ಪ್ರಸ್ತುತಪಡಿಸಿದ 30 ಕತೆಗಳ ಪೈಕಿ 18 ವೈಜ್ಞಾನಿಕ ಕತೆಗಳೇ ಆಗಿವೆ ಎಂದರು. ಅಭಿಯಾನದಲ್ಲಿ ಒಟ್ಟಾರೆಯಾಗಿ ಮೂಡಿಬಂದ ವಿವಿಧ ಲೇಖಕರ ಕತೆಗಳನ್ನು ಸಂಕ್ಷಿಪ್ತವಾಗಿ ಪ್ರಸ್ತಾಪಿಸಿದ ಅವರು, ಹೆಚ್ಚಿನ ಕತೆಗಳು 10 ವರ್ಷಕ್ಕೂ ಮೇಲ್ಪಟ್ಟ ಮಕ್ಕಳನ್ನು ಉದ್ದೇಶಿಸಿ ಬರೆದಂತಿದೆ. 5ರಿಂದ 10 ವರ್ಷದ ಮಕ್ಕಳು ಓದುವಂತಹ ಕತೆಗಳೂ ಮೂಡಿಬರಬಹುದಿತ್ತು. ಒಂದೆರಡು ಕತೆಗಳು ಕ್ರೌರ್ಯ ಹಾಗೂ ಭಯಾನಕ ಅಂಶಗಳಿಂದ ತುಂಬಿದ್ದು, ಮಕ್ಕಳ ದೃಷ್ಟಿಕೋನಕ್ಕೆ ಅನುಗುಣವಾಗಿರಲಿಲ್ಲ ಎಂದು ವಿಶ್ಲೇಷಿಸಿದರು. ಒಟ್ಟಾರೆ ಅಭಿಯಾನದ ಉದ್ದೇಶ ಸಫಲವಾಗಿದ್ದು, ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಸುರಿಮಳೆಯನ್ನೇ ಸುರಿಸಿದೆ ಎಂದರು.

ಮುಖ್ಯ ಭಾಷಣಕಾರರಾದ ಶ್ರೀಮತಿ ಜಿ.ವಿ.ನಿರ್ಮಲ ಅವರು ಅಭಿಯಾನದಲ್ಲಿ ರಚಿತವಾದ ಒಟ್ಟು ಕತೆಗಳನ್ನು ಕಾಲ್ಪನಿಕ ಕಥೆಗಳು, ಸಾಮಾಜಿಕ ಕಥೆಗಳು, ನೀತಿ ಕಥೆಗಳು, ಪ್ರವಾಸದ ಕಥೆಗಳು, ದಂತಕಥೆಗಳು ಮತ್ತು ವೈಜ್ಞಾನಿಕ ಕಥೆಗಳು ಎಂದು ಆರು ಭಾಗಗಳಾಗಿ ವರ್ಗೀಕರಿಸಿ, ಪ್ರತಿಯೊಂದು ವರ್ಗದ ಕತೆಗಳ ಬಗೆಗೂ ತಮ್ಮ ಅನಿಸಿಕೆಗಳನ್ನು ತಿಳಿಸಿದರು. ಕತೆಗಳಲ್ಲಿ ಬಳಸುವ ಕನ್ನಡ ಭಾಷೆಯು ಮಕ್ಕಳಿಗೆ ಮಾದರಿಯಾಗಬೇಕು, ಅಕಾರ-ಹಕಾರ ಹಾಗೂ ಅಲ್ಪಪ್ರಾಣ-ಮಹಾಪ್ರಾಣಗಳ ಸರಿಯಾದ ಪ್ರಯೋಗ ಕೇವಲ ಬರವಣಿಗೆಗೆ ಸೀಮಿತವಾಗದೆ ಉಚ್ಚಾರಣೆಯಲ್ಲೂ ಇರುವುದು ಅಗತ್ಯವೆಂದು ತಿಳಿಸಿದರು. ನಿರ್ಮಲರವರು ತಮ್ಮ ಸಂಪೂರ್ಣ ಉಪನ್ಯಾಸವನ್ನು ಲೇಖನ ರೂಪದಲ್ಲಿ ದಾಖಲಿಸಿದ್ದು, ಅದನ್ನು ಮುಂದಿನ ಪುಟದಲ್ಲಿ ಪ್ರಕಟಿಸಲಾಗಿದೆ.

ಅಭಿಯಾನದ ಸಂಚಾಲಕರಾದ ಶ್ರೀ ಶ್ರೀರಂಗರಾಜನ್ ಮಾತನಾಡಿ, ನಮ್ಮ ವೇದಿಕೆಯು ಮಕ್ಕಳ ಕತೆ ರಚನೆ ಮಾತ್ರವಲ್ಲದೆ, ಇತರ ಹಲವು ಅಭಿಯಾನಗಳನ್ನೂ ನಡೆಸಿದ್ದು, ಎಲ್ಲವೂ ಯಶಸ್ವಿಯಾಗಲು ಸದಸ್ಯರ ಉತ್ಸಾಹ ಮತ್ತು ಸಕಾರಾತ್ಮಕ ಸ್ಪಂದನೆಯೇ ಕಾರಣ. ಕೆಲವರು ರಾತ್ರಿ 12 ಗಂಟೆ ಆಗುವುದನ್ನೇ ಕಾಯುತ್ತಿದ್ದರು. ಪ್ರತಿದಿನ ರಾತ್ರಿ 12 ಆಗುತ್ತಿದ್ದಂತೆಯೇ 8–10 ಕತೆಗಳು ಪ್ರಕಟವಾಗುತ್ತಿದ್ದವು. ಈವರೆಗೆ 61 ಕತೆಗಾರರು ಒಟ್ಟು 960 ಕತೆಗಳನ್ನು ಪ್ರಸ್ತುತಪಡಿಸಿದ್ದಾರೆ. ಈ ಪೈಕಿ ಆಯ್ದ ಕತೆಗಳ ಸಂಕಲನವನ್ನು ಪ್ರಕಟಿಸುವ ಉದ್ದೇಶವಿದ್ದು, ಅವುಗಳ ವಿವರಗಳನ್ನು ಕ್ರಮೇಣ ತಿಳಿಸಲಾಗುವುದು ಎಂದು ಹೇಳಿ, ಈ ಮಕ್ಕಳ ಕಥಾ ಅಭಿಯಾನದಲ್ಲಿ ಕೈಜೋಡಿಸಿದ ಎಲ್ಲರಿಗೂ ಸಂಚಾಲಕ ಸಮಿತಿಯ ಪರವಾಗಿ ವಂದನೆಗಳನ್ನು ಸಲ್ಲಿಸಿದರು.

ಮುಖ್ಯ ಸಂಚಾಲಕರಾದ ಶ್ರೀ ಬೆಂ.ಶ್ರೀ.ರವೀಂದ್ರ ಅವರು ಮಾತನಾಡಿ, ಇಂದಿನ ದಿನಗಳಲ್ಲಿ ಮಕ್ಕಳ ಬೌದ್ಧಿಕ ಬೆಳವಣಿಗೆ ಮತ್ತು ಮಕ್ಕಳ ಸಾಹಿತ್ಯವನ್ನು ಕುರಿತ ಅನೇಕ ವಿಷಯಗಳನ್ನು ಪ್ರಸ್ತಾಪಿಸಿ, ಇತ್ತೀಚೆಗೆ ಮಕ್ಕಳಿಗಾಗಿ ಬರೆಯುವವರ ಸಂಖ್ಯೆ ಹಾಗೂ ವಿವಿಧ ಪತ್ರಿಕೆಗಳಲ್ಲಿ ಮಕ್ಕಳ ಸಾಹಿತ್ಯ ಪ್ರಕಟಣೆ ಕಡಿಮೆಯಾಗುತ್ತಿರುವುದಕ್ಕೆ ವಿಷಾದಿಸಿ, ಮಕ್ಕಳ ಸಾಹಿತ್ಯಕ್ಕೆ ಹೆಚ್ಚು ಪ್ರೋತ್ಸಾಹ ನೀಡುವ ಅಗತ್ಯತೆಯನ್ನು ವಿವರಿಸಿದರು.

'ತಿಂಗಳ ಬೆಳಕು' ಸಂಚಾಲಕರಾದ ಶ್ರೀ ರವಿ ಕುಸಬಿಯವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

***

ಶ್ರಾವಣ ಮಾಸದ ಮಕ್ಕಳ ಕಥಾ ಅಭಿಯಾನ

ತಿಂಗಳ ಬೆಳಕು-18 – ಸಂವಾದ ಕಾರ್ಯಕ್ರಮ

ಅಭಿಯಾನದಲ್ಲಿ ಮೂಡಿಬಂದ ಕತೆಗಳ ಬಗ್ಗೆ ಅನಿಸಿಕೆಗಳು

– ಜಿ.ವಿ. ನಿರ್ಮಲ

ಸಾವಿರಕ್ಕೂ ಮೇಲ್ಪಟ್ಟು ಕಥೆಗಳ ಪ್ರವಾಹವೇ ಹರಿದುಬಂದ ಅಭಿಯಾನದ ಯಶಸ್ಸಿಗೆ ಮೊತ್ತಮೊದಲು ವೇದಿಕೆಯ ಕಥೆಗಾರರೆಲ್ಲರಿಗೂ ಅಭಿನಂದಿಸಬೇಕಾದುದು ನನ್ನ ಕರ್ತವ್ಯ. ಇಂತಹ ಸವಾಲನ್ನು ಬರೆಹಗಾರರ ಮುಂದಿಟ್ಟ ಪ್ರಧಾನ ಸಂಚಾಲಕರಾದ ಶ್ರೀ ರವೀಂದ್ರರವರಿಗೆ, ಅಭಿಯಾನದ ಯಶಸ್ಸಿಗೆ ಕಾರಣರಾದ ಶ್ರೀ ಶ್ರೀರಂಗರಾಜನ್ ಮತ್ತು ಶ್ರೀ ಗುರುರಾಜ ಶಾಸ್ತ್ರಿಯವರಿಗೂ ಹೃತ್ಪೂರ್ವಕ ಅಭಿನಂದನೆಗಳು.

ಮೊದಲೆರಡು ಮಧ್ಯಾವಧಿ ಸಂವಾದಗಳ ಮುಖ್ಯ ಭಾಷಣವನ್ನು ಬಹಳ ಶ್ರದ್ಧೆಯಿಂದ ನಿಭಾಯಿಸಿರುವ ಶ್ರೀಮತಿ. ಸರಸ್ವತಿ ನಟರಾಜ್ ಮತ್ತು ಶ್ರೀಮತಿ ಶಾಂತಿ ವಾಸುರವರಿಗೂ ನಮನಗಳು. ಅನಿಸಿಕೆಗಳನ್ನು ಹಂಚಿಕೊಂಡ ಮತ್ತೆಲ್ಲಾ ಸದಸ್ಯರೂ ದಾರಿ ದೀಪದಂತೆ ಎಲ್ಲರಿಗೂ ಮಾರ್ಗದರ್ಶನ ನೀಡಿದ್ದಾರೆ. ಅವರಿಗೂ ವಂದನೆಗಳು.

ಹಲವಾರು ಸದಸ್ಯರು ಪ್ರತಿನಿತ್ಯ ಎಲ್ಲರ ಕಥೆಗಳನ್ನೂ ಓದಿ ಪ್ರತಿಕ್ರಿಯೆ ನೀಡುತ್ತಿದ್ದರು. ಅವರಿಗೂ ಕೃತಜ್ಞತೆಗಳು. ಮತ್ತೆ ಕೆಲವರು ಕೆಲವು ಸಾಲುಗಳಲ್ಲಿ ಪ್ರತಿಕ್ರಿಯೆ ಬರೆದು ಸೂಚಿಸುತ್ತಿದ್ದರು. ಇವರಲ್ಲಿ ನನ್ನ ನೆನಪಿಗೆ ಬರುವುದು ಶ್ರೀಯುತ ಇಜೇರಿಯವರು. ಅವರ ಪ್ರತಿಕ್ರಿಯೆಗಾಗಿ ನಾನೂ ಕಾಯುತ್ತಿದ್ದೆ ಎಂದು ಒಪ್ಪಿಕೊಳ್ಳುತ್ತೇನೆ. ಮತ್ತೆ ಕೆಲವರು ವೈಯಕ್ತಿಕವಾಗಿಯೂ ತಮ್ಮ ಮೆಚ್ಚುಗೆಯನ್ನು ತಲುಪಿಸುತ್ತಿದ್ದರು. ಹೇಗಾದರೂ ಮಕ್ಕಳ ಮನಸ್ಸನ್ನು ಅರಿತು ಬಾಲ ಸಾಹಿತ್ಯವನ್ನು ಬೆಳಸುವಲ್ಲಿ ಮಹಿಳೆಯರ ಪಾತ್ರ ಹೆಚ್ಚು ಎನ್ನುವುದನ್ನು ನಾನು ಒಪ್ಪುತ್ತೇನೆ. ಬಹಳಷ್ಟು ಪುರುಷರೂ ಕನ್ನಡದಲ್ಲಿ ಬಾಲಸಾಹಿತ್ಯ ಸೃಷ್ಟಿಸಿರುವುದನ್ನೂ ಕಾಣಬಹುದು. ಈ ನಿಟ್ಟಿನಲ್ಲಿ ಶ್ರೀ ಮಹಾಬಲರವರು ಮಕ್ಕಳ ಸಾಹಿತಿಗಳ ಬಗ್ಗೆ ಹಂಚಿಕೊಂಡಿರುವ ವಿಚಾರಗಳು ಮೌಲ್ಯಯುತವಾದದ್ದು. ಒಟ್ಟಿನಲ್ಲಿ ಕಥೆಗಳ ಜಾತ್ರೆಯಲ್ಲಿ ನಾವು ಕಳೆದೇ ಹೋಗಿದ್ದೆವು. ಇದೊಂದು ಅಪೂರ್ವ ಅವಕಾಶ ಮತ್ತು ಅನುಭವ.

ಆದರೆ ಕೊನೆಯ ಹಂತದಲ್ಲಿ ಈ ಸಂವಾದ ಕಾರ್ಯಕ್ರಮದ ಅಧ್ಯಕ್ಷತೆಗೆ ನನ್ನನ್ನು ಆಯ್ಕೆ ಮಾಡಿರುವುದು ಸರಿಯೇ ಎನ್ನುವ ಪ್ರಶ್ನೆ ನನ್ನನ್ನು ಬಹುವಾಗಿ ಕಾಡಿದೆ. "ಎಲ್ಲಾ ಜಾಣ ತುಸ ಕೋಣ" ಎನ್ನುವ ಗಾದೆ ನೆನಪಾಗ್ತಾ ಇದೆ. ನಾನು ದೊಡ್ಡ ಕಥೆಗಾರ್ತಿಯಲ್ಲ. ಬಹಳಷ್ಟು ತಿಳಿದ ಕಥೆಗಾರರೊಬ್ಬರನ್ನು ಆಯ್ಕೆ ಮಾಡಿದ್ದರೆ ಒಳ್ಳೆಯದಿತ್ತು. ಅಲ್ಲದೆ ನನಗೆ ಮಕ್ಕಳ ಮಾನಸಿಕ ಮಟ್ಟವನ್ನು ತಿಳಿಯುವುದು ಕಷ್ಟಸಾಧ್ಯ. ನನ್ನ ವೃತ್ತಿಯಾಗಲೀ, ಸಂಸಾರದ ವಾತಾವರಣವಾಗಲೀ ಇದಕ್ಕೆ ಅನುಕೂಲವಾಗಿಲ್ಲ. ಸರಿಯಾಗಿ ಹೇಳುವುದಾದರೆ 'ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಗಿದೆ" ನನ್ನ ಪರಿಸ್ಥಿತಿ. ಹೇಗೋ ಒಪ್ಪಿಕೊಂಡ ಕೆಲಸವನ್ನು ಕೈಲಾದಷ್ಟು ಮಾಡುವ ಭರವಸೆಯಲ್ಲಿ ನನ್ನ ಅನಿಸಿಕೆಗಳನ್ನು ಹಂಚಿಕೊಳ್ಳುತ್ತೀನಿ.

ವಿಶ್ವಾವಸು ಸಂವತ್ಸರದ ಶ್ರಾವಣ ಮಾಸದಲ್ಲಿ ಕಂಡುಬಂದ ಕಥೆಗಳನ್ನು ಕೆಳಗಿನಂತೆ ವರ್ಗೀಕರಿಸಬಹುದೆಂದು ನನ್ನ ಅನಿಸಿಕೆ.

1. ಕಾಲ್ಪನಿಕ ಕಥೆಗಳು
2. ಸಾಮಾಜಿಕ ಕಥೆಗಳು
3. ನೀತಿ ಕಥೆಗಳು
4. ಪ್ರವಾಸದ ಕಥೆಗಳು
5. ದಂತಕಥೆಗಳು
6. ವೈಜ್ಞಾನಿಕ ಕಥೆಗಳು

ಪೌರಾಣಿಕ, ಜಾನಪದ ಕಥೆಗಳನ್ನೂ, ಪಂಚತಂತ್ರದ ಕಥೆಗಳನ್ನೂ ಪ್ರಸ್ತುತಪಡಿಸಬಾರದೆನ್ನುವ ವಿಷಯವನ್ನು ಈಗಾಗಲೇ ಸಂಚಾಲಕರು ಖಡಕ್ಕಾಗಿ ತಿಳಿಸಿರುವುದನ್ನೂ ಇಲ್ಲಿ ನೆನಪು ಮಾಡುತ್ತೇನೆ.

- **ಕಾಲ್ಪನಿಕ ಕಥೆಗಳು:** ಮೊದಲಿಗೆ ಕಾಲ್ಪನಿಕ ಕಥೆಗಳತ್ತ ನೋಡೋಣ. ಸಾಕಷ್ಟು ಜನ ಈ ವರ್ಗದ ಕಥೆಗಳನ್ನು ಪ್ರಸ್ತುತಪಡಿಸಿದ್ದಾರೆ. ಇವು ಮಕ್ಕಳಿಗೆ ಬಹಳ ಇಷ್ಟವಾಗುವಂತಿರುತ್ತವೆ. ಕಲ್ಪನೆಯೇ ಇಂತಹ ಕಥೆಗಳ ಬೆನ್ನೆಲಬು. ಕಥನಕಾರರು ತಮ್ಮ ಮನಸ್ಸಿಗೆ ಬಂದದನ್ನು ಕಥೆಯಾಗಿಸಿ ಮಕ್ಕಳ ಮುಂದಿಡಬಹುದು. ನಮಗೆ ಹೆಚ್ಚು ತಿಳಿದಿರುವ ಭಾಷೆಯಾದ ಇಂಗ್ಲೀಷಿನ 'Famous five' ರಚನೆ ಎನಿಡ್ ಬ್ಲೈಟನ್ ಮತ್ತು ಹ್ಯಾರಿ ಪಾಟರ್ ಮುಂತಾದ ಕಥೆಗಳೂ ಇದೇ ಹಂದರದಲ್ಲಿ ಬರುತ್ತವೆ. ಆದರೆ ಈಗಿನ ಮಕ್ಕಳು ಬಹಳ ಜಾಣರು. ಸಿಕ್ಕಾಪಟ್ಟೆ, ನಂಬಲಾರದಂತಹ ವಿಷಯಗಳನ್ನು ಮಕ್ಕಳು ಒಪ್ಪುವುದಿಲ್ಲ. ಇಲ್ಲಿನ ಕಥೆಗಾರರೊಬ್ಬರು (ಶ್ರವಣಕುಮಾರಿಯವರೆಂದು ನೆನಪು) ಕಥೆಯಲ್ಲಿಯೇ ಹೇಳಿರುವಂತೆ ಗಣೇಶನ ಮುಖಕ್ಕೆ ಆನೆಯನ್ನು ಕೊಂದು, ಅದರ ಮುಖವನ್ನು ಜೋಡಿಸುವ ಬದಲು ಕತ್ತರಿಸಿದ್ದ ಮುಖವನ್ನೇ ಹಾಕಬಹುದಿತ್ತಲ್ಲ ಎಂದು ಒಂದು ಮಗು ಪ್ರಶ್ನಿಸುತ್ತದೆ. ಹೌದಲ್ಲಾ ಎಂದು ಕಥೆ ಕಟ್ಟುವವರಿಗೂ ಅನ್ನಿಸುತ್ತದೆ. ಸಾಕಷ್ಟು ಜನ ಪಕ್ಷಿಪ್ರಾಣಿಗಳೊಂದಿಗೂ, ಮರಗಿಡಗಳೊಂದಿಗೂ ಮಾತಾಡಿ ಗೆದ್ದಿದ್ದಾರೆ. ನಮ್ಮ ಲೋಕದಲ್ಲಿ ಇದುವರೆವಿಗೂ ಮರಗಿಡಗಳು, ಪ್ರಾಣಿಪಕ್ಷಿಗಳೂ ಮಾತಾಡಿವೆಯೇ? ದೆವ್ವ ಭೂತವೆನ್ನುವುದೂ ಕಲ್ಪನೆಗೆ ಒಳಪಡುತ್ತವೆ. ಒಟ್ಟಿನಲ್ಲಿ ಕಲ್ಪನಾ ಲೋಕವೇ ಚಿಕ್ಕ ಮಕ್ಕಳ ವಯಸ್ಸಿಗೆ ಚೆಂದ. ಮಕ್ಕಳು ಮಕ್ಕಳಂತಿರುವಷ್ಟು ಕಾಲವೂ ಅವರನ್ನು ಕಲ್ಪನಾ ಲೋಕದಲ್ಲಿ ವಿಹರಿಸಲು ಬಿಟ್ಟರೆ ಅದಕ್ಕಿಂತಲೂ ಮಿಗಿಲಾದ ಆನಂದ ಮತ್ತೇನು? ಮಕ್ಕಳ ಮುಗ್ಧತನ, ತೊದಲು ಮಾತುಗಳೇ ಕಥೆಗಳ ಜೀವಾಳ.

- **ಸಾಮಾಜಿಕ ಕಥೆಗಳು:** ಸಾಮಾಜಿಕ ಕಥೆಗಳ ಹಂದರದಲ್ಲಿ ಮುಖ್ಯವಾಗಿ ಅಪ್ಪ-ಅಮ್ಮ, ಅಜ್ಜಿ-ತಾತ, ಮಾವ-ಅತ್ತೆ, ಶಿಕ್ಷಕರು ಹೀಗೆ ಹಲವಾರು ಜನರ ಪಾತ್ರಗಳು ಕಥೆಗೆ ಪೂರಕವಾಗುತ್ತವೆ. ಅವರೊಂದಿಗೆ ಮಕ್ಕಳ ವರ್ತನೆಗಳ ಬಗ್ಗೆ ಕಥೆಗಳನ್ನು ಕಟ್ಟುವವರು ಗೆಲ್ಲುತ್ತಾರೆ. ವ್ಯಕ್ತಿಗಳ ಸಂಬಂಧಗಳ ಬಗ್ಗೆಯೂ ಮಕ್ಕಳಿಗೆ ಹಲವಾರು ವಿಷಯಗಳನ್ನು ತಿಳಿಸಿಕೊಡುವ ಸಂದರ್ಭಗಳು ಒದಗುತ್ತವೆ. ಅಣ್ಣ, ಅಕ್ಕ, ತಮ್ಮ, ತಂಗಿ, ಮಾವ-ಅತ್ತೆ, ಚಿಕ್ಕಪ್ಪ-ಚಿಕ್ಕಮ್ಮ – ಹೀಗೆ ಹಲವಾರು ಪಾತ್ರಗಳ ಮೂಲಕ ಮಾಹಿತಿಯುಕ್ತ ಕಥೆಗಳನ್ನು ಕಟ್ಟಬಹುದು. ನಮ್ಮ ಸಮಾಜದಲ್ಲಿ ಸುತ್ತಮುತ್ತಲಿರುವವರ ಜೊತೆ ವರ್ತಿಸುವ ರೀತಿ-ನೀತಿಗಳನ್ನೂ ಕಥೆಗಳ ಮೂಲಕ ತಿಳಿಸಿದಾಗ ಮಕ್ಕಳು ತಮಗೇ ಅರಿವಿಲ್ಲದಂತೆ ಅನೇಕ ವಿಷಯಗಳನ್ನು ಕಲಿತು, ರೂಢಿಸಿಕೊಳ್ಳುತ್ತಾರೆ. ಮಕ್ಕಳು ಹಿರಿಯರು ಮಾಡಿದಂತೆ ಮಾಡುತ್ತಾರೆಯೇ ಹೊರತು ಹೇಳಿದಂತೆ ಖಂಡಿತ ಮಾಡುವುದಿಲ್ಲ. ಹಿರಿಯರೇ ಸದಾಕಾಲ ಮೊಬೈಲ್‌ನಲ್ಲಿ ತಲ್ಲೀನರಾದರೆ ಮಕ್ಕಳು ಅದನ್ನೇ ಅನುಸರಿಸುತ್ತಾರೆ. ನಮ್ಮ ಹಿಂದಿನವರು ಅಕ್ಕಪಕ್ಕದವರೊಂದಿಗೆ, ಬಂಧು-ಬಾಂಧವರೊಂದಿಗೆ ಹೇಗಿರುತ್ತಿದ್ದರು, ಈಗಿನವರು ಹೇಗೆ ವರ್ತಿಸುತ್ತಾರೆ, ಇದರಿಂದ ಅನಾನುಕೂಲ ಮತ್ತು ಅನುಕೂಲಗಳೇನು, ಸ್ನೇಹಿತರೊಂದಿಗೆ ನಮ್ಮ ಬಾಂಧವ್ಯ ಹೇಗಿರಬೇಕು ಇತ್ಯಾದಿ ವಿಷಯಗಳನ್ನು ಕಥೆಗಳ ಮೂಲಕ ತಿಳಿಸಿಕೊಡುವುದು ಅತ್ಯಗತ್ಯ. ಇಂತಹ ಕಥೆಗಳನ್ನು ಹೆಣೆಯುವುದರಲ್ಲಿಯೂ ಯಾರಿಗೂ ಕಡಿಮೆ ಇಲ್ಲವೆನ್ನುವಂತೆ ವೇದಿಕೆಯ ಸದಸ್ಯರು ಪಾಲ್ಗೊಂಡಿದ್ದಾರೆ. ಕಥೆಗಳಲ್ಲಿ ಹಾಸ್ಯರಸವೂ ಕೂಡಿದರೆ ಮಕ್ಕಳ ಮನಸ್ಸಿಗೆ ಮತ್ತಷ್ಟು ಉಲ್ಲಾಸ ತರುತ್ತವೆ. ಈ ನಿಟ್ಟಿನಲ್ಲಿ ತೆನಾಲಿ ರಾಮಕೃಷ್ಣನ ಹಲವಾರು ಕಥೆಗಳು ಮತ್ತು ಅಕ್ಬರ್ ಬೀರಬಲ್ ಕಥೆಗಳು ಇಂದಿಗೂ ಮಕ್ಕಳನ್ನು ರಂಜಿಸುತ್ತವೆ. ಈ ಕಥೆಗಳಲ್ಲಿ ಲಘು ಹಾಸ್ಯ, ಬುದ್ಧಿವಂತಿಕೆ ಮತ್ತು ನೀತಿ ಎಲ್ಲವೂ ಕೂಡಿವೆ.

- **ನೀತಿ ಕಥೆಗಳು:** ನೀತಿ ಕಥೆಗಳ ಸರದಿಗೆ ಬಂದಾಗ ನಮ್ಮ ಸಾಹಿತ್ಯದಲ್ಲಿ ಹೇರಳವಾಗಿ ಮಕ್ಕಳ ಕಥೆಗಳಿವೆ. ವಿಷ್ಣುಶರ್ಮನ ಪಂಚತಂತ್ರ ಕಥೆಗಳನ್ನು ಇಲ್ಲಿ ನೆನೆಯಬಹುದು. ಕಾಲಕ್ಕೆ ತಕ್ಕಂತೆ ಹಲಾವರು ಕಥೆಗಳನ್ನು ನಮ್ಮ ಕಥೆಗಾರರು ಕಟ್ಟಿದ್ದಾರೆ. ಉದಾಹರಣೆಗೆ ಮೊಬೈಲ್ ಬಳಕೆ, ಪ್ಲಾಸ್ಟಿಕ್‌ನಿಂದ ಪ್ರಾಣಿಗಳೂ ತೊಂದರೆಗೀಡಾದ ಪ್ರಸಂಗಗಳು, ಬೀದಿ ನಾಯಿಗಳಿಂದಾಗುವ ಪಾಡು ಹೀಗೆ ಹಲವಾರು ಕಥೆಗಳು ನಮಗೆ ನೆನಪಾಗುತ್ತವೆ. ಇವು ಮಕ್ಕಳಿಗಲ್ಲದೆ ದೊಡ್ಡವರಿಗೂ ಅನ್ವಯಿಸುವ ಕಥೆಗಳೇ. ನಮ್ಮ ದೇಶದ ಕಥೆಗಳಷ್ಟೇ ಅಲ್ಲದೆ ಈಸೋಫ಼ನ ನೀತಿ ಕಥೆಗಳನ್ನೂ ನೆನೆಯಬಹುದು.

ಎಲ್ಲರಿಗೂ ತಿಳಿದಿರುವ ಪುಣ್ಯಕೋಟಿ ಗೋವಿನ ಕಥೆಯನ್ನೇ ಈ ಕಾಲಕ್ಕೆ ತಕ್ಕಂತೆ ಅಳವಡಿಸಲು ಸಾಧ್ಯ. ಪುಣ್ಯಕೋಟಿ ತನ್ನ ಕರುವಿಗೆ ಹಾಲೂಡಿಸಿ ಬರುವೆನೆಂದು ಕಾಡಿನಿಂದ ಕೊಟ್ಟಿಗೆಗೆ ಬಂದಾಗ ಅದನ್ನು ನೋಡಿದ ಕರು ಅಮ್ಮನ ಬೇಸರಕ್ಕೆ ಕಾರಣವನ್ನು ಕಂಡುಹಿಡಿಯುತ್ತದೆ. ಆಗ ಅದು ಅಮ್ಮನ ಬದಲಾಗಿ ತಾನೇ ಹುಲಿಯ ಬಳಿ ಹೋಗುವುದಾಗಿ ಹಠ ಹಿಡಿದು ಕಾಡಿನ ಬದಿಯ ಬೆಟ್ಟಕ್ಕೆ ಹೋಗುತ್ತದೆ. ಕರುವಿಗೆ ಕಾಣಿಸದಂತೆ ಮತ್ತಷ್ಟು ಹಸುಗಳು ಅದರ ಹಿಂದೆಯೇ ಹೋಗುತ್ತವೆ. ಅಲ್ಲಿ ಪುಣ್ಯಕೋಟಿಯ ಬರುವಿಗಾಗಿ ಕಾಯುತ್ತಿರುವ ಹುಲಿ ಕರುವನ್ನು ಕಂಡು ಕೋಪಗೊಳ್ಳುತ್ತದೆ. ಕರು ಸಮಾಧಾನವಾಗಿ, "ನೋಡು ಹುಲಿ, ನನ್ನನ್ನು ನೀನು ತಿನ್ನು. ಇದರಿಂದ ಯಾರಿಗೂ ನಷ್ಟವಾಗುವುದಿಲ್ಲ. ನನ್ನ ಯಜಮಾನನಿಗೆ ಹಾಲು ಕರೆಯುವ ಹಸುವಿನಿಂದ ಉಪಯೋಗವಿದೆ. ನನ್ನನ್ನು ಕಳೆದುಕೊಂಡರೆ ಅಷ್ಟೇನೂ ಬೇಸರವಾಗುವುದಿಲ್ಲ. ನನ್ನಿಂದ ನಿನ್ನ ಹೊಟ್ಟೆ ಒಂದು ದಿನವಾದರೂ ತುಂಬುವುದಿಲ್ಲವೇ?' ಎಂದು ಮಾತಾಡಿ ಪುಸಲಾಯಿಸುತ್ತದೆ. ಆಗ ಹುಲಿಗೆ ನಾಚಿಕೆಯಾಗಿ ತಾನು ಹಸುವನ್ನಾಗಲೀ, ಕರುವನ್ನಾಗಲೀ ತಿನ್ನದೆ ಕಾಡಿಗೆ ಹೋಗಿ ಮತ್ಯಾವುದಾದರೂ ಪ್ರಾಣಿಯನ್ನು ಹುಡುಕುವನೆಂದು ಕಾಡಿಗೆ ವಾಪಸ್ಸಾಗುತ್ತದೆ. ಹುಲಿಗೆ ಕಾಣದೆ ಅಡಗಿದ್ದ ಹಸುಗಳಿಗೂ ಆನಂದವಾಗುತ್ತದೆ. ಹೀಗೆ ಕೊನೆಗೊಂಡರೆ ಮಕ್ಕಳ ಮನಸ್ಸಿಗೆ ಯಾವ ಬಗೆಯ ಆಘಾತವಾಗಲಾರದೇನೋ?

- **ಪ್ರವಾಸದ ಕಥೆಗಳು:** ಪ್ರವಾಸದ ಕಥೆಗಳೂ ಈ ಕಾಲಕ್ಕೆ ತಕ್ಕವೇ ಆಗಿವೆ. ದೇಶ ವಿದೇಶಗಳನ್ನು ಸುತ್ತಿರವ ಮಕ್ಕಳ ಅನುಭವಗಳು ಶ್ರೀಮಂತವಾಗಿವೆ. ಪ್ರವಾಸದ ಕಥೆಗಳು ಸ್ವಲ್ಪ ಬೆಳೆದ ಮಕ್ಕಳಿಗೆ ರಂಜನೀಯವಾಗುವುದಷ್ಟೇ ಅಲ್ಲದೆ, ಪ್ರವಾಸಿ ತಾಣದ ಪರಿಚಯ, ಪರಿಸರ, ವಿಶೇಷತೆ, ಇತಿಹಾಸ, ಸಂಸ್ಕೃತಿ, ಕಲೆ ಇತ್ಯಾದಿಗಳ ಬಗ್ಗೆಯೂ ತಿಳಿಸಿದರೆ ಕಥೆ ಮತ್ತಷ್ಟು ಸಾರ್ಥಕವಾಗಬಲ್ಲವು. ಬಹಳಷ್ಟು ಕಥೆಗಳು ಈ ನಿಟ್ಟಿನಲ್ಲಿಯೂ ಮೂಡಿರುವುದು ನಮ್ಮ ವೇದಿಕೆಯ ಸದಸ್ಯರ ಆಸಕ್ತಿಗಳಲ್ಲಿ ಪ್ರವಾಸದ ಪಾಲೂ ಇದೆಯೆಂದು ತಿಳಿಯುತ್ತದೆ. ಕಥೆಗಳೂ ಆಸಕ್ತಿದಾಯಕವಾಗಿರುತ್ತವೆ. ಇದೊಂದು ಒಳ್ಳೆಯ ಬೆಳವಣಿಗೆ.

- **ದಂತ ಕಥೆಗಳು:** ದಂತಕಥೆಗಳು ಬಾಯಿಂದ ಬಾಯಿಗೆ ಬರುತ್ತಲೇ ಇರುವ ಕಥೆಗಳು. ಇಂಥ ಕಥೆಗಳಿಗೆ ರೆಕ್ಕೆ– ಪುಕ್ಕ ಗಳನ್ನು ಕಟ್ಟಿ ತಮ್ಮ ಕಥೆಯಂತೆಯೇ ಬೆಳಸಿರುವವರೂ ತಮ್ಮ ಕೆಲಸವನ್ನು ಆಕರ್ಷಣೀಯವಾಗಿಸಿದ್ದಾರೆ. ಇದನ್ನೂ ಮೆಚ್ಚತಕ್ಕದ್ದೇ.

- **ವೈಜ್ಞಾನಿಕ ಕಥೆಗಳು:** ವೈಜ್ಞಾನಿಕ ಕಥೆಗಳನ್ನು ಬಹಳಷ್ಟು ಜನ ಪ್ರಸ್ತುತಪಡಿಸಿದ್ದಾರೆ. ಇದು ಈ ಕಾಲಕ್ಕೆ ಅವಶ್ಯಕವಾದದ್ದೇ. ಹಲವಾರು ಕಥೆಗಳು ಮೂಲ ವೈಜ್ಞಾನಿಕ ವಿಷಯಗಳನ್ನು ತಿಳಿಸಿದರೆ, ಮತ್ತೆ ಕೆಲವು ಆಧುನಿಕ ವಿಷಯಗಳನ್ನು ಹೇಳುವ ಪ್ರಯತ್ನದಲ್ಲಿ ಸಫಲವಾಗಿವೆ. ನಮ್ಮ ಸುತ್ತಮುತ್ತಲಿನ ಹಲವಾರು ವಿದ್ಯಮಾನಗಳನ್ನು ಗಮನಿಸಿದಾಗಲೇ ನಮಗೆ ಅನೇಕ ವೈಜ್ಞಾನಿಕ ವಿಷಯಗಳು ಗೋಚರಿಸುತ್ತವೆ. ಉದಾಹರಣೆಗೆ ಕಾಮನಬಿಲ್ಲಿನ ಸಂಯೋಜನೆ, ಬೆಳಕಿನ ಕಿರಣಗಳ ವಿಭಜನೆ, ಪ್ರಕೃತಿಯಲ್ಲಿ ಕಾಣುವ ವಿಶೇಷ ಗಿಡಗಳು, ಗ್ರಹಣಗಳು, ಗ್ರಹಗಳ ಚಲನೆ, ಬಲೂನುಗಳ ಹಾರಾಟದ ಹಿಂದಿರುವ ತತ್ವ, ಆರ್ಕಿಮಿಡೀಸ್ ತತ್ವ ಮುಂತಾದವುಗಳ ವೈಜ್ಞಾನಿಕತೆಯ ಬಗ್ಗೆ ಮಕ್ಕಳಿಗೆ ಅರ್ಥವಾಗುವಂತೆ ಕಥೆಗಳನ್ನು ಹೆಣೆಯುವುದರಲ್ಲಿಯೂ ನಮ್ಮ ವೇದಿಕೆಯ ಸದಸ್ಯರು ಸಫಲರಾಗಿದ್ದಾರೆ.

  ಪೌರಾಣಿಕ ಪಾತ್ರಗಳನ್ನು ನಾವೀನ್ಯತೆಯೊಂದಿಗೆ ಸೇರಿಸಿ ಹೆಣೆದಿರುವ ಕಥೆಗಳು ಬಹಳ ಪ್ರಿಯವಾಗಿವೆ. ಕಥೆಯ ಕೊನೆಯಲ್ಲಿ ಗಾದೆಯನ್ನೋ, ಪ್ರಶ್ನೆಯನ್ನೋ ಹಾಕಿ ಓದುಗರ ಮುಂದಿಡುವ ಶೈಲಿಯೂ ಓದುವ ಮಕ್ಕಳನ್ನು ಚಿಂತನೆಗೆ ಹಚ್ಚುತ್ತದೆ. ಕೆಲವು ಕಥೆಗಳು ಪ್ರಾದೇಶಿಕತೆಯನ್ನು ಸಮರ್ಥವಾಗಿ ನಿರೂಪಿಸಿವೆ. ಹೀಗೆ ನಾನಾ ಬಗೆಯ ಕಥೆಗಳನ್ನು ಮಕ್ಕಳಿಗಾಗಿ ಒಪ್ಪಿಸಿರುವುದು ಶ್ಲಾಘನೀಯ.

ನಾವು ಮಾಡಿರುವುದೆಲ್ಲಾ ಸರಿ ಎಂದು "ಭೇಷ್' ಎಂದರೆ ವಿಶ್ಲೇಷಣೆಯಾಗುವುದೇ? ಅದಕ್ಕಾಗಿ ನಾವು ಪರಾಮರ್ಶನ ಮಾಡಲೇಬೇಕು.

ಮೊದಲನೆಯದಾಗಿ ಈಗಾಗಲೇ ವೇದಿಕೆಯಲ್ಲಿ ಪ್ರಶ್ನಿಸಿದಂತೆ ಈ ಕಥೆಗಳನ್ನು ಮಕ್ಕಳು ಓದುವರೇ? ರಂಜನೀಯವೇ? ಅವರ ಮನಸ್ಸಿಗೆ ಸಂತಸವಾಗುವುದೇ? ಬಹುಮುಖ್ಯವಾದ ಪ್ರಶ್ನೆಯೆಂದರೆ ಮಕ್ಕಳು ಓದದೇ ಕೇವಲ ಮಕ್ಕಳ ಪಾತ್ರ ಮಾತ್ರವಿದ್ದರೆ ಸಾಕೇ? ಅಂದರೆ ಇಲ್ಲಿ ಪ್ರಸ್ತುತಿಪಡಿಸಿದ ಕಥೆಗಳು ಮಕ್ಕಳಿಗೆ ಹೇಳಲು ದೊಡ್ಡವರಿಗೆ ಅನುಕೂಲವಾಗುವಂತಹ ಕಥೆಗಳೇ ಎನ್ನುವ ಪ್ರಶ್ನೆ ಈಗಾಗಲೇ ಹಲವು ಬರಹಗಾರರನ್ನು ಕಾಡಿದೆ.

ಇಲ್ಲಿ ಬಳಸಿರುವ ಭಾಷೆ ಮಕ್ಕಳಿಗೆ ತಕ್ಕುದಾಗಿದೆಯೇ? ಮತ್ತಷ್ಟು ಸರಳವಾಗಿರಿಸಲು ಸಾಧ್ಯವೇ? ಖಂಡಿತ ಸಾಧ್ಯ ಎಂದು ನನಗನ್ನಿಸುತ್ತದೆ. ಬರೆದ ಕಥೆಗಳನ್ನು ಬರಹಗಾರರೇ ಮತ್ತೊಮ್ಮೆ ಓದಿದರೆ ಮತ್ತಷ್ಟು ಸರಳವಾಗಿಸುವ ಸಾಧ್ಯತೆ ಇವೆ. ಜೊತೆಗೆ ಪ್ರಕಟಣೆಗೊಳ್ಳುವಾಗ ಕಾಗುಣಿತದ ತಪ್ಪು ಬಾರದಂತಿದ್ದರೆ ಒಳ್ಳೆಯದು. ಭಾಷಾದೋಷಗಳನ್ನು ತಡೆಹಿಡಿಯಬೇಕು. ಮಕ್ಕಳು ಕಥೆಗಳ ಮೂಲಕವೇ ಭಾಷೆಯನ್ನು ಕಲಿಯುವಾಗ ಸಾಧ್ಯವಾದಷ್ಟು ದೋಷಗಳಿರದಂತೆ ಗಮನಿಸಬೇಕು. ಪ್ರಾದೇಶಿಕ ಪದಗಳನ್ನು ಬಳಸಿದರೆ ಅದಕ್ಕೆ ಅರ್ಥವನ್ನೂ ಕೊಡುವುದು ಒಳ್ಳೆಯ ಅಭ್ಯಾಸ. ವೈಜ್ಞಾನಿಕ ವಿಷಯಗಳನ್ನು ಬರೆಯುವಾಗಲೂ ಪಾರಿಭಾಷಿಕ ಪದಗಳನ್ನು ಬಳಸುವಾಗ ಸಾಕಷ್ಟು ಎಚ್ಚರಿಕೆ ವಹಿಸಬೇಕು. ನಡುವೆ ಇಂಗ್ಲಿಷ್ ನುಸುಳುವುದು ಸಹಜ ಮತ್ತು ಕೆಲವೊಮ್ಮೆ ಅನಿವಾರ್ಯ.

ನಾವು ಚಿಕ್ಕವರಿದ್ದಾಗ ಮಕ್ಕಳ ಕಥೆಗಳನ್ನು ಸಮಯ ಸಿಕ್ಕಾಗಲೆಲ್ಲಾ ಓದುವುದು ನನ್ನ ಹವ್ಯಾಸವೇ ಆಗಿತ್ತು. ನಮ್ಮ ರಸ್ತೆಯ ಕೊನೆಯಲ್ಲೇ ರೋಟರಿ ಸಂಸ್ಥೆಯ ಮಕ್ಕಳ ಪುಸ್ತಕ ಭಂಡಾರಕ್ಕೆ ಹೋದರೆ ಪುಸ್ತಕ ಭಂಡಾರ ಬಾಗಿಲು ಹಾಕುವವರೆಗೆ ಅಲ್ಲಿ ಓದುತ್ತಿದ್ದುದು ಇಂದಿಗೂ ನೆನಪಿದೆ. ಚಂದಮಾಮ ಕಥೆಗಳನ್ನು ಓದದೇ ಕೆಳಗಿಡುತ್ತಿರಲಿಲ್ಲ.

ಒಟ್ಟಿನಲ್ಲಿ ಹೇಳುವುದೇನೆಂದರೆ ಮಕ್ಕಳ ಕಥೆಗಳನ್ನು ಬರೆಯುವುದು ಸುಲಭವಲ್ಲ. ಪದಮಿತಿ ಇದ್ದಲ್ಲಿ ಮತ್ತಷ್ಟು ಕಷ್ಟ. ಕೆಲವರು ದೀರ್ಘವಾದ ಕಥೆಗಳನ್ನು ಬರೆದಿರುವುದನ್ನೂ ಗಮನಿಸಿದ್ದೇವೆ. ಪದಮಿತಿಯೂ ಅವಶ್ಯಕ. ದೀರ್ಘವಾದ ಕಥೆಗಳನ್ನು ಮಕ್ಕಳಿಗಾಗಿ ಬರೆಯುವುದು ಸಲ್ಲದು. ಮಕ್ಕಳಿಗೆ ಸಮಂಜಸವಲ್ಲದ ವಿಷಯಗಳು, ಕೆಲವು ಕಥೆಗಳಲ್ಲಿ ನುಸುಳಿವೆ. ಸಾವು-ನೋವುಗಳು, ಅತಿಯಾದ ಬಡತನದ ಗೋಳು ಮಕ್ಕಳ ಕಥೆಗಳಿಗೆ ಸೂಕ್ತವಲ್ಲವೆನ್ನುವುದು ನನ್ನ ಅನಿಸಿಕೆ. ಹಾಗೆ ನೋಡುತ್ತಾ ಹೋದಲ್ಲಿ ಸುಮಾರು ಕಥೆಗಳು ಮಕ್ಕಳ ಸಾಹಿತ್ಯದಿಂದ ಹೊರಗಿರುವಂತಿದೆ.

ಹಲವಾರು ಚಿತ್ರಗಳು ಚೆನ್ನಾಗಿ ಮೂಡಿವೆ. ಪ್ರಕಟಣೆಗೂ ಚಿತ್ರಗಳಿದ್ದರೆ, ಅವೂ ಬಣ್ಣದ ಚಿತ್ರಗಳಾಗಿದ್ದರೆ ಮತ್ತೂ ಚೆಂದ. ಹಲವಾರು ಜನ ತಮ್ಮ ಕಥೆಗಳಲ್ಲಿ ಸೂಕ್ತ ಚಿತ್ರಗಳನ್ನು ಅಳವಡಿಸಿದ್ದಾರೆ. ಒಂದು ಕಥೆಗೆ ಒಂದಾದರೂ ಇರುವಂತೆ ವೃತ್ತಿನಿರತ ಚಿತ್ರಕಾರರು ರಚಿಸಿದ ಸೂಕ್ತಚಿತ್ರಗಳೊಂದಿಗೆ ಮಕ್ಕಳಿಗಾಗಿ ಕಥೆ ಪುಸ್ತಕ ಪ್ರಕಟಿಸಿದರೆ ಪುಸ್ತಕ ಜನಪ್ರಿಯವಾಗುತ್ತದೆ.

ಈಗಾಗಲೇ ನಾನು ಶ್ರೀರಂಗರಾಜನ್‌ರವರ ಜೊತೆ ಹೇಳಿರುವಂತೆ ದಕ್ಷಿಣ ಭಾರತದ ಭಾಷೆಗಳಲ್ಲಿ ಬಾಲಸಾಹಿತ್ಯದ ಬೆಳವಣಿಯೆ ಬಗ್ಗೆ ಒಂದು ಗೋಷ್ಠಿಯನ್ನು ಏರ್ಪಡಿಸಿದ್ದಾದರೆ ಎಲ್ಲರಿಗೂ ಉಪಯೋಗವೆನಿಸುತ್ತದೆ. ಒಟ್ಟಿನಲ್ಲಿ ಕಥೆಗಳ ಸುಗ್ಗಿಯನ್ನು ದೊಡ್ಡವರು ಚೆನ್ನಾಗಿ ಅನುಭವಿಸಿದ್ದೇವೆ. ಶ್ರಾವಣ ಮಾಸವಾಗದೆ ಆಷಾಢದಲ್ಲಾಗಿದ್ದರೆ ಮತ್ತಷ್ಟು ಕಥೆಗಳು ಬರುತ್ತಿದ್ದವೇನೋ?

ನನಗೆ ಮಕ್ಕಳ ಕಥೆಗಳ ಬಗ್ಗೆ ಅನಿಸಿಕೆಗಳನ್ನು ಹಂಚಿಕೊಳ್ಳಲು ಅವಕಾಶ ನೀಡಿದ್ದಕ್ಕಾಗಿ ಎಲ್ಲರಿಗೂ ಕೃತಜ್ಞಳೆಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

***

ಕವಿಮನ

ಕಳೆದುಕೊಳ್ಳುವುದು

ಈ ಕಳೆದುಕೊಳ್ಳುವುದು ಒಂದು ಸುಖ
ಸುಖಾಸುಮ್ಮನೆ ಕೆಟ್ಟ ಹೆಸರು
ಈ ಪ್ರಕ್ರಿಯೆಗೆ.

ಹೊಟ್ಟೆ ಕೆಟ್ಟು, ಮಲಕಟ್ಟಿ,
ಕಷ್ಟಪಡುವವರನ್ನು ಕೇಳಿ.

ಅಥವಾ
ಅರ್ಬುದ ಬೆಳೆದು,ಮೈಯೆಲ್ಲ ಹರಡಿ
ಉಸಿರೇ ಸಿಕ್ಕಿಕೊಂಡವರನ್ನು

ಕಾರಣಾಕಾರಣವಾಗಿ ಸೇರಿ
ಗಟ್ಟಿಯಾಗಿ ಗೂಡುಕಟ್ಟಿದ್ದನ್ನು
ಒಡೆದು ಕಳೆದುಕೊಳ್ಳುವುದೇ ಸುಖ.
ಮತ್ತೆ ಒಪ್ಪವಾಗಿ
ಬೇಕಾದ್ದನ್ನು ಮಾತ್ರ ಆರಿಸಿ
ಕೂಡಿಟ್ಟು ಕಟ್ಟಿಕೊಳ್ಳಬಹುದಲ್ಲ.

ಆಸರೆಯಾದದ್ದು ಆದರಿಸಿದ್ದು
ಕಳೆಯಿತೆ,
ಹೋಗಲಿ ಬಿಡಿ
ಹೊಕ್ಕುಳ ಬಳ್ಳಿಯಂತೆ.
ಹೊಸ ಚಿಗುರು ನೆಲ ಕಚ್ಚಿ
ಬೆಳೆದು ನಲಿದೀತು ಸುಖವಾಗಿ.

ಮಾಗುತ್ತಿದ್ದಂತೆ
"ನಾನು"ಎಂದುಕೊಂಡಿದ್ದು
ಕಳೆದುಹೋಯಿತೆಂದು ಭಯವೆ?
ಮಳೆಯ ಹನಿ
ತನ್ನನ್ನು ಕಳೆದುಕೊಂಡೇ ಸಾಗರವಾಗುವುದು.

– ಡಾ ಶ್ರೀಲಕ್ಷ್ಮಿ ಶ್ರೀನಿವಾಸನ್
06.08.2025

ಕವಿಮನ

ಭವಿಷ್ಯ

ಕರ್ನಾಟಕದ ನಕ್ಷೆಯಲ್ಲಿ
ಸಣ್ಣ ಚುಕ್ಕೆಯಾಗಿಯೂ ಕಾಣಿಸಲ್ಲ
ನನ್ನ ಹಳ್ಳಿ
ಜನಸಂಖ್ಯೆ ಭಾರತದ ಜನಸಂಖ್ಯೆ ಹೆಚ್ಚು
ಎನ್ನುವುದರಲ್ಲಿ ನಮ್ಮ ಹಳ್ಳಿಯ
ಪಾಲಿದೆ.

ಲಕ್ಷ ಜನರಿದ್ದರು ಮುರುಕಲು
ಮನೆ ಮಾತ್ರ ಸಾವಿರ ಸಂಖ್ಯೆಯಷ್ಟೆ
ಹೊಸ ಮನೆ ತಲೆ ಎತ್ತಿಲ್ಲ
ಓದಿದ ಮಕ್ಕಳೆಲ್ಲ ಪಟ್ಟಣದ ಪಾಲು
ಉದ್ಯೋಗ ಕೈಬೀಸಿದೆ
ಕೈತುಂಬ ದುಡ್ಡು ಹಳ್ಳಿಯಲ್ಲಿ ದುಡ್ಡು
ಹೂಡಲ್ಲ

ಹಳ್ಳಿಗಳೇ ಭಾರತದ ಉಸಿರು
ಹಳ್ಳಿಗಳು ಪಟ್ಟಣಗಳಾಗಿವೆ
ಮಣ್ಣು ನೆಲವೀಗ ಟಾರು ಕಂಡು
ನವೀಕರಣಗೊಂಡಿದೆ.
ಕನ್ನಡ ಶಾಲೆಗಿಂತ ಇಂಗ್ಲಿಷ್ ಶಾಲೆ
ತಲೆ ಎತ್ತಿದೆ
ರೈತರಿಗೆ ಹೊಲಗದ್ದೆ ಉಳುಮೆ
ಮಾಡುವುದು ಮರೆತುಹೋಗಿದೆ
ಟ್ರಾಕ್ಟರ್ ಪಂಪ್ ಸೆಟ್ ಸುಲಭ
ಉಪಯೋಗ. ಪ್ರಗತಿಯ ಲಕ್ಷಣ.

ಐವತ್ತು ಕಿಲೋಮೀಟರ್ ದೂರದ
ಫ್ಯಾಕ್ಟರಿ ಬದುಕಿಗೆ ಒಗ್ಗಿಕೊಂಡಿದ್ದಾರೆ
ಕೈಕಾಲು ಕೆಸರಾಗಬೇಕಿಲ್ಲ.
ಸರಕಾರದ ಸವಲತ್ತಿಗೆ ಒಗ್ಗಿ
ಗಂಡಸರು ಹೆಂಗಸರು ದುಡಿಯುವುದು ಮರೆತಿದ್ದಾರೆ
ಸಾಯಂಕಾಲವಾದರೆ ಸುರಾಪಾನ
ಮೈಗಂಟಿದೆ.
ನೇಗಿಲು ಎತ್ತು ಹಿಡಿಯುವವನು ಕಾಣಲ್ಲ
ಪ್ರತಿಯೊಂದಕ್ಕೂ ಹಣ ಕೊಟ್ಟು
ಸರಕಾರ ಸೋಮಾರಿಗಳಾಗಿಸಿದ್ದಾರೆ

ಜನಪ್ರತಿನಿಧಿಗಳು ಹಳ್ಳಿಯಲ್ಲಿ
ಕಾಣುವುದೇ ಇಲ್ಲ
ಶಹರುಗಳಲ್ಲಿ ಐಶಾರಾಮಿ ಹೋಟೆಲ್ ವಾಸ
ಸ್ವಂತಕ್ಕೆ ಕಾರು ಬಂಗಲೆ
ಮಕ್ಕಳಿಗೆ ವಿದೇಶದಲ್ಲಿ ವ್ಯಾಸಂಗ

ಎಲ್ಲದಕ್ಕೂ ಸಹಾಯ ಧನ
ಕೊಡಿಸಲು ನೂರೆಂಟು ದಳ್ಳಾಳಿಗಳು
ದುಡಿದು ತಿನ್ನಲು ಮೈ ಬಗ್ಗಲ್ಲ
ಒಂದು ರಾಜ್ಯದ ಸಮಸ್ಯೆಯಲ್ಲ
ಎಲ್ಲಾ ರಾಜ್ಯದ ಅಂಟುರೋಗವಿದು
ಹೀಗಾದರೆ ಎಲ್ಲರು ಹೊಲ ಗದ್ದೆ
ಮಾರಿಕೊಂಡು ಬಂಡವಾಳಶಾಹಿಗಳ
ಹಿಡಿತದಲ್ಲಿ ಹಳ್ಳಿಗಳು
ದಿವಾಳಿಯಾಗುವುದು ಹತ್ತಿರದಲ್ಲಿದೆ
ದೂರವಿಲ್ಲ.

– ಗೋಪಿನಾಥ್
13.08.2025

ಕವಿಮನ

ಜಯವ ದೊರಕಿಪುದೆ ಕಾಲ?

ಪಾನದಾವುದೊ ಭಾವ ಬೆರೆತ ನರುಗಂಧ
ಮುಂಗೈಯ ಮೂಸುವೆಸಕ
ಚಿತ್ರವೀಳ್ಯವದಹುದು ವಸ್ತುವಾವುದೊ ಕಾಣೆ
ಅರಿವಿಲ್ಲವಿಲ್ಲಿಯನಕ

ಚಂದ್ರ ಹೂ ಹಣ್ಣು ಕೋಕಿಲದ ಸತ್ಯವನು
ಕಾಣಬಯಸೊ ನೀ ರಸಿಕ!
ಹೂ ಹೂವಿನಲ್ಲು ಹೀರುತ್ತ ಷರಬತ್ತು
ಇಳಿವುದೆಂದಿಗೀ ಮತ್ತು
ಕುರುಡುದುಂಬಿಯೆ ಕಣ್ಣ ತೆರೆ ನೋಡು
ಇದ್ದಿರಲು ಬಹುದು ಇದು ಕನಸು

ಇನ್ನು ಪಾಪದಾಹೂವುಗಳು ಬೇರಲ್ಲ
ನಿನ್ನಂತೆ ಅವು ವೇಷ ಬೇರೆ
ಸ್ವಪ್ನ ಸುಂದರ ನೀರೆ ಬಲಿಯಹಹ ನೀನೆ
ತಾರಳೆಲ್ಲವನು ಆ ಜಾರೆ.

ನಾದೋಪಾಸಕನೆ ನಿನ್ನ ಕಿವಿಗಳಚು ಮೊದಲು
ಕಿವಿಯ ಕಿವಿಯನರಸು
ನಾದ ಚೆಂದ ದಿಟ ಅದರಿನಾಚೆಗಿದೆ
ಒಳಗಿನೊಳಗು ಸೊಗಸು.

ಭಾವ ವಲಯದಿಂ ಕವಿಯೆ ಹೊರಬಹನಾಗು
ನಿನ್ನೆಲ್ಲ ಸಮಯ ಹಳತು! (ನೀನೆಂದು ಕಂಡೆ ಹೊಸತು?)
ಸಹೃದಯನೊಳಗ ತಟ್ಟುವದ್ಭುತ ವಸ್ತು
ಮಿಂಚಿ ಮರೆಯಹುದು ನಿನ ಸುತ್ತು

ಶೋಧಕನೆ ನೀ ಜ್ಞಾನಿ ಆಲಯದ ಮೇಲೆ ಬಾ
ಕೆಳಗಿರಲಿ ಬರಿದೆ ಉಪಕರಣ
ವಿಶ್ವನಾದಕೆ ತೆರೆದ ಸೂಕ್ಷ್ಮ ಬಾಣಲೆ ಕಿವಿಯು
ನಿನ್ನೊಳಗೆ ಇಹುದು ಕಾಣ!

ಕೊಳವೆಗಣ್ಣ ಮಸೂರವಿರಲಿ ಬಾ ಜಾಣ
ಮುಚ್ಚು ನಿನ್ನ ಬರಿಗಣ್ಣ
ದಶಕೋಟಿ ವರ್ಷಗಳ ವಾಸನೆಯ ಕಣಕಣವ
ಮೂಸೀತು ನಿನ್ನ ಘ್ರಾಣ!

ಶೂನ್ಯ ವೃತ್ತವ ಕಡಿದು ಗೆರೆನೇರಗೈಯಲಿಕೆ
ಮುಡಿಪಿಟ್ಟುದಾಯ್ತು ಬದುಕ
ಅಳೆ ನಿನ್ನ ಬೆವರ ಸಾಧಕ ಸುಧಾರಕನೆ
ಮಳೆಯೆಷ್ಟು ಇಂಚು ಈ ತನಕ?

ಎಲ್ಲ ಸಿದ್ಧಾಂತಗಳೊಟ್ಟು ಸುಡು ತಾತ್ವಿಕನೆ
ಇಲ್ಲೀಗ ತೀರ ತಣಿವು
ಒಳ್ಳೆಯಿಂಧನ ನಿಜವೆ ಆಗಿದ್ದರಾಗಲ್ಲಿ
ಉಳಿದೀತು ಹೇಗೆ ಘನವು?

ವಿಶ್ವವದ್ಭುತವದಕೆ ತಲೆಯೆಷ್ಟೊ ಕಾಣೆ
ನಾನೆಂತು ಪುಟ್ಟ ಬಾಲ!
ನೊಸಲನಿರಿವಿಡಿದು ಚಿಂತಿಸುವೆನನುಗಾಲ
ಜಯವ ದೊರಕಿಪುದೆ ಕಾಲ?

– ಬಿ.ಎಸ್.ಚಂದ್ರಶೇಖರ್
27.08.2025

ಕವಿಮನ

ಕೃತಕ ಬುದ್ಧಿಮತ್ತೆಯ ನಡುವೆ ಅಸ್ಮಿತೆ

ಅಂಗಾಂಗಗಳು ಕೃತಕವಾದವು ಊನವಾದಾಗ ಮಾತ್ರ ।
ಚಿತ್ತವನು ಅರವಳಿಸಬಹುದು ತಿಳಿದಿರುವೆವೀಗದರ ರಸಾಯನ ಸೂತ್ರ ।
ಇಂದ್ರಿಯ ಸುಖಗಳ ಸೋಗೀಗ ಕೃತ್ರಿಮ ಬೃಹತ್ಪಾತ್ರ ।
ಅವೆಲ್ಲಾ ಸರಿ..
ಆದರೆ ಬೆಳೆಸಿ ವಿಕಸಿಸಿದ ಬುದ್ಧಿಮತ್ತೆಗೀಗೇಕೆ ಕೃತಕತೆಯ ಕುತಂತ್ರ ॥

ಬಿಟ್ಟುಕೊಟ್ಟಿಹೆವು ಯುಗಾಂತರಗಳ ಬೌದ್ಧಿಕ ಶ್ರಮ ಅಪಾರ ।
ಬಸಿದು ಕೊಡುತಿಹೆವು ಬೊಗಸೆ ಬೊಗಸೆ ನಮ್ಮೆಲ್ಲರ ಸಾರ ।
ಬಲಿ ಹಾಕಿಹೆವು ನಮ್ಮನ್ನು ಸ್ವಾಯತ್ತತೆಗೆ ಮಾಡುತಾ ಧಿಕ್ಕಾರ ।
ಬುದ್ಧಿಮತ್ತೆ ಈಗ ದೊಡ್ಡ ಕಂಪನಿಗಳ ಶುದ್ಧ ವ್ಯಾಪಾರ ।

ಅಹುದು ಜಾಲಾಡುವುದು, ಕ್ಷಣಮಾತ್ರದಿ ಪ್ರಪಂಚದೆಲ್ಲದರ ಜ್ಞಾನ ।
ತನ್ನದೇ ಎಂಬಂತೆ ಕಸಿಯುವುದು ಯಜಮಾನಿಕೆಯ ಮಾನ ।
ಇದರ ಸೂತ್ರ ಎಲ್ಲಿಹದೋ ನಾ ಕಾಣೆ ಅದರಾಧಾರ ।
ಇದಕ್ಕೆಲ್ಲವೂ ಕೊಟ್ಟು ನಾಳೆ ಮಾಡುವುದೇನನಾ ಹರೋಹರ ॥

ದೇಹ ಕೃತಕ, ಚಿತ್ತ ರಸಾಯನ, ಬುದ್ಧಿ ಕೂಡ ಈಗ ಕೃತ್ರಿಮ ।
ಕೆಟ್ಟದ್ದು ಬೇಡ ಸರಿ, ಆದರೆ ಪ್ರೌಢಿಸಿದ ಸಿರಿ ಸವರಿ ದಾಟಿಹದು ಸಂಯಮ ।
ಉಳಿಸಿಕೊಳುತಿಹೆವಾ ಅಹಂಭಾವದ ಅಸ್ಮಿತೆಯ ಎನಲೂ ಸಮ ।
ಇದರ ಉತ್ತರ ಕಂಡೆ ಕಲಿಯುತಾ ನಾ ಸನಾತನ ಧರ್ಮ ॥

ನಾನು, ನನದೆಂದು ಹಲುಬುವವನಾರು ಈ ಗರ್ವಿ ನಾನು ।
ದೇಹ, ಚಿತ್ತ, ಬುದ್ಧಿಗಳ ಬಂಧಿಯಲ್ಲವೇ ತಾನು ।
ಇಂದ್ರಿಯಗಳ ಭ್ರಮೆಯಲಿ ಮಂಕರಿದ ನನ್ನೊಳಗಿನ ನಿಜ ಜೀವನು ।
ಅನುಭವವೇ ನಿಜವೆಂಬ ಭ್ರಮೆಯಲಿ ಬದುಕುತಿಹ ಅನುಭವಿ ಈ ಆತ್ಮನು ॥

ಅರಿತು ತಳುಕುಭವಣೆಗಳ ಭೌತಿಕದ ನಶ್ವರ ಅನಿತ್ಯೆಯ ವಾಸ್ತವದನು ।
ಅನಾದಿ ಅನಂತಗಳ ಚೇತಸ್ಸರಪಳಿಯ ಅಕ್ಷರತೆಯ ದಿಟ ಸತ್ಯವನು ।
ಸತ್ವ ರಜ ತಾಮಸಗಳ ಬಂಧನದಿ ಸಾಧಿಸಿ ಕಷ್ಟದ ಮುಕ್ತಿಯನು ।
ಆ ಸ್ಥಿತಪ್ರಜ್ಞೆಯಲಿ ಸಾಧಿಸುವೆ ನಿರಾಕರ ಆ ನಿಜ ಸಾಕ್ಷಾತ್ಕಾರದಸ್ಮಿತೆಯನು ॥

– ಡಾ ಪ್ರಶಾಂತ ಮೇಡ
20.08.2025

ಹರಿದ್ವಾರದ "ಯೋಗಗ್ರಾಮ"

- ಮನೋಹರ ಎಂ. ಗೋಖಲೆ



ಹನ್ನೆರಡು ವರ್ಷಗಳ ಹಿಂದೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಸ್ವಾಮಿ ಶ್ರೀ ರಾಮದೇವ ಬಾಬಾ ಅವರ ನಾಲ್ಕು ದಿನಗಳ ಯೋಗ ಮತ್ತು ಪ್ರವಚನ ಶಿಬಿರದಲ್ಲಿ ಭಾಗವಹಿಸಿದ್ದೆ. ಬೆಳಿಗ್ಗೆ ಐದು ಗಂಟೆಯಿಂದ ಎಂಟು ಗಂಟೆಯವರೆಗೆ ನಡೆಯುತ್ತಿದ್ದ ಈ ಶಿಬಿರದಲ್ಲಿ ಆಸಕ್ತಿ ಮತ್ತು ಉತ್ಸಾಹದಿಂದ ಪತ್ನಿಯೊಂದಿಗೆ ಭಾಗವಹಿಸಿದ ನಂತರ ಪ್ರತಿದಿನ ಮುಂಜಾನೆ ಒಂದು ಗಂಟೆ ಧ್ಯಾನ, ಪ್ರಾಣಾಯಾಮ ಮತ್ತು ಸರಳ ವ್ಯಾಯಾಮ ಮಾಡುವ ಅಭ್ಯಾಸ ನಡೆದೇ ಇದೆ. ಹೀಗೇ ಇದ್ದಾಗ ಕಳೆದ ಜುಲೈ ತಿಂಗಳ ಎರಡನೆಯ ವಾರ ಹರಿದ್ವಾರದಲ್ಲಿರುವ ಶ್ರೀ ರಾಮದೇವ ಬಾಬಾ ಅವರು, ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಸ್ಥಾಪಿಸಿ ನಡೆಸಿಕೊಂಡು ಬರುತ್ತಿರುವ "ಯೋಗಗ್ರಾಮ" ಎಂಬ ಅದ್ಭುತ ಲೋಕಕ್ಕೆ ಹೋಗಿ, ಆರು ದಿನ ವಾಸ್ತವ್ಯ ಹೂಡಿ, ಸ್ವಾಸ್ಥ್ಯಪರ ಚಟುವಟಿಕೆಗಳಲ್ಲಿ ಭಾಗವಹಿಸುವ ಅವಕಾಶ ಲಭಿಸಿದುದನ್ನು ಹಂಚಿಕೊಳ್ಳಲು ಸಂತೋಷವಾಗುತ್ತದೆ.

ಹೌದು. ತುಂಬ ಸರಳವಾಗಿ ಹೇಳುವುದಾದರೆ 'ಯೋಗ' ಎಂಬುದು ಸನಾತನ ಭಾರತೀಯ ಸ್ವಾಸ್ಥ್ಯ ಸಂಹಿತೆ. ಇದು ಮನುಷ್ಯನ ಆರೋಗ್ಯವನ್ನು ಕಾಪಾಡಿಕೊಳ್ಳುವ ಸ್ವಯಂ ಸಾಧನಮಾರ್ಗವಾಗಿದೆ. ವಿದೇಶಿಯರ ಆಕ್ರಮಣ ಮತ್ತು ದಬ್ಬಾಳಿಕೆಯ ಕಾರಣದಿಂದ ನಮ್ಮ ಸನಾತನ ಸಂಸ್ಕೃತಿ ಸಂಪ್ರದಾಯ ಅವನತಿಗೆ ಕಾರಣವಾದಂತೆ ಪಾಶ್ಚಿಮಾತ್ಯ ಶಿಕ್ಷಣ ಪದ್ಧತಿಯಿಂದ ನಮ್ಮ ಅಸ್ಮಿತೆಯನ್ನೇ ಮರೆತುಹೋಗುವಂತೆ ಮಾಡಲಾಗಿದೆ. ಅನೇಕ ಕಾರಣಗಳನ್ನು ನೀಡಿ ಸಾಮಾಜಿಕ ಸಂಘರ್ಷಗಳನ್ನು ಹುಟ್ಟು ಹಾಕಿ ಆಡಳಿತ ನಡೆಸುವ ಸ್ವಾರ್ಥಿಗಳಿಂದ ಭಾರತೀಯ ಸಂಸ್ಕೃತಿಗೂ ಏಟು ಬೀಳುತ್ತಿರುವುದನ್ನು ಕಾಣುತ್ತಿದ್ದೇವೆ. ಆದರೂ ಭಾರತದ ಸನಾತನ ಸಂಸ್ಕೃತಿ ನಿಸ್ಸಂಶಯವಾಗಿ ಗುಪ್ತಗಾಮಿನಿಯಂತೆ ಪ್ರವಹಿಸುತ್ತಿರುತ್ತದೆ ಹಾಗೂ ಮುಂದುವರಿಯುತ್ತಿದೆ. ಆಗಾಗ್ಗೆ ಅಲ್ಲೊಮ್ಮೆ ಇಲ್ಲೊಮ್ಮೆ ಸಾಧುಗಳು, ಸಂತರು, ದೃಷ್ಟಾರರು, ಸಾಧಕರು ಹುಟ್ಟಿ ಬಂದು ಸನಾತನ ಸಂಸ್ಕೃತಿಯ ಪರಿಚಯವನ್ನು ಹೊಸ ಪೀಳಿಗೆಗಳಿಗೆ ತಿಳಿಸುತ್ತ ಬರುತ್ತಿರುವುದು ಇದಕ್ಕೆ ಸಾಕ್ಷಿ. ಅದರಂತೆ, ಯೋಗ ವಿಜ್ಞಾನವನ್ನು ಇಂದಿನ ಜನತೆಗೆ ತಿಳಿಸಿಕೊಡಲು ಬಂದವರಲ್ಲಿ ಪತಂಜಲಿ ಯೋಗಪೀಠದ ಪ್ರವರ್ತಕ ಯೋಗಿ ರಾಮದೇವ ಬಾಬಾ ವಿಶೇಷವಾಗಿ ಎತ್ತರದ ಸ್ಥಾನದಲ್ಲಿ ನಿಲ್ಲುತ್ತಾರೆ. ಈ ಹಿಂದೆ ಮಲ್ಲಾಡಿಹಳ್ಳಿ ಸ್ವಾಮಿಗಳು, ಬಿ.ಕೆ.ಎಸ್.ಐಯ್ಯಂಗಾರ್, ಸಹಜ ಯೋಗ ಪ್ರತಿಪಾದಿಸಿದ ಮಹರ್ಷಿ ಮಹೇಶ್ ಯೋಗಿ ಇವರೆಲ್ಲರೂ ಪ್ರಸಿದ್ಧಿಯನ್ನು ಪಡೆದಿದ್ದರು. ದೇಶ ವಿದೇಶಗಳಲ್ಲಿ ಅನೇಕ ವ್ಯಕ್ತಿಗಳ ಅಥವಾ ಸಂಸ್ಥೆಗಳ ಆಸಕ್ತಿ ಮತ್ತು ಶ್ರದ್ಧೆಯಿಂದಾಗಿ ಯೋಗ ಪ್ರಸಾರ ಪ್ರಚಾರ ನಿರಂತರ ನಡೆಯತ್ತಿದೆ. ಆದರೆ ಪೂರ್ಣ ಪ್ರಮಾಣದಲ್ಲಿ ಯೋಗ ವಿದ್ಯೆಗಾಗಿ ತನ್ನ ಜೀವನವನ್ನೇ ಅರ್ಪಿಸಿಕೊಂಡು, ಯೋಗ ಅಭ್ಯಾಸ, ಯೋಗಸ್ವಾಸ್ಥ್ಯ ಪರಿಹಾರ-ಪರಿಣಾಮಗಳನ್ನು ಕುರಿತಾಗಿ ಯೋಗ ವಿಜ್ಞಾನದಲ್ಲಿ ಸಂಶೋಧನೆಗಳನ್ನು ಕೈಗೊಳ್ಳುತ್ತಲೇ ಯೋಗವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಚುರಪಡಿಸುತ್ತ, ಜನಸಾಮಾನ್ಯರಿಗೂ ಈ ಕುರಿತು ಅರಿವನ್ನು ಮೂಡಿಸುತ್ತಿರುವ ಯೋಗಗುರು ರಾಮದೇವ್ ಅವರ ಸಾಧನೆ ಅಪೂರ್ವವಾದುದಾಗಿದೆ ಅಂತೆಯೇ ಅಸದೃಶವಾದುದಾಗಿದೆ. ಇಂದಿನ ಆಧುನಿಕ ಕಾಲಸಂದರ್ಭದಲ್ಲಿ ದೂರದರ್ಶನ ಮಾಧ್ಯಮದ ಮೂಲಕ ಪ್ರತಿನಿತ್ಯ ಅತಿ ಹೆಚ್ಚು ಜನರನ್ನು ತಲುಪಿ ಯೋಗವನ್ನು ಜೀವನಶೈಲಿಯ ಭಾಗವಾಗಿ ಪರಿವರ್ತಿಸಿದ ಕೀರ್ತಿ ಬಾಬಾ ರಾಮದೇವ್ ಅವರಿಗೆ ಸಲ್ಲುತ್ತದೆ. ಅವರು ಹರಿದ್ವಾರದ ಸಮೀಪ ಸ್ಥಾಪಿಸಿರುವ "ಯೋಗಗ್ರಾಮ" ಒಂದು ವಿಶಿಷ್ಟ ಯೋಗಧಾಮವಾಗಿ ಕಾರ್ಯನಿರ್ವಹಿಸುತ್ತಿದೆ.

"ಯೋಗಗ್ರಾಮ" ಹರಿದ್ವಾರ ಯಾತ್ರಾ ಸ್ಥಳದಿಂದ ಸುಮಾರು ಇಪ್ಪತ್ತು ಕಿ.ಮೀ. ದೂರದಲ್ಲಿ, ಸುಮಾರು ಒಂದು ಸಾವಿರ ಎಕರೆ ಪ್ರದೇಶದಲ್ಲಿ ವಿಶೇಷವಾಗಿ ನಿರ್ಮಿತವಾಗಿರುವ ನಿಸರ್ಗ ಗ್ರಾಮ. ಇದು ಹಚ್ಚಹಸಿರು ಅರಣ್ಯಪ್ರದೇಶದಿಂದ ಆವೃತವಾಗಿದೆ.



ಸುಮಾರು ಒಂದು ನೂರು ಎಕರೆ ಪ್ರದೇಶದಲ್ಲಿ ಸುವ್ಯವಸ್ಥಿತ "ಯೋಗಗ್ರಾಮ"ವನ್ನು ಜನವಾಸಕ್ಕಾಗಿ ನಿರ್ಮಾಣ ಮಾಡಿದ್ದಾರೆ. ಶುದ್ಧ ಗಾಳಿ, ಶುದ್ಧ ನೀರು, ಶುದ್ಧ ಆಹಾರ ಮತ್ತು ಶುದ್ಧ ಪರಿಸರ ಇರುವ ಸ್ವಚ್ಛ ಸುಂದರ ಗ್ರಾಮ ಇದಾಗಿದ್ದು, ಆರೋಗ್ಯಾರ್ಥಿಗಳನ್ನು (healthseekers) ಕೈಬೀಸಿ ಕರೆಯುತ್ತಿದೆ. ಅಲ್ಲಿಗೆ ಹೋದವರೆಲ್ಲರ ಆರೋಗ್ಯಕ್ಕೆ-ಮನಸ್ಸಿಗೆ ಹೊಸ ಉತ್ಸಾಹ ಮತ್ತು ನವ ಚೈತನ್ಯವನ್ನು ಇಲ್ಲಿಯ ಪರಿಸರ ಮತ್ತು ಚಿಕಿತ್ಸಾಕ್ರಮ ಒದಗಿಸುತ್ತವೆ.

ಇಲ್ಲಿ "ಯೋಗಗ್ರಾಮ" ಮತ್ತು "ನಿರಾಮಯಂ" ಎಂಬ ಹೆಸರಿನಲ್ಲಿ ಎರಡು ಯೋಗಧಾಮಗಳಿವೆ. ಇಲ್ಲಿಯ ಆವರಣದ ಪ್ರವೇಶದ್ವಾರದವರೆಗೆ ಮಾತ್ರ ಹೊರಗಿನ ವಾಹನಗಳಿಗೆ ಅನುಮತಿ. ಅಲ್ಲಿಂದ ನಾವು ಅವರ ವಾಹನದಲ್ಲೇ ಒಳಪ್ರವೇಶ ಮಾಡಬೇಕು. ಬರುವ ಆರೋಗ್ಯಾರ್ಥಿಗಳಿಗೆ ಸಹಾಯಮಾಡಲು ಮತ್ತು ಸೌಲಭ್ಯ ಒದಗಿಸಲು ರಿಸೆಪ್ಷನ್ ಕೌಂಟರಿನಲ್ಲಿ ಸ್ವಾಗತಕಾರರು ಸಿದ್ಧರಾಗಿ ಕುಳಿತಿರುತ್ತಾರೆ. ವಸತಿ ವ್ಯವಸ್ಥೆಗಾಗಿ ಮುನಿಕುಟೀರ, ಮಹಾಮುನಿ ಕುಟೀರ, ರಾಜರ್ಷಿ ಕುಟೀರ, ಮಹರ್ಷಿ ಕಾಟೇಜ್ ಹೆಸರಿನ ವಿವಿಧ ತೆರನಾದ ಬಾಡಿಗೆಶುಲ್ಕದ ಸುಮಾರು ಒಂದು ಸಾವಿರ ಜನರು ಇರಬಹುದಾದ ವಸತಿಸೌಲಭ್ಯ ಇಲ್ಲಿ ಲಭ್ಯವಿದೆ.

ಅಲ್ಲೇ ಪಕ್ಕದಲ್ಲಿರುವ ಹೊರರೋಗಿ ವಿಭಾಗ ಕಟ್ಟಡದಲ್ಲಿ ವೈದ್ಯರ ಸೇವಾ ಘಟಕ ಇದೆ. ರಕ್ತ ಪರೀಕ್ಷಾ ಕೇಂದ್ರ ಇದೆ. ಆರೋಗ್ಯಾರ್ಥಿಗಳ ವಿವಿಧ ಚಿಕಿತ್ಸೆಗಳಿಗೆ ಬೇಕಾದ ಪರಿಕರಗಳನ್ನು ಇಲ್ಲಿರುವ ಮಳಿಗೆಯಿಂದ ನೀಡಲಾಗುತ್ತದೆ. ಇನ್ನೊಂದು ಪಕ್ಕದ "ಮಾಲ್" ಅಂಗಡಿಯಲ್ಲಿ ಪತಂಜಲಿ ವೈದ್ಯಕೀಯ ಔಷಧಿಗಳು, ಪತಂಜಲಿ ಪ್ರಕಟಣೆಗಳು, ಅವಶ್ಯಕ ಉಡುಪುಗಳನ್ನು ಖರೀದಿಸಬಹುದಾಗಿದೆ. ನಾಲ್ಕು ರಸ್ತೆಗಳು ಸೇರುವ ಚೌಕದಲ್ಲಿ ಅಚ್ಚುಕಟ್ಟಾದ ವಿಶಾಲವಾದ "ಪ್ರಕೃತಿ ಆಹಾರ ಕೇಂದ್ರ" ಇದೆ. ಪ್ರತಿಯೊಬ್ಬರಿಗೂ ನಿಯಮಿತ ಆಹಾರ ಮತ್ತು ಪಾನೀಯಗಳು ನಿರ್ಧಾರಿತ ಸಮಯದಲ್ಲಿ ಮಾತ್ರ ಇಲ್ಲಿ ಲಭ್ಯವಿರುವುದು.



ಈ ಯೋಗಗ್ರಾಮದಲ್ಲಿ ಸಿಗುವ ಚಿಕಿತ್ಸೆಗಳ ವಿಚಾರವೇ ಆಸಕ್ತಿದಾಯಕ. ನಾವು ಅಲ್ಲಿಗೆ ಹೋದಕೂಡಲೇ ನಮ್ಮ ಹೆಸರನ್ನು ದಾಖಲಿಸಿಕೊಂಡು ನಂತರ ಸೂಕ್ತ ವೈದ್ಯರಲ್ಲಿಗೆ ಭೇಟಿಗಾಗಿ ಕಳುಹಿಸಲಾಗುತ್ತದೆ. ವೈದ್ಯರಲ್ಲಿ ನಮ್ಮ ಮುಖ್ಯ ಆರೋಗ್ಯ ಸಮಸ್ಯೆಯ ಮಾಹಿತಿ ತಿಳಿಸಬೇಕು ಮತ್ತು ದಿನನಿತ್ಯ ಅನುಭವಿಸುತ್ತಿರುವ ಸಣ್ಣಪುಟ್ಟ ದೇಹಾರೋಗ್ಯ ತೊಂದರೆ ಗಳನ್ನೂ ತಿಳಿಸಿದರೆ, ವೈದ್ಯರು ಅಲ್ಲಿರುವಷ್ಟು ದಿನ ನಾವು ಸೇವಿಸಬೇಕಾದ ಸೂಕ್ತ ಆಹಾರ ಮತ್ತು ಪಾನೀಯಗಳು, ಅವುಗಳ ಸೇವನಾ ಸಮಯ ಮತ್ತು ಪಡೆಯಬೇಕಾದ ವಿವಿಧ ಚಿಕಿತ್ಸೆಗಳ ವಿವರ ಮತ್ತು ವೇಳಾಪಟ್ಟಿಗಳನ್ನು ಮುದ್ರಿಸಿ ನೀಡುತ್ತಾರೆ. ನಂತರ ನಮ್ಮ ಮುಖ್ಯ ಆರೋಗ್ಯ ಸಮಸ್ಯೆಯ ಪರಿಹಾರಕ್ಕಾಗಿ ವಿಶೇಷ ತಜ್ಞ ವೈದ್ಯರನ್ನು ಅಲ್ಲಿಯೇ ಕಾಣಬೇಕು. ಅವರು ಪರೀಕ್ಷೆ ಮಾಡಿ ಸೂಕ್ತ ಆಯುರ್ವೇದ ಔಷಧಿಗಳನ್ನೂ ಬರೆದುಕೊಡುತ್ತಾರೆ.

ನಾವು ಅಲ್ಲಿಗೆ ಹೋಗಿರುವ ಸಂಜೆ ವೇಳೆ ಪೂರ್ವಭಾವಿ ಸಭೆಯನ್ನು ಏರ್ಪಡಿಸಿ, 'ಯೋಗಗ್ರಾಮ'ದಲ್ಲಿ ಇರುವ ಅವಧಿಯಲ್ಲಿ ಅನುಸರಿಸಬೇಕಾದ ಆಹಾರ-ಪಾನೀಯ ಕ್ರಮ, ಚಿಕಿತ್ಸಾಕ್ರಮಗಳ ಕುರಿತಾಗಿ ಮತ್ತೊಮ್ಮೆ ಸಮಗ್ರ ಮಾಹಿತಿ ನೀಡಲಾಗುತ್ತದೆ. ನಮಗೆ ನೀಡಲಾದ ಮುದ್ರಿತ ವಿವರದಂತೆ ಪ್ರತಿದಿನ ಬೆಳಗಿನ ಜಾವ ೪.೦೦ ಗಂಟೆಯಿಂದ ರಾತ್ರಿ ೮.೦೦ ಗಂಟೆಯವರೆಗೆ ಏಳು ದಿನಗಳ ದಿನಚರಿ ನೀಡಲಾಗಿತ್ತು.

ಮರುದಿನ ಮುಂಜಾನೆ ೪.೦೦ ಗಂಟೆಗೆ 'ಪಂಚಕರ್ಮ ಚಿಕಿತ್ಸಾ ವಿಭಾಗ'ಕ್ಕೆ ಹೋದರೆ ಅಲ್ಲಿ ಜಲನೇತಿ, ಸೂತ್ರ (ರಬ್ಬರ್) ನೇತಿ, ಕಣ್ಣುಗಳ ಸ್ವಚ್ಛತೆ ಮತ್ತು ಎನಿಮಾ ಚಿಕಿತ್ಸೆ ನೀಡಲಾಗುತ್ತದೆ. ನನ್ನಂತೆ ಅನೇಕರಿಗೆ ಇದು ಮೊದಲ ಅನುಭವ ಆಗಿದ್ದರಿಂದ ಗಂಟಲಲ್ಲಿ ಕೆರೆತ ಮತ್ತು ಕೆಮ್ಮು ಬರುತ್ತಿತ್ತು. ಎನಿಮಾ ಚಿಕಿತ್ಸೆ ಬಗ್ಗೆ ಕೇಳಿದ್ದರೂ ಅಷ್ಟು ಸುಲಭವೆಂಬುದನ್ನು ಅಲ್ಲಿಯೇ ತಿಳಿದುಕೊಂಡೆ. ಅಲ್ಲಿಂದ ರೂಮಿಗೆ ಬಂದು ಸ್ವಚ್ಛಗೊಂಡು ೫.೦೦ ಗಂಟೆಗೆ ಯೋಗಭವನದಲ್ಲಿ ಸರಳ ವ್ಯಾಯಾಮ ಮತ್ತು ಯೋಗಾಸನಗಳೊಂದಿಗೆ ಬಾಬಾ ರಾಮದೇವ್ (ಅವರ ಅನುಪಸ್ಥಿತಿಯಲ್ಲಿ ಶಿಷ್ಯೋತ್ತಮರ) ಸಮಕ್ಷಮದಲ್ಲಿ ಭಜನೆ, ಪ್ರವಚನ ಕೇಳುವ ಭಾಗ್ಯವನ್ನು ತಪ್ಪಿಸಿಕೊಳ್ಳುವಂತೆಯೇ ಇಲ್ಲ. ಪ್ರಾಣಾಯಾಮ ಮತ್ತು ಕಪಾಲಭಾತಿ ಕ್ರಿಯೆಗಳನ್ನು ಅಭ್ಯಾಸ ಮಾಡಿಕೊಂಡರೆ ಸಾಮಾನ್ಯ ಆರೋಗ್ಯ ಸುಧಾರಿಸುತ್ತದೆ ಹಾಗೂ ಆಯರ್ವೇದದಲ್ಲಿ ಉಲ್ಲೇಖಿಸಲಾದ ವೈದ್ಯಪದ್ಧತಿಯ ಕುರಿತಾಗಿ ಪ್ರವಚನದಲ್ಲಿ ಮಾಹಿತಿ ಒದಗಿಸಿ ಜನಸಾಮಾನ್ಯರ ಜ್ಞಾನವೃದ್ಧಿ ಮಾಡುತ್ತಾರೆ, ಬಾಬಾ ರಾಮದೇವ್ ಅವರು.

೭.೩೦ಕ್ಕೆ ಕೇಳುಗರನ್ನು 'ಶವಾಸನ' ಹಾಕಿಸಿ ಕಣ್ಣು, ಕಿವಿ ಮೂಗುಗಳಿಗೆ ಆರೋಗ್ಯಕರ ದ್ರವಗಳನ್ನು ಹಾಕುತ್ತಾರೆ. ನಂತರ 'ಮಿಟ್ಟಿ ಕಾ ಪಟ್ಟಿ'ಗಳನ್ನು ಹೊಟ್ಟೆ ಮತ್ತು ಹಣೆ ಮೇಲೆ ಇಡುತ್ತಾರೆ. ಯೋಗಧಾಮದಲ್ಲಿ ಒಂದುಸಲ ಸುಮಾರು ೬೦೦-೭೦೦ ಜನರಿಗೆ ಯೋಗ, ವ್ಯಾಯಾಮ ಮತ್ತು ಪ್ರವಚನ ಕೇಳಲು ವ್ಯವಸ್ಥೆ ಇದೆ. ಅಷ್ಟು ಜನರಿಗೂ ನೆರವಾಗಲು ಸುಮಾರು ನೂರಾರು ಜನ ಸೇವಾಕರ್ತರೂ ಸಿದ್ಧವಾಗಿರುತ್ತಾರೆ. ನಾವು ಅಲ್ಲಿದ್ದ ಪ್ರತಿದಿನವೂ ಇದು ಪ್ರೇಕ್ಷಕರಿಂದ ತುಂಬಿತುಳುಕುತ್ತಿದ್ದುದನ್ನು ನೋಡಿದ್ದೇವೆ.

ಅರ್ಧ ಗಂಟೆಯ ನಂತರ ಅಲ್ಲಿಂದ ಹೊರಗೆ ಬಂದಂತೆ ಸುಮಾರು ಇಪ್ಪತ್ತೈದು ತರಹದ ಕಷಾಯಗಳೊಂದಿಗೆ ಸೇವಾಕರ್ತರು ಕಾಯುತ್ತಿರುತ್ತಾರೆ. ಆರೋಗ್ಯಾರ್ಥಿಗಳು ಅವರವರಿಗೆ ಹೇಳಿದ ಕಷಾಯಗಳನ್ನು ಸೇವಿಸಿ ಸೀದಾ ರೂಮಿಗೆ ಹೋಗಬೇಕು. ನಂತರ "ಪ್ರಕೃತಿ ಉಪಾಹಾರ ಗೃಹ"ಕ್ಕೆ ತೆರಳಿ ನಿರ್ದೇಶಿತ ಫಲಾಹಾರ ಅಥವಾ ಉಪಾಹಾರ ಸ್ವೀಕರಿಸಬೇಕು. ಕೆಲವರಿಗೆ

ಪಪ್ಪಾಯಿ, ಕಲ್ಲಂಗಡಿ, ಕಿತ್ತಳೆ, ಸೇಬು, ದಾಳಿಂಬೆ ಹಣ್ಣುಗಳನ್ನು ತಿನ್ನಲು ಕೊಟ್ಟರೆ, ಮತ್ತೆ ಕೆಲವರು ವಿವಿಧ ತರಹದ ಕಿಚಡಿ, ಬೇಯಿಸಿದ ತರಕಾರಿ ಮತ್ತು ಬಗೆಬಗೆಯ ಕಷಾಯ ಅಥವಾ ಜ್ಯೂಸ್ ಅಥವಾ ಕ್ವಾಥ್‌ಗಳನ್ನು ಕುಡಿಯಲು ಪಡೆಯಬೇಕು.

ಮತ್ತೆ ಸುಮಾರು ಒಂದು ಒಂದೂವರೆ ಗಂಟೆ ಅವಧಿಯಲ್ಲಿ ಪಂಚಕರ್ಮ ಚಿಕಿತ್ಸಾಕೇಂದ್ರದಲ್ಲಿ 'ಫುಲ್ ಬಾಡಿ ಮಸಾಜ್". ಇಬ್ಬರು ಪರಿಚಾರಕರು ಕಾಲಿನಿಂದ ಹಿಡಿದು ಕತ್ತಿನವರೆಗೆ ಎರಡು ಮೂರು ನೋವಿನ ಎಣ್ಣೆಗಳ ಮಿಶ್ರಿತ ಎಣ್ಣೆಯಿಂದ ಮಸಾಜ್ ಮಾಡಿಸಿಕೊಳ್ಳುವ ಪರಿ ಅನುಭವಿಸಿಯೇ ತಿಳಿಯಬೇಕು. ಹಿಂಗಾಲು, ಬೆನ್ನು ಕತ್ತುಗಳಿಗೆ ಎಣ್ಣೆ ಹಚ್ಚುವುದರಿಂದ ಹಿಡಿದು ಅವರು ಕೈಯಿಂದ ಎಣ್ಣೆಯನ್ನು ತಿಕ್ಕುವ, ಉಜ್ಜುವ, ಒತ್ತುವ, ಮುಷ್ಠಿಗಳಿಂದ ತೀಡುವುದರಿಂದ ಸಿಗುವ ಆ ಸುಖ ಸಮಾಧಾನ ಆಹಾ!. ತದನಂತರ 'ಸ್ಟೀಮ್ ಬಾತ್ ಟಬ್' ನಲ್ಲಿ ಕೂರಿಸಿ ಇಡೀ ಮೈ ಬೆವರುವಂತೆ ಮಾಡುತ್ತಾರೆ. ಆಮೇಲೆ ತಲೆಗೆ ಎಣ್ಣೆಯನ್ನು ನಮಿರಾಗಿ ಹಚ್ಚಿ ಮಾಲಿಷ್ ಮಾಡುತ್ತಾರೆ. ಔಷಧಿಯುಕ್ತ ಹಬೆಯನ್ನು ಮೂಗಿನಲ್ಲಿ ಒಳತೆಗೆದುಕೊಂಡು ಬಾಯಿಯ ಮೂಲಕ ನಿಶ್ವಾಸ ಕ್ರಮದ ಚಿಕಿತ್ಸೆಯೂ ಇರುತ್ತದೆ. ಆರು ದಿನಗಳ ಅವಧಿಯಲ್ಲಿ ಮೂರು ದಿನ ಪಂಚಕರ್ಮ ಚಿಕಿತ್ಸಾ ಕೇಂದ್ರದಲ್ಲೂ ಮತ್ತೆ ಮೂರು ದಿನ ಪ್ರಕೃತಿ ಚಿಕಿತ್ಸಾ ಕೇಂದ್ರದಲ್ಲೂ ಕೊಬ್ಬರಿ ಅಥವಾ ಸಾಸಿವೆ ಎಣ್ಣೆ ಮಸಾಜ್ ಚಿಕಿತ್ಸೆಯನ್ನು ಪಡೆಯುವಂತೆ ನಿರ್ದೇಶಿಸಿದ್ದರು. ಪ್ರಕೃತಿ ಚಿಕಿತ್ಸಾ ಕೇಂದ್ರದಲ್ಲಿ ಎಣ್ಣೆ ಮಸಾಜ್ ಅದೇ ರೀತಿ ಮಾಡುತ್ತಿದ್ದರೂ ಸ್ಟೀಮ್ ಬಾತ್ ಬದಲಾಗಿ ಬಿಸಿನೀರಿನಲ್ಲಿ ಕೂರಿಸುವ, ಹಬೆ ಕೋಣೆಯಲ್ಲಿ ನಿಲ್ಲಿಸುವ ಮತ್ತು ಹದಾ ಬಿಸಿನೀರನ್ನು ಮೈಕೈ ತಲೆಗಳಿಗೆ ಪಂಪ್ ಮಾಡಿಸುವ ಕ್ರಿಯೆಗೆ ಒಳಪಡಿಸುತ್ತಿದ್ದರು.

ತದನಂತರ ರೂಮಿಗೆ ಹೋಗಿ ಸ್ನಾನ ಪೂರೈಸಿ, ಸ್ವಲ್ಪ ವಿಶ್ರಾಂತಿ ಪಡೆದಮೇಲೆ ಮಧ್ಯಾಹ್ನ ಉಪಾಹಾರ ಸೇವನೆಗೆ ಉಪಾಹಾರ ಗೃಹಕ್ಕೆ. ವೈದ್ಯ- ನಿರ್ದೇಶಿತ ಒಂದು ಧಾನ್ಯದ ಕಿಚಡಿಯೋ ಅಥವಾ ಬೇಯಿಸಿದ ತರಕಾರಿ ಜತೆ ತರಕಾರಿ ಸೂಪ್ ಮತ್ತು ಕಷಾಯ ಕುಡಿದು ರೂಮಿಗೆ ಮರಳಿ ವಿಶ್ರಾಂತಿ. ಅಪರಾಹ್ನ ನಾಲ್ಕು ಗಂಟೆ ಸುಮಾರಿಗೆ ಮತ್ತೆ ಚಿಕಿತ್ಸಾ ಕೇಂದ್ರಕ್ಕೆ ತೆರಳಿ ಶೃಂಗಿ ಚಿಕಿತ್ಸೆಯನ್ನು ಪಡೆಯುವುದು. ಶೃಂಗಿ ಚಿಕಿತ್ಸೆಯಲ್ಲಿ ಮನುಷ್ಯನ ನೋವಿರುವ ಭಾಗಕ್ಕೆ ಸಣ್ಣ ಸೂಜಿಯಿಂದ ಏಳೆಂಟು ಬಾರಿ ಚುಚ್ಚಿ ರಕ್ತ ಬರುವಂತೆ ಮಾಡುತ್ತಾರೆ. ನಂತರ ಆ ಭಾಗಕ್ಕೆ ಯಾವುದೋ ಮೃಗದ ಶೃಂಗ(ಕೊಂಬು)ವನ್ನಿಟ್ಟು ಅದರ ನೆರವಿನಿಂದ ಸ್ವಲ್ಪ ರಕ್ತವನ್ನು ಹೀರಿದಂತೆ ಹೊರಗೆಳೆಯುತ್ತಾರೆ. ಈ ಚಿಕಿತ್ಸೆಯಿಂದ ಮೈಯ ಆ ಭಾಗದ ನೋವು ಉಪಶಮನವಾಗಿದೆ ಎಂದು ಚಿಕಿತ್ಸೆ ಪಡೆದವರ ಅಂಬೋಣ.

ಬೆಳಗಿನಿಂದ ಸಾಯಂಕಾಲದವರೆಗೂ ಯಜ್ಞಮಂಟಪದಲ್ಲಿ ಇಪ್ಪತ್ತರಿಂದ ಮೂವತ್ತು ಜನ ಉಪಚಾರಕರು ಆಕ್ಯುಪ್ರೆಶರ್ ಚಿಕಿತ್ಸೆ ಮತ್ತು ಹವನ ಚಿಕಿತ್ಸೆ ನೀಡುವುದಕ್ಕಾಗಿ ಕಾಯುತ್ತಿರುತ್ತಾರೆ. ನಮ್ಮ ದಿನದ ಬಿಡುವಿನ ವೇಳೆಯಲ್ಲಿ ಅಲ್ಲಿಗೆ ಹೋಗಿ ಈ ಎರಡೂ ಚಿಕಿತ್ಸೆಗಳನ್ನು ಪಡೆಯಬಹುದು. ಹವನ ಚಿಕಿತ್ಸೆಯಲ್ಲಿ, ಯಜ್ಞಕುಂಡದ ಸುತ್ತ ಏಳೆಂಟು ಆರೋಗ್ಯಾರ್ಥಿಗಳನ್ನು ಕುಳ್ಳಿರಿಸಿ ಪುರೋಹಿತರು ಗಾಯತ್ರಿ ಮತ್ತು ಮೃತ್ಯುಂಜಯ ಮಂತ್ರಗಳ ಸಹಿತ ಔಷಧಿಯುಕ್ತ ಗಿಡಮೂಲಿಕೆಗಳಿಂದ ತಯಾರಿಸಿದ ಆಹುತಿಯನ್ನು ತುಪ್ಪದ ಸಮೇತ ಅಗ್ನಿಗೆ ಅರ್ಪಿಸಲು ಸಹಕರಿಸುತ್ತಾರೆ. ಹವನದಿಂದ ಉಂಟಾದ ಧೂಮದಿಂದ ಮನುಷ್ಯನ ದೇಹಾರೋಗ್ಯ ಉತ್ತಮಗೊಳ್ಳುತ್ತದೆ ಹಾಗೂ ಬಾಹ್ಯ ವಾತಾವರಣವೂ ನಿರ್ಮಲವಾಗುತ್ತದೆ ಎನ್ನುವ ಕ್ರಿಯೆ ಇದಾಗಿದೆ.

ಸಾಯಂಕಾಲ ಐದರಿಂದ ಆರು ಗಂಟೆಯವರೆಗೆ ಕಷಾಯ ಯಾ ಕ್ವಾಥ್ ಯಾ ಸೂಪ್ ಸೇವನೆ. ನಂತರ ಯೋಗಗ್ರಾಮದ ಸ್ವಚ್ಛ ಆವರಣದ ಸುತ್ತ ವಾಯುಸೇವನೆಗೆ ಹೋಗಬಹುದು. ದೊಡ್ಡದಾದ ಕೆರೆಯೊಂದಿದ್ದು ಅದರ ಸುತ್ತ ಇರುವ ಉದ್ಯಾನವನದಲ್ಲೂ ವಿಹರಿಸಬಹುದು. ಅಥವಾ ಇಷ್ಟವಿದ್ದವರಿಗೆ ಅದೇ ಕೆರೆಯಲ್ಲಿ ದೋಣಿವಿಹಾರಕ್ಕೂ ಅವಕಾಶವಿದೆ. ಜತೆಗೆ ಹೋದ ಸಣ್ಣ ಮಕ್ಕಳಿಗೆ ಕುದುರೆ ಸವಾರಿ ಅವಕಾಶವೂ ಇದೆ. ಇಡೀ ಆವರಣದಲ್ಲಿ ಎಲ್ಲೆಲ್ಲೂ ಹಸಿರು ತುಂಬಿಕೊಂಡಿದೆ. ವಿವಿಧ ತಳಿಯ ಮಾವು, ನೇರಳೆ, ಪೇರಳೆ, ಮರಸೇಬು, ಜಂಬುನೇರಳೆ, ಅವಕಾಡೋ, ಡ್ರಾಗನ್ ಫ್ರುಟ್ ಹಣ್ಣುಗಳ ಗಿಡಮರಗಳು, ಹಲವು ತರಹದ ಹೂ ಬಿಡುವ ಗಿಡಗಳು, ಬಳ್ಳಿಯಲ್ಲಿ ಬಿಡುವ ತರಕಾರಿ ಚಪ್ಪರಗಳು, ವಿವಿಧ ಗಿಡಮೂಲಿಕೆಗಳು, ಪ್ರತಿ ಕುಟೀರ, ವಾಸಗೃಹಗಳ ಅಸುಪಾಸಿನಲ್ಲಿ ದೊಡ್ಡ ಹಸಿರು ಉದ್ಯಾನಗಳು, ಇದರೊಂದಿಗೆ ಸ್ವಚ್ಛ ಹಾದಿ,

ಬೀದಿ ಮತ್ತು ರಸ್ತೆಗಳಿಂದ ಮನಸ್ಸು ಮುದಗೊಳ್ಳುತ್ತದೆ. ಯೋಗಗ್ರಾಮದ ಹಸಿರು ಪ್ರದೇಶದಲ್ಲಿ ಎಕರೆಗಟ್ಟಲೆ ಜಾಗಗಳಲ್ಲಿ ಹರಡಿರುವ ಸೌತೆಕಾಯಿ ಬಳ್ಳಿ ಚಪ್ಪರ, ಸೋರೆಕಾಯಿ ಬಳ್ಳಿ ಚಪ್ಪರ, ನೆಲ್ಲಿಕಾಯಿ ತೋಪ್ಪಲುಗಳನ್ನು ನೋಡಬಹುದು. ಒಂದು ಪ್ರದೇಶದಲ್ಲಂತೂ ನೂರಾರು ಜೇನು ಸಾಕಾಣಿಕೆಯ ಪೆಟ್ಟಿಗೆಗಳನ್ನು ನೋಡಿದೆವು. ಓಡಾಡಲು ಅಶಕ್ತರಾದವರಿಗಂತೂ ಒಂದೆಡೆಯಿಂದ ಇನ್ನೊಂದೆಡೆ ತೆರಳಲು ಪ್ರತಿ ಐದು ನಿಮಿಷಕ್ಕೊಂದರಂತೆ ಓಡಾಡುವ ಬ್ಯಾಟರಿಚಾಲಿತ ವಾಹನಗಳ ವ್ಯವಸ್ಥೆ ಇದೆ. ಅಂದರೆ ಕರ್ಕಶ ಶಬ್ದದ ವಾಹನಗಳು ಮತ್ತು ಅದರಿಂದಾಗುವ ಶಬ್ದಮಾಲಿನ್ಯ ಮತ್ತು ಪರಿಸರ ಮಾಲಿನ್ಯಕ್ಕೆ ಇಲ್ಲಿ ಅವಕಾಶವೇ ಇಲ್ಲ. ಕಾಣುವುದಿಲ್ಲ.

ದೇಶ ವಿದೇಶಗಳಿಂದ ಆರೋಗ್ಯಾರ್ಥಿಗಳು ಇಲ್ಲಿಗೆ ಬಂದು ೭-೧೦-೧೫ ದಿನಗಳ ಶಿಬಿರದಲ್ಲಿ ಭಾಗವಹಿಸಿ ಸ್ವಾಸ್ಥ್ಯ ಮಾರ್ಗವನ್ನು ಕಂಡುಕೊಂಡು ಆರೋಗ್ಯವಂತರಾಗಿ ತೆರಳುತ್ತಾರೆ. ಅದೂ ಅಲ್ಲದೆ ವಿಶೇಷವಾಗಿ ದೀರ್ಘಕಾಲದಿಂದ ಅನೇಕ ರೀತಿಯ ಕಾಯಿಲೆ ದೇಹಾರೋಗ್ಯಗಳಿಂದ ಬಾಧಿತರಾಗಿದ್ದವರು ಪತಂಜಲಿ ಯೋಗ ಮತ್ತು ಆಯುರ್ವೇದ ಔಷಧಿಗಳಿಂದ ಕ್ಯಾನ್ಸರ್, ಮಧುಮೇಹ, ರಕ್ತದೊತ್ತಡ, ಸಂಧಿವಾತ ಮತ್ತು ಸ್ಥೂಲದೇಹ ಮುಂತಾದ ಸಮಸ್ಯೆಗಳಿಂದ ಗುಣಮುಖರಾಗಿ ಬಂದು ಬಾಬಾ ರಾಮದೇವ್ ಅವರಿಗೆ ಕೃತಜ್ಞತೆ ಸಲ್ಲಿಸಲು ಮತ್ತೆ ಮತ್ತೆ ಇಲ್ಲಿಗೆ ಭೇಟಿ ನೀಡುವವರೂ ಇರುತ್ತಾರೆ. ವರ್ಷದ ಪ್ರತಿದಿನವೂ "ಯೋಗಗ್ರಾಮ" ಸದಾ ಚಟುವಟಿಕೆಯಿಂದಿರುವುದು ಇದಕ್ಕೆ ಸಾಕ್ಷಿ.

ಆಧುನಿಕ ಸಾಮಾಜಿಕ ವಾತಾವರಣದಲ್ಲಿ ಸನಾತನ ಸಂಸ್ಕೃತಿಯ ಜೀವನಶೈಲಿ ಮತ್ತು ಆಹಾರ ಪದ್ಧತಿಯನ್ನು ನೆನಪಿಸಿ ದೇಹಾರೋಗ್ಯವನ್ನು ಪುನಶ್ಚೇತನಗೊಳಿಸುವುದೇ ಯೋಗಗ್ರಾಮದ ಆಶಯ ಮತ್ತು ಉದ್ದೇಶ. ಒತ್ತಡದ ಬದುಕಿನಿಂದಾಗಿ ಕಳೆದುಹೋಗುತ್ತಿರುವ ಸುಖ ಸಂತೋಷ ನೆಮ್ಮದಿಗಳನ್ನು ಪಡೆಯಲು "ಯೋಗಗ್ರಾಮ" ಒಂದು ಮಾದರಿ ಕೇಂದ್ರ.

ಕಳೆದ ಐವತ್ತು ವರ್ಷಗಳಿಂದಲೂ ಅಧಿಕ ವರ್ಷಗಳಿಂದ ಯೋಗಗುರು ರಾಮದೇವ್ ಅವರು ಯೋಗಾಭ್ಯಾಸ, ಧ್ಯಾನ ಮತ್ತು ಭಾರತೀಯ ಸಂಸ್ಕೃತಿಯ ಕುರಿತಾದ ಪ್ರವಚನಗಳಿಂದ ಮನೆಮಾತಾಗಿದ್ದಾರೆ. ಇವರೊಬ್ಬ ವೀರ ಸನ್ಯಾಸಿ. ಧೈರ್ಯ ಶೌರ್ಯ ಮುಂದಾಳತ್ವ ಗುಣಗಳ ತತ್ತ್ವಜ್ಞಾನಿ. ಅನ್ವೇಷಕ ವ್ಯಕ್ತಿತ್ವದ ಜ್ಞಾನಪ್ರಚಾರಕ. ಛಲ, ಹಟ, ಕಾಠಿಣ್ಯ ಸ್ವಭಾವ ಹೊಂದಿರುವ ಅಗ್ರೇಸರನೂ ಹೌದು, ವಿನಮ್ರ ದೇಶಭಕ್ತನೂ ಹೌದು. ಯೋಗ ಮತ್ತು ಸನಾತನ ಧರ್ಮಕ್ಕಾಗಿ ಜೀವನವನ್ನೇ ಮುಡಿಪಾಗಿಟ್ಟುಕೊಂಡು ಇದರ ಅಗ್ರೇಸರ ಪ್ರಚಾರಕರೆಂದು ವಿಶ್ವಮಾನ್ಯರಾಗಿದ್ದಾರೆ.



ಮತ್ತೊಬ್ಬ ಸಾಹಸಿ ವ್ಯಕ್ತಿತ್ವದ ಆಚಾರ್ಯ ಬಾಲಕೃಷ್ಣ ಅವರು ನೂತನ ಸೃಷ್ಟಿಯ ಕನಸುಗಾರ. ವೇದಪುರಾಣ, ಆಯುರ್ವೇದ ಸಂಹಿತೆಯ ಸಂಶೋಧಕ, ಗಿಡಮೂಲಿಕೆ ಮತ್ತು ಔಷಧೀಯ ವೈದ್ಯವಿಜ್ಞಾನಿ, ಅಪ್ರತಿಮ ಬರಹಗಾರ, ಭಾರತೀಯ ಔದ್ಯಮಿಕ ರಂಗದ ನಿಷ್ಣಾತ ಉದ್ಯಮಿಯಾಗಿ, ಆಡಳಿತ ತಜ್ಞರಾಗಿ ಗುರುತಿಸಲ್ಪಟ್ಟಿದ್ದಾರೆ. ಬಾಬಾ ರಾಮದೇವ್ ಮತ್ತು ಆಚಾರ್ಯ ಬಾಲಕೃಷ್ಣ ಅವರಿಬ್ಬರೂ ಕೂಡಿಕೊಂಡು ನಲವತ್ತು ವರ್ಷಗಳ ಹಿಂದೆ ಪತಂಜಲಿ ಯೋಗಪೀಠವನ್ನು ಸ್ಥಾಪಿಸಿ ಯೋಗ, ಆಯುರ್ವೇದ, ಸನಾತನ ವಿದ್ಯೆಗಳ ಪುನರುತ್ಥಾನಕ್ಕೆ ಶ್ರಮಿಸುತ್ತಿದ್ದಾರೆ. ಆಚಾರ್ಯ ಗುರುಕುಲಂ, ಆಯುರ್ವೇದ ಕಾಲೇಜು, ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿ ಒಂದು ರೀತಿಯ ಭಾರತೀಯ ಸಾಂಸ್ಕೃತಿಕ ಕ್ಷೇತ್ರದಲ್ಲಿ ಹೊಸಯುಗಕ್ಕೆ ಕಾರಣರಾಗಿದ್ದಾರೆ. ಇಲ್ಲಿ ಹೆಣ್ಣು-ಗಂಡು, ಜಾತಿ, ಮತ, ಕುಲ, ಭಾಷೆಗಳ ಭೇದವಿಲ್ಲದೆ ಎಲ್ಲರಿಗೂ ಸಮಾನ ಶಿಕ್ಷಣ ವ್ಯವಸ್ಥೆ ಇದೆ. ಇಲ್ಲಿ ಓದಿರುವವರು ಇಲ್ಲಿನ ವಿದ್ಯಾಪೀಠ, ಆಚಾರ್ಯ ಗುರುಕುಲಂ, ಆಯುರ್ವೇದ ಆಸ್ಪತ್ರೆ, ಯೋಗಗ್ರಾಮ, ವೆಲ್‌ನೆಸ್ ಕೇಂದ್ರಗಳಲ್ಲೇ ಪೂರ್ಣಪ್ರಮಾಣದ ಉದ್ಯೋಗಸ್ಥರಾಗಿ ಸೇವೆ

ಮಾಡುತ್ತಿರುವುದು ವಿಶೇಷ. ದೇಶ ವಿದೇಶಗಳ ಆಯುರ್ವೇದ ವೈದ್ಯರು ಇಲ್ಲಿಗೆ ಬಂದು ಆಯುರ್ವೇದ ತರಬೇತಿ ಪಡೆಯುತ್ತಾರೆ. ಇದರಿಂದಾಗಿ ದೇಶದ ಎಲ್ಲೆಡೆಯಲ್ಲೂ ಈಗ ನಾವು ಪತಂಜಲಿ ಆಯರ್ವೇದ ಚಿಕಿತ್ಸಾ ಕೇಂದ್ರಗಳನ್ನು ನೋಡಬಹುದಾಗಿದೆ. ಇಷ್ಟೇ ಅಲ್ಲದೆ, ಪತಂಜಲಿ ಹೆಸರಿನಲ್ಲಿ ಆಯುರ್ವೇದ ಸಂಶೋಧನಾ ಕೇಂದ್ರ, ಔಷಧಿ ತಯಾರಿಕಾ ಸಂಸ್ಥೆ ಆರಂಭಿಸಿ, ಎಲ್ಲ ರೋಗಗಳಿಗೂ ಪರಿಹಾರ ಒದಗಿಸುವ ಔಷಧಗಳನ್ನು ಉತ್ಪಾದಿಸಲಾಗುತ್ತಿದೆ. ಇದಲ್ಲದೆ ಮೈ ಸಾಬೂನು, ಸೌಂದರ್ಯ ವರ್ಧಕಗಳನ್ನು ಉತ್ಪಾದನೆ ಮತ್ತು ಮಾರಾಟ ವಿಭಾಗದಲ್ಲೂ ಖ್ಯಾತಿ ಗಳಿಸಿದ್ದಾರೆ. ಇಷ್ಟು ಮಾತ್ರವಲ್ಲದೆ ಉತ್ತಮ ಗುಣಮಟ್ಟದ ಅಕ್ಕಿ, ಬೇಳೆ ಮುಂತಾದ ಖಾದ್ಯ ಪದಾರ್ಥಗಳು, ಖಾದ್ಯ ತೈಲಗಳು, ದಿನಸಿ ಪದಾರ್ಥಗಳನ್ನು ಉತ್ತಮ ರೀತಿಯಲ್ಲಿ ಸಂಸ್ಕರಿಸಿ ಉತ್ಪಾದಿಸಿ ಭಾರತದ ಮಾರುಕಟ್ಟೆಯನ್ನು 'ಪತಂಜಲಿ' ದೊಡ್ಡ ಮಟ್ಟದಲ್ಲಿ ಪ್ರವೇಶ ಮಾಡಿ ಮಾರುಕಟ್ಟೆಯಲ್ಲಿ ಹಲವು ಬ್ರಾಂಡೆಡ್ ಉತ್ಪನ್ನದಾರರಿಗೆ ಬೆರಗು ಮೂಡಿಸಿದೆ.

ಆಧುನಿಕ ಸ್ಪರ್ಶದೊಂದಿಗೆ ಸ್ವದೇಶೀ ನಿರ್ಮಿತ ನಿಸರ್ಗ ರಮಣೀಯ ಗ್ರಾಮ ಆವರಣ, ಸ್ವದೇಶೀ ಕೃಷಿ ಪದ್ಧತಿ, ದೇಶೀ ಆಹಾರ ಶೈಲಿ, ದೇಶೀ ವೈದ್ಯಕ್ರಮದ ಮೂಲಕ ನಾಗರಿಕರ ಆರೋಗ್ಯ ರಕ್ಷಣೆ ಆಶಯದೊಂದಿಗೆ "ಆತ್ಮನಿರ್ಭರ ಭಾರತ" ಪರಿಕಲ್ಪನೆಯನ್ನು ಸಾಕಾರ ರೂಪದ ಬೃಹತ್ ಮಾದರಿಯಾಗಿ "ಯೋಗಗ್ರಾಮ" ಕಂಗೊಳಿಸುತ್ತಿದೆ ಎಂದು ಹೇಳಬಹುದು.

***

ಅಮೃತ ಧಾರೆ

– ಗಿರಿಜಾರಾಜ್. ಎಲ್

ಕಣ್ಸೆಳೆಯಿತು ಅಲ್ಲೊಂದು
ದೃಶ್ಯ, ಭಾವನಾತ್ಮಕ!

ಯಾವ ಜೀವಗಳಾದರೇನು?
ಆವ ರೂಪಗಳಲಿದ್ದರೇನು?
ಒಳಗಿದ್ದರಾಯಿತು, ಪ್ರೀತಿಗೆ
ಮಿಡಿವ ಒಂದು ಹೃದಯ!

ಸಾಕಿದ ಒಡೆಯನ
ತೊಡೆದಿಂಬಿನ ಮೇಲೆ
ನಿರಾಳ ನಿದ್ದೆ! ತಾಯಿ
ಮಡಿಲಲಿ ಮಲಗಿದಂತೆ
ನಾಯಿ ಜನುಮವೆಂಬ
ಕ್ಷುಲ್ಲಕತೆ ಇಲ್ಲಿಲ್ಲ!
ನಾರಾಯಣ ಸ್ವರೂಪ
ಎಂಬ ಉನ್ನತ ಭಾವ

ಪ್ರೀತಿ ಅಮೃತಧಾರೆ
ಹರಿಯುತಿರಲು,
ಎದೆಯಿಂದಲೆದೆಗೆ
ಎರಡು ಜೀವಗಳು
ಬೆರೆತಿವೆ ಹೀಗೆ!

ಒಡೆಯನ ಕೈಯಲ್ಲಿದೆ
ಯಾವುದೋ ಪುಸ್ತಕ
ಓದುವ ಕಾವ್ಯ ಭಾರತವೋ,
ರಾಮಾಯಣವೋ
ಜೋಗುಳದ ಹಾಗೆ!

ಪ್ರಕೃತಿಯ ಕಣಕಣದಲಿದೆ
ಸಾಮರಸ್ಯಭಾವದ ಒಂದು
ಭಾವನಾತ್ಮಕ ದೃಶ್ಯ ಕಾವ್ಯ
ಒಲುಮೆಯ ಮಹಿಮೆ
ಅರಿತವರಿಗಷ್ಟೇ ವೇದ್ಯ!

***

ಪಾದ್ರಿ ಹಯಾಸಿಂತನ ಕತೆ

– ವಿಠ್ಠಲ. ಇಜೇರಿ

ಸ್ವಾಮಿ ವಿವೇಕಾನಂದರು ತಮ್ಮ ಸಾರ್ವಜನಿಕ ಜೀವನದ ಪ್ರತಿಯೊಂದು ಘಟನೆಗಳನ್ನು ದಾಖಲಿಸುತ್ತಿದ್ದರು. ಆ ಕೆಲಸವನ್ನು ಅಚ್ಚುಕಟ್ಟಾಗಿ ಅವರ ಸೆಕ್ರೆಟರಿ ಗುಡ್ವಿನ್ ಮಾಡುತ್ತಿದ್ದನು. ಹಾಗಾಗಿ ಅವರು ಹೋದ ಸ್ಥಳ, ಜೊತೆಗೆ ಇದ್ದ ಪ್ರತಿಯೊಬ್ಬರೊಂದಿಗೆ ನಡೆದ ಮಾತುಕತೆಗಳು ಇಂದು ನಮಗೆ ಲಭ್ಯ ಮತ್ತು ವಿವೇಕಾನಂದರನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು ಸಹಕಾರಿ.

ಸ್ವಾಮಿ ವಿವೇಕಾನಂದರು ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ವಿಯೆನ್ನ, ಟರ್ಕಿ, ಗ್ರೀಸ್, ಈಜಿಪ್ಟ್ ಮತ್ತು ಜೇರುಸಲೆಮ್ ಹೀಗೆ ಪರಿವ್ರಾಜಕರಾಗಿ ತಿರುಗಾಡುವಾಗ ಕಾನಸ್ಟಾಂಟಿನೋಪಲ್ (ಈಗಿನ ಇಸ್ತಾಂಬೂಲ) ಯಾತ್ರೆಯಲ್ಲಿ ಹಯಾಸಿಂತ ದಂಪತಿಗಳು ಜೊತೆಗೆ ಇದ್ದರು.

ಸ್ವಾಮೀಜಿಗೆ ಹಯಾಸಿಂತರ ಹಿತವಾದ ಮೃದುವಚನ, ದೈವಭಕ್ತಿ, ಸಮಾಜಮುಖಿ ಕಾರ್ಯಗಳು ಇಷ್ಟವಾದರೆ ಹಯಾಸಿಂತರಿಗೆ ಸ್ವಾಮಿ ವಿವೇಕಾನಂದರ ತ್ಯಾಗಜೀವನ ಮತ್ತು ವಿಚಾರಧಾರೆಗಳು ಇಷ್ಟವಾದವು. ಹಯಾಸಿಂತರು ವಿವೇಕಾನಂದರ ನುಡಿಗಳಲ್ಲಿ ವಿದ್ಯುತ್ ಶಕ್ತಿ, ತಮಸ್ಸನ್ನು ಕಳೆಯುವ ಜ್ಞಾನ ಕಿರಣ ಮತ್ತು ಜೀವನವನ್ನು ಬದಲಿಸುವ ಶಕ್ತಿ ಕಂಡರು. ಹಯಾಸಿಂತರು ಪಾದ್ರಿಯಾಗಿದ್ದವರು ಸಂನ್ಯಾಸ ತೊರೆದಿದ್ದರು. ಆ ಬಗ್ಗೆ ಅವರಿಗೆ ಬೇಸರವಿತ್ತು. ಅವರು ಚರ್ಚುಗಳ ಸಂಬಂಧ ತೊರೆದಿದ್ದರೂ ಕ್ರಿಶ್ಚಿಯನ್ನರು ಮತ್ತು ಮಹಮ್ಮದೀಯರ ಮಧ್ಯೆ ಬಾಂಧವ್ಯ ವೃದ್ಧಿಸುವ ಕಾಯಕ ಕೈಗೊಂಡಿದ್ದರು.

ಮೂಲದಲ್ಲಿ ಹಯಾಸಿಂತರು ಪ್ಯಾರಿಸ್ಸಿನ ಪಾದ್ರಿ. ಜನರು ಅವರನ್ನು ಎರಡು ಸ್ಟೂಲಿನೊಳಗೆ ಸಿಲುಕಿದ ಮನುಷ್ಯ ಅನ್ನುತ್ತಿದ್ದರು. ಪಾದ್ರಿ ಹಯಾಸಿಂತರು ಕಟ್ಟುನಿಟ್ಟಾದ ರೋಮನ್ ಕ್ಯಾಥೋಲಿಕ್ ಸನ್ಯಾಸಿಗಳು. ಅವರು ತಮ್ಮ ವಿದ್ವತ್ತು, ತಪಸ್ಸು ಮತ್ತು ವಾಕ್ ಪಟುತ್ವಗಳಿಂದ ಕ್ಯಾಥೋಲಿಕ್ ಪ್ರಪಂಚದಲ್ಲಿ ತುಂಬಾ ಪ್ರಖ್ಯಾತರಾಗಿದ್ದರು. ಅವರ 40ನೇ ವಯಸ್ಸಿನಲ್ಲಿ ಚೆಲುವೆಯೊಬ್ಬಳ ಪರಿಚಯವಾಗಿ ಆಕೆಯನ್ನು ಮದುವೆಯಾದರು. ಕ್ಯಾಥೋಲಿಕ್ ಪಾದ್ರಿಗಳು ಮದುವೆಯಾಗುವಂತಿಲ್ಲ. ಆದುದರಿಂದ ಪ್ರೊಟೆಸ್ಟಂಟರು ವಿದ್ವಾಂಸ ಹಯಾಸಿಂತರನ್ನು ತಮ್ಮ ಚರ್ಚಿಗೆ ಅಹ್ವಾನಿಸಿದರು. ರೋಮನ್ ಕ್ಯಾಥೋಲಿಕ್ ಪಂಥದ ಪೋಪರಿಗೆ ಹಯಾಸಿಂತರು ಪ್ರೊಟೆಸ್ಟಂಟರತ್ತ ಹೋಗದೆ ಕ್ಯಾಥೋಲಿಕ್ ಆಗಿಯೇ ಉಳಿಯಬೇಕೆಂಬ ಇಚ್ಛೆಯಿತ್ತು. ಅವರು ಹಯಾಸಿಂತರಿಗೆ ಗ್ರೀಕ್ ಕ್ಯಾಥೋಲಿಕ್ ಚರ್ಚಿನ ಪಾದ್ರಿಯಾಗಲು ಹೇಳಿದರು. ಗ್ರೀಕ್ ಕ್ಯಾಥೋಲಿಕ್ ಪಾದ್ರಿಗಳು ಒಂದು ಸಲ ಮದುವೆಯಾಗ ಬಹುದಿತ್ತು. ಆದರೆ ಹಯಾಸಿಂತರ ಪತ್ನಿಯ ಹಿಡಿತ ಬಲು ಬಿಗಿ. ಆಕೆ ಹಯಾಸಿಂತರಿಗೆ ಕ್ಯಾಥೋಲಿಕ್ ಇಲ್ಲವೆ ಪ್ರೊಟೆಸ್ಟಂಟ್ ಯಾವ ಪಾದ್ರಿಯಾಗಲೂ ಬಿಡದೆ, ತನ್ನ ಗಂಡನನ್ನಾಗಿ ಉಳಿಸಿಕೊಂಡಳು. ಈ ಎಲ್ಲ ಸಂದಿಗ್ಧತೆಯ ಕಾರಣ ಹಯಾಸಿಂತರು ಜನರ ಪಾಲಿಗೆ ಎರಡು ಸ್ಟೂಲುಗಳ ಮಧ್ಯೆ ಸಿಲುಕಿದ ವ್ಯಕ್ತಿಯಾಗಿದ್ದರು. ಪ್ಯಾರಿಸ್ಸಿನಲ್ಲಿ ಕ್ಯಾಥೋಲಿಕ್ಕರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು. ಹಯಾಸಿತರಂತಹ ಅದ್ಭುತ ಸಂತನನ್ನು ಹಾಳು ಮಾಡಿದಳೆಂದು ಅವರ ಹೆಂಡತಿಯನ್ನು ದ್ವೇಷಿಸುತ್ತಿದ್ದರು.

ಹಯಾಸಿಂತರ ಪತ್ನಿ ಒಮ್ಮೆ ಒಬ್ಬ ರಂಗನಟಿಯ ನಾಯಕ ನಟನೊಡನೆ ಇರುವ ಸಂಬಂಧದ ಕುರಿತು ಮೂದಲಿಸಿದಾಗ ಆ ನಟಿ, "ನಾನೋ ಒಬ್ಬ ಸಾಮಾನ್ಯನೊಡನೆ ಇದ್ದೇನೆ, ನೀನು ಸುಪ್ರಸಿದ್ದ ಸನ್ಯಾಸಿಯನ್ನೇ ಅವನ ಪಥದಿಂದ ದೂರಮಾಡಿ ಗೃಹಸ್ಥನನ್ನಾಗಿಸಿದೆ " ಎಂದು ಮರು ನುಡಿದಳು.

ಸ್ವಾಮಿ ವಿವೇಕಾನಂದರು ಹೇಳುತ್ತಾರೆ, "ಪ್ರತಿಯೊಂದು ದೇಶದಲ್ಲಿ ಸ್ತ್ರೀ, ಪುರುಷರನ್ನು, ಜನರನ್ನು ಮತ್ತು ಘಟನೆಗಳನ್ನು ಅರ್ಥ ಮಾಡಿಕೊಳ್ಳುವ, ತೀರ್ಪುಕೊಡುವ, ನೋಡುವ ವಿಧಾನ ವಿಭಿನ್ನ. ದೇಶ ಕಾಲಗಳ ಇತಿಮಿತಿಗಳನ್ನು ಮೀರಿದ ಘನತೆ, ಅರ್ಥ ಮಾಡಿಕೊಳ್ಳುವ ಕ್ಷಮತೆ, ಸನ್ಯಾಸಿ ಜೀವನಕ್ಕೆ ಇರುವುದು..." ಎಂದು. *(ರಿನಸ್ಸಿಸ್ ಆಫ್ ವಿವೇಕಾನಂದ. ಆಧಾರಿತ)*


***

ಪುಸ್ತಕ ಪರಿಚಯ

"ಅಶ್ವತ್ಥಾಮೋ ಹತಃ" ~ ಕಥಾ ಸಂಕಲನ

ಲೇಖಕಿ: ಸಿ. ಬಿ. ಶೈಲಾ ಜಯಕುಮಾರ್

–ಶೀಲಾ ಅರಕಲಗೂಡು



ಅಶ್ವತ್ಥಾಮೋ ಹತಃ (ಕಥಾ ಸಂಕಲನ)
ಲೇಖಕಿ: ಸಿ.ಬಿ.ಶೈಲಾ ಜಯಕುಮಾರ್
ಪ್ರಥಮ ಮುದ್ರಣ: 2020 – ಪುಟಗಳು: 148

ನಾನು ಇಂದು ಈಗಾಗಲೇ ಹಲವಾರು ಮಂದಿ ಅವಲೋಕನ ಮಾಡಿರಬಹುದಾದಂತಹ ಪುಸ್ತಕವನ್ನೇ ಮತ್ತೊಮ್ಮೆ ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಡಲು ಇಷ್ಟಪಡುತ್ತಿದ್ದೇನೆ. ಕಾರಣ, ನನಗೆ ಈ ಪುಸ್ತಕದ ಎಲ್ಲ ಕಥೆಗಳು ಅತ್ಯಂತ ಆಪ್ತವೆನಿಸಿವೆ. ಚಿತ್ರದುರ್ಗದ ಲೇಖಕಿ ಶೈಲಾರವರು ಬರೆದಿರುವ ಹನ್ನೆರಡು ಕಥೆಗಳಲ್ಲಿ, ಸಾಕಷ್ಟು ಕಥೆಗಳು ಬಹುಮಾನಗಳನ್ನು ಪಡೆದಿವೆ. ನಾನು 'ಕಥಾ ಪರಂಪರೆ' ಎಂಬ ವಾಟ್ಸಾಪ್ ಬಳಗದಲ್ಲಿ ಜಿ.ಪಿ.ರಾಮಣ್ಣ ಎನ್ನುವ ಅದ್ಭುತ ಧ್ವನಿ ಕಲಾವಿದರು ಓದಿದ್ದ "ಅಶ್ವತ್ಥಾಮೋ ಹತಃ" ಎಂಬ ಕತೆಯನ್ನು ಆಲಿಸಿ ಅತ್ಯಂತ ಪ್ರಭಾವಿತಳಾಗಿದ್ದೆ. ಭಾಷೆ, ವಿಶಿಷ್ಟ ನಿರೂಪಣೆ ಇತ್ಯಾದಿಗಳು ಅತ್ಯಂತ ಪರಿಣಾಮವನ್ನುಂಟು ಮಾಡಿದ್ದವು. ಹಾಗಾಗಿ ಈ ಪುಸ್ತಕವನ್ನು ಮತ್ತೊಮ್ಮೆ ಓದಿ ನನ್ನ ಅನಿಸಿಕೆಗಳನ್ನು ತಿಳಿಸಲು ಈ ಅವಕಾಶವನ್ನು ಬಳಸುತ್ತಿದ್ದೇನೆ. ಕಾಲಾವಕಾಶ ಕಡಿಮೆ ಇರುವುದರಿಂದ ಎಲ್ಲ ವಿವರಗಳನ್ನು ಕೊಡುವುದು ತುಂಬಾ ಕಷ್ಟದ ಕೆಲಸ. ಆದರೂ ಬರೆಯಲೇಬೇಕೆಂಬ ಉತ್ಸುಕತೆಯಿಂದ ನಾಲ್ಕು ಸಾಲು ಬರೆದಿದ್ದೇನೆ.

'ಅಶ್ವತ್ಥಾಮೋ ಹತಃ' ಎಂಬ ಈ ಕಥಾ ಸಂಕಲನದಲ್ಲಿ ಒಟ್ಟು 12 ಕಥೆಗಳಿವೆ. ಮೂರು ಕಥೆಗಳು ಪೌರಾಣಿಕ ವಿಷಯಗಳನ್ನು ಒಳಗೊಂಡಿದ್ದು, ಮತ್ತೆ ಮೂರು ಕಥೆಗಳು ಐತಿಹಾಸಿಕ ವಿಷಯವನ್ನು, ಮತ್ತೊಂದು ಕಥೆ ಹರಿಹರ ರಾಘವಾಂಕರ ಕಥೆಯನ್ನು ಒಳಗೊಂಡಿವೆ. ಕಡೆಯ ಐದು ಕಥೆಗಳು ಸಾಮಾಜಿಕ ಕಥೆಗಳಾಗಿವೆ.

ಮೊದಲ ಕಥೆಯೇ 'ಅಶ್ವತ್ಥಾಮೋ ಹತಃ' ಎಂಬುದು. ಅಶ್ವತ್ಥಾಮನು ತನ್ನನ್ನೇ ತಾನು ಅವಲೋಕನ ಮಾಡಿಕೊಳ್ಳುತ್ತಾ, ತನ್ನ ಚಿರಂಜೀವತ್ವವನ್ನು ಶಪಿಸುತ್ತಾ, ಒದ್ದಾಡುತ್ತಾ, ತನ್ನೆಲ್ಲ ಬದುಕಿನ ದಿನಗಳನ್ನು ನೆನಪಿಸಿಕೊಳ್ಳುತ್ತಾ, ಮರಣಕ್ಕಾಗಿ ಕಾಯುತ್ತಾ ಹಪಹಪಿಸುತ್ತಿರುತ್ತಾನೆ. ಬದುಕಿನ ಔನ್ನತ್ಯಕ್ಕೇರುವ ಅವಕಾಶಗಳಿದ್ದಾಗ್ಯೂ ಪಾತಾಳಕ್ಕಿಳಿದುದರ ಬಗ್ಗೆ ಪಶ್ಚಾತಾಪಪಡುತ್ತಾನೆ. ಇಡೀ ಕಥೆ ಒಂದು ಕಾವ್ಯದಂತೆ ಕಂಡು ಬರುತ್ತದೆ. ಅಶ್ವತ್ಥಾಮನ ಸ್ವಗತವನ್ನೋದುತ್ತಾ ಓದುತ್ತಾ, ನಾವೇ ಅಶ್ವತ್ಥಾಮರಾಗಿ ಬಿಡುತ್ತೇವೆ.

ಎರಡನೆಯ ಕಥೆ 'ಮಹಾ ತಪಸ್ವಿನಿ'ಯಲ್ಲಿ ಹಿಡಿಂಬೆಯ ಸ್ವಗತವಿದೆ. ರಾಕ್ಷಸಿಯಾಗಿದ್ದಾಗ್ಯೂ, ಭೀಮನ ಬಗ್ಗೆ ಅತೀವ ಪ್ರೀತಿ ಹಾಗೂ ಕರ್ತವ್ಯ ಮೆರೆಯುತ್ತಾ, ಪುತ್ರ ಘಟೋತ್ಕಚನನ್ನು ಯುದ್ಧಕ್ಕಾಗಿ ಕಳಿಸುವ ಮಹಾತ್ಯಾಗಿ ಮಾತೆಯಾಗಿಯೂ ಚಿತ್ರಿಸಲ್ಪಟ್ಟಿದ್ದಾಳೆ.

ಮೂರನೆಯ ಕಥೆ 'ಧೃತರಾಷ್ಟ್ರನ ಅಂತಃ ಚಕ್ಷು: ನಾನು ಸಂಜಯ'. ಇದಂತೂ 18 ದಿನಗಳ ಕುರುಕ್ಷೇತ್ರದ ಯುದ್ಧವನ್ನು ಅದ್ಭುತವಾಗಿ, ಪರಿಣಾಮಕಾರಿಯಾಗಿ ನಮ್ಮೆದುರು ತೆರೆದಿಡುತ್ತದೆ. ಇದೊಂದು ನೀಳ್ಗತೆಯಂತೆ ತೋರುತ್ತದೆ. ಸಂಜಯನು ಪ್ರತಿ

ದಿನದ ಯುದ್ಧ ವಿವರಗಳನ್ನು ಧೃತರಾಷ್ಟ್ರನಿಗೆ ವಿವರಿಸುವುದನ್ನು ಓದುವಾಗ, ನಮ್ಮ ಕಣ್ಣೆದುರೇ ಯುದ್ಧ ನಡೆಯುತ್ತಿರುವಂತೆ ಭಾಸವಾಗುತ್ತದೆ. ಲೇಖಕಿ ಶೈಲಾರವರ ಭಾಷೆ ಬಹಳ ಸೊಗಸಾಗಿದ್ದು ಮನಸೂರೆಗೊಳ್ಳುತ್ತದೆ. ಅತ್ಯಂತ ವಿಶಿಷ್ಟವೆನಿಸುವ ಕಥಾ ನಿರೂಪಣಾ ಶೈಲಿಯನ್ನು ಮೆಚ್ಚದಿರಲು ಸಾಧ್ಯವೇ ಇಲ್ಲ.

'ಮುಂದೆ ಗುರಿ, ಹಿಂದೆ ಗುರು!' ಎನ್ನುವ ಐತಿಹಾಸಿಕ ಕಥೆಯಲ್ಲಿ ಚಾಣಕ್ಯ ಹಾಗೂ ಚಂದ್ರಗುಪ್ತರು ಸೇರಿ ನಂದರನ್ನು ಸೋಲಿಸಿದ ವಿವರವಿದೆ.

ಹರಿಶ್ಚಂದ್ರ– ರಾಘವಾಂಕರ ನಡುವೆ ನಡೆದ ಕೋಪದ ಪ್ರಸಂಗ ಹಾಗೂ ನಂತರದಲ್ಲಿ ಅದು ಶಮನಗೊಂಡು, ರಾಘವಾಂಕನು ಶಿವಭಕ್ತರಿಗಷ್ಟೇ ತನ್ನ ಪ್ರತಿಭೆಯನ್ನು ಮೀಸಲಾಗಿಡುವ ನಿರ್ಧಾರ ತೆಗೆದುಕೊಳ್ಳುವ ಕಥಾನಕವು 'ಗುರುಪಥ – ಶಿವ ಪಥ' ಎಂಬ ಕಥೆಯಲ್ಲಿದೆ.

'ನ್ಯಾಯ ನಿರ್ಣಯ' ಎಂಬುದು ಮತ್ತೊಂದು ಐತಿಹಾಸಿಕ ಕಥಾನಕವನ್ನೊಳಗೊಂಡಿದೆ. ಮಾನ್ಯಖೇಟದ ಚಕ್ರವರ್ತಿ ಅಮೋಘವರ್ಷ ನೃಪತುಂಗ ಹಾಗೂ ಆತನ ಪುತ್ರನಾದ ಯುವರಾಜ ಕೃಷ್ಣ ಇವರಿಬ್ಬರ ಮನಸುಗಳಲ್ಲಿ ನಡೆವ ತಾಕಲಾಟ ಹಾಗೂ ಆತ್ಮಾವಲೋಕನವನ್ನು ಈ ಕಥೆಯಲ್ಲಿ ಅತ್ಯಂತ ಮನೋಜ್ಞವಾಗಿ ವಿವರಿಸಲಾಗಿದೆ. ತಂದೆ ನೃಪತುಂಗನು, ತನ್ನ ಮಗ ಕೃಷ್ಣನಿಗೆ ಮರಣದಂಡನೆ ವಿಧಿಸುವಂತಹ ಪರಿಸ್ಥಿತಿ ಬಂದಿರುತ್ತದೆ. ರಾತ್ರಿಯಿಡೀ ಮಗ ಕೃಷ್ಣ ತನ್ನ ತಪ್ಪಿಗಾಗಿ ಪರಿತಪಿಸುತ್ತಾನೆ ಹಾಗೂ ತಂದೆ ನೃಪತುಂಗ ತನ್ನ ದುರ್ವಿಧಿಗಾಗಿ ಹಾಗೂ ದುಷ್ಟ ಪುತ್ರನಿಗಾಗಿ ಹಳಹಳಿಸುತ್ತಾ ಒದ್ದಾಡುತ್ತಾನೆ. ಮಾರನೆಯ ಬೆಳಿಗ್ಗೆ ರಾಜಸಭೆಯಲ್ಲಿ ನೃಪತುಂಗನು ಗುಂಡಿಗೆಯನ್ನು ಕಲ್ಲಾಗಿಸಿಕೊಂಡು ಮನಸ್ಸನ್ನು ಉಕ್ಕಾಗಿಸಿಕೊಂಡು, ಗುಡುಗಿನ ಧ್ವನಿಯಲ್ಲಿ ತೀರ್ಪನ್ನು ನೀಡುತ್ತಾನೆ, "ರಾಜದ್ರೋಹಿಗೆ ಮರಣದಂಡನೆ ವಿಧಿಸಲಾಗಿದೆ" ಎಂದು. ಆದರೆ ಸಭೆಯಲ್ಲಿದ್ದ ಕುಲಪುರೋಹಿತರು ಹಾಗೂ ಪುರಪ್ರಮುಖರೆಲ್ಲರೂ ಕ್ಷಮೆಗಾಗಿ ಬೇಡಿದ್ದರಿಂದ ಚಕ್ರವರ್ತಿಗಳು ಅಪರಾಧಿಯನ್ನು ಕ್ಷಮಿಸಿ ಜೀವದಾನ ಮಾಡುತ್ತಾರೆ. ಪಶ್ಚಾತ್ತಾಪದ ಬೆಂಕಿಯಲ್ಲಿ ಸುಟ್ಟ, ಚೊಕ್ಕ ಅಪರಂಜಿಯಾಗಿದ್ದ ಕುವರ ಕೃಷ್ಣ ತಂದೆಯವರ ಚರಣಕ್ಕೆರಗುತ್ತಾನೆ. ಮನಸ್ಸನ್ನು ಆರ್ದ್ರಗೊಳಿಸುವ ಸುಂದರ ಕಥೆ ಇದು.

'ವಿಜಯನಗರದ ವೀರಪುತ್ರ' ಎಂಬುದು ಮತ್ತೊಂದು ಐತಿಹಾಸಿಕ ಕಥೆ. ವಿಜಯನಗರದ ರಾಜ ಬುಕ್ಕರಾಯನ ಮಗ ಕಂಪಣರಾಯ ಮಹಾ ಸೈನ್ಯದ ನೇತೃತ್ವ ವಹಿಸಿ ಮಧುರೈ ಸುಲ್ತಾನ್ ಸಿಕಂದರ್ ಶಹನನ್ನು ಎದುರಿಸಿ ಆತನನ್ನು ಸಂಹರಿಸಿ ವಿಜಯನಗರಕ್ಕೆ ಸಂಭ್ರಮ ತಂದ ಕಥೆ ಇದು.

ಉಳಿದ ಐದು ಸಾಮಾಜಿಕ ಕಥೆಗಳಲ್ಲಿ ಇಂದಿನ ಸಮಾಜದ ಕೆಲ ಸೂಕ್ಷ್ಮ ವಿಷಯಗಳನ್ನು ಆಧರಿಸಿ ಸುಂದರ ಕಥೆಗಳನ್ನು ಹೆಣೆದಿದ್ದಾರೆ ಲೇಖಕಿ ಶೈಲಾರವರು. ಪ್ರತಿಯೊಂದು ಕಥೆಯೂ ನಮ್ಮ ಮನಸ್ಸನ್ನು ಸಮಾಜದ ಸಮಸ್ಯೆಗಳ ಪರಿಹಾರದತ್ತ ಮೊಗ ಮಾಡಿ ನಿಲ್ಲಲು ಹಾಗೂ ಆ ಬಗ್ಗೆ ಚಿಂತನೆ ಮಾಡಲು ಪ್ರೇರಣೆ ನೀಡುತ್ತವೆ.

ಪುಸ್ತಕಕ್ಕೆ ಮುನ್ನುಡಿಯನ್ನು ವೀಣಾ ನಾಯಕ್ ಹಾಗೂ ಬೆನ್ನುಡಿಯನ್ನು ಶ್ರೀಲಕ್ಷ್ಮಿ ಭಟ್ ಎನ್ನುವವರು ಬರೆದಿದ್ದಾರೆ.

ಒಟ್ಟಾರೆ ಹೇಳಬೇಕೆಂದರೆ, 'ಅಶ್ವತ್ಥಾಮೋ ಹತಃ' ಎಂಬ ಈ ಕಥಾ ಸಂಕಲನ ಸಂಗ್ರಹಯೋಗ್ಯ ಪುಸ್ತಕವಾಗಿದೆ. ಇಂತಹ ಉತ್ತಮ ಕಥೆಗಳನ್ನು ನೀಡಿದ ಶ್ರೀಮತಿ ಸಿ.ಬಿ.ಶೈಲಾ ಜಯಕುಮಾರ್ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

ಅತ್ಯಂತ ಕಿರಿದಾಗಿ ಪರಿಚಯ ಮಾಡಿಕೊಟ್ಟು ಪುಸ್ತಕಕ್ಕೆ ಸಲ್ಲಬೇಕಾದ ಸಂಪೂರ್ಣ ನ್ಯಾಯ ಕೊಡದಿದ್ದಕ್ಕೆ ಕ್ಷಮೆ ಇರಲಿ.

***

ಅಪರಾಧಿ

– ಮಾಧುರಿ ಕೃಷ್ಣ

ಅವನು ಅವಳ ತಮ್ಮನೊಂದಿಗೆ ನಡೆದು ಬರಲಾರಂಭಿಸಿದಾಗಲೇ ಅವಳು ಗುರುತು ಹಿಡಿದುಬಿಟ್ಟಿದ್ದಳು. 'ಅವನು! ಅದು ಅವನೇ... ಅವನೇ! ನಿಸ್ಸಂಶಯವಾಗಿಯೂ ಅವನೇ! ಎದೆ ಢವಢವಿಸಲಾರಂಭಿಸಿತು. ಯಾವಾಗ? ಹಿಂದಿನ ಜನ್ಮದಲ್ಲೇ, ಇಲ್ಲ ಅದಕ್ಕೂ ಹಿಂದಿನ ಜನ್ಮದಲ್ಲೇ?

ಅವಳ ಕಣ್ಣು ಹಿಮ್ಮುಖ ಭೂತಕಾಲದ ಗುಣ ಅವಗುಣಗಳ ಒಳನೋಟಗಳನ್ನು ಅವಲೋಕಿಸತೊಡಗಿತು. ದೇಹದ ಮೇಲಣ ಆಶೆ, ನಂಟುತನದಾಶೆ, ವಿಷಯ ಭೋಗಗಳ ಆಶೆ– ಎಲ್ಲವೂ ಕೊನೆಮೊದಲಿಲ್ಲದ ಆಶೆಗಳೇ ಅಂದು! ಹೆಜ್ಜೆ ಹೆಜ್ಜೆಯಲ್ಲಿ, ಪ್ರತಿ ಘಳಿಗೆಯಲ್ಲಿ. ಜೀವನದ ಕಷ್ಟನಿಷ್ಠುರಗಳನ್ನು ಸರ್ವಥಾ ಸಹಿಸಲಾರೆ! ಅರ್ಥಗಳನ್ನು ಅನರ್ಥಗೊಳಿಸಲಾರೆ!! ಸರಿಯಾದ ವಿಷಯ ಗ್ರಹಿಕೆಯಾಗುವಂತೆಯೂ, ಆನಂದ ಪಾಲನೆಯಾಗುವಂತೆಯೂ, ಅಸಮಾಧಾನ ನಿರ್ಮಲಗೊಂಡು, ನನ್ನ ತಪ್ಪುಗಳು ಅನಂತ, ಸೈರಣೆ ಇರಲಿ. ಕೌಟುಂಬಿಕ ಜೀವನದ ನಡೆಗಟ್ಟಿನಲ್ಲಿ ಒಂದನ್ನು ನೆಚ್ಚಿ ಹೋದರೆ ಇನ್ನುಳಿದ ಅಳೆಯಲಾಗದ ಪಾಪಗಳಿಂದ ಶಾಸ್ತ್ರ ತಪ್ಪದಂತೆ ಪಾರಾಗುವುದೊಂದೇ ಹೆಣ್ಣು ಮನಕ್ಕುಳಿದ ಚಿತ್ತ ಸ್ವಚ್ಛತೆ ಎಂದರುಹಿದ್ದಳು. "ಕ್ಷಮಿಸು ಗೆಳೆಯಾ, ಮನಸ್ಸು–ಆಕರ್ಷಣೆ–ಸಂಬಂಧ–ಬಾಂಧವ್ಯ ಅದೆಲ್ಲ ಎಲ್ಲಿ ಅಡಗಿರುತ್ತವೆಯೋ... ಕರ್ಮಾನುಸಾರವಾಗಿ ನಾವು ಹುಟ್ಟಿ ಬರುತ್ತೇವೆ ಅದದೇ ಮಾಯೆಯಲ್ಲಿ ಬಂಧಿತರಾಗುತ್ತೇವೆ, ಆದ್ದರಿಂದಲೇ ನಮ್ಮನಮ್ಮ ನಡವಳಿಕೆಗಳು ಬೇರೆಬೇರೆಯಾಗಿರುತ್ತವೆ. ಇದನ್ನೆಲ್ಲ ಅರಿತೇ ನಾನೂ ನೀನೂ ಈ ತನಕ ತುಟಿಪಿಟಕ್ಕೆನ್ನದೆ ಬಾಳಿದ್ದೇವೆ. ಕಾದ ತೈಲಧಾರೆಯಂತೆ ಭಾವೋದ್ವೇಗಗಳು ಇಂದು ಉಳಿದಿಲ್ಲ. ಪುನಃ ಅದನ್ನೆಂದೂ ಸ್ಮರಿಸಿಕೊಳ್ಳಲೂಬಾರದು, ಸಂಪೂರ್ಣ ನಿರ್ಮೂಲನೆ ಅಗತ್ಯ!

ಎದುರಿಗೆ ಕರೆತಂದು ನಿಲ್ಲಿಸಿದ ತಮ್ಮ, "ಅಕ್ಕ, ನಿನ್ನ ಪದವಿ ಕ್ಲಾಸ್‌ಮೇಟ್ ಅಂತೆ! ಅವಳು ಇಂದಿನ ಮದುವೆಗೆ ಬಂದೇ ಬರುತ್ತಾಳೆಂಬ ಸುದ್ದಿ ಸಿಕ್ಕಿತು. ಆದರೆ ಈ ಪೂರಾ 50 ವರ್ಷದ ನಂತರ ಪರಸ್ಪರ ಗುರುತು ಹಚ್ಚುವುದು ಕಷ್ಟ ಎಂದು ನೀವು ಬಂದದ್ದು ಕಂಡು ನಿಮ್ಮ ಬಳಿ ಬಂದೆ ಎಂದರು. ಇನ್ನು ನೀವು ಕ್ಲಾಸ್‌ಮೇಟ್‌ಗಳು ಮಾತಾಡಿಕೊಳ್ಳಿ" ಎಂದು ತಮ್ಮ ಹೋಗಿಬಿಟ್ಟ.

ಕೆಲವು ಕ್ಷಣಕ್ಕೂ ತುಸು ಸಮಯ ಹೆಚ್ಚೇ ಅವರಿಬ್ಬರೂ ಮಾತು ಆರಂಭಿಸದೇ ನಿಂತಿದ್ದರು. ಕನಸೋ ನನಸೋ.. ಅವನಿಗಿಂತ ಅವಳಿಗೇ ಭ್ರಮೆಯಾಗಿರಬೇಕು. ಆ ವಿಳಂಬವನ್ನು ಇನ್ನಷ್ಟು ಲಂಬಿಸದೇ ಮಾತನಾಡೋಣವೆಂದು ಅವಳು ಬಾಯಿ ತೆರೆಯು ವಾಗಲೇ ಅವನು ಮಾತು ಹೊರಡಿಸಬೇಕೇ? ಆ ತಮಾಷೆಗೆ ಇಬ್ಬರೂ ಮತ್ತೊಮ್ಮೆ ಬಾಯ್ಮುಚ್ಚಿದರು. ಕೊನೆಗೂ ಆ ತಮಾಷೆಯಲ್ಲಿ ತಕ್ಷಣ ಎಚ್ಚರಗೊಂಡಿದ್ದು ಅವಳು! ಅದು ಬಂಧು ಬಳಗ, ಇಷ್ಟಮಿತ್ರರಿಂದ ತುಂಬಿದ ಮದುವೆಮನೆ! ಜೋರಾಗಿ ಬಾಜಾಬಜಂತ್ರಿಗಳು ಫುಲ್ ಟ್ಯೂನಿನಲ್ಲಿದ್ದುವು. ಅವರ ಅಕ್ಕಪಕ್ಕದಲ್ಲಿ ಆಮಂತ್ರಿತರು ತಗುಲಿಕೊಂಡೇ ನಿಂತಿದ್ದರು. ಅತ್ತಇತ್ತ ತಳ್ಳಿಕೊಂಡೂ ಓಡಾಡುತಿದ್ದರು. ಗಟ್ಟಿಗಟ್ಟಿ ಮಾತಾಡುತಿದ್ದರು.

ಅವಳಿಗೆ ಕಣ್ಣು ತುಂಬಿ ಬಂತು. ಅವನನ್ನು ಎದುರಿಸಲಾಗದೇ ತಲೆತಗ್ಗಿಸಿ ಬಣ್ಣಹಚ್ಚಿದ ಕಾಲುಗುರನ್ನು ನೋಡತೊಡಗಿದಳು. "ಐವತ್ತು ದೀರ್ಘ ವರ್ಷಗಳು ಕಳೆದೇಹೋದುವು!" ನಗಾರಿಯೊಂದು ಢಂ ಢಂ ಎಂದು ಬಾರಿಸಿದಂತೆ ಅವನ ಮಾತು ಅವಳ ಕಿವಿಯನ್ನು ಹೊಕ್ಕಿತು ಮತ್ತು ಅವಳೆದೆಯ ಬಡಿತವನ್ನು ನಿಲ್ಲಿಸಿತು.

ಹೌದು! ಅವನಿಗೆ ಮಾತ್ರವಲ್ಲ, ನನಗೂ ಅದೇ ಐವತ್ತು ದೀರ್ಘ ವರ್ಷಗಳು ಕಳೆದುಹೋಗಿವೆ! ಅಂದು ಅಪರಾಧಿಯಾಗಿಯೇ ಅವನಿಂದ ಬೀಳ್ಕೊಂಡಿದ್ದೆ. ಇಂದೂ ಅದೇ ಅಪರಾಧಿಯಾಗಿಯೇ ನಿಂತಿದ್ದೇನೆ. ಅವನ ಕಣ್ಣುಗಳನ್ನೆದುರಿಸುವ ಧಾರ್ಷ್ಟ್ಯ ಇಂದಿಗೂ ನನ್ನಲಿಲ್ಲ! ಜತೆಗೆ ಅಲ್ಲೇ ಪಕ್ಕದ ಸಾಲಿನಲ್ಲಿ ನೆಟ್ಟಗೆ ಕುಳಿತು ನಮ್ಮಿಬ್ಬರನ್ನೂ ಕೆಕ್ಕರಿಸಿ ನೋಡುತ್ತಿರುವ ಆ ಎರಡು ಕಣ್ಣುಗಳನ್ನೂ ನಾನು ಹೆಚ್ಚು ಸಮಯ ತಾಳಿಕೊಳ್ಳಲಾರೆ!

***

ಮೌಲ್ಯ ಪ್ರಜ್ಞೆ

– ರೇಣುಕಾ ದೇಸಾಯಿ

ಬದುಕಿನಲ್ಲಿರದ ಮೌಲ್ಯಗಳು ಕೃತಿಗಳಲ್ಲಿ ಬರಲು ಸಾಧ್ಯವಿಲ್ಲ. ತಮ್ಮ ಕೃತಿಯಲ್ಲಿ ಉದಾತ್ತ ವ್ಯಕ್ತಿಗಳನ್ನು ನಿರೂಪಿಸುತ್ತಾ ಬರೆದಂತೆ ಬದುಕಿದ, ಬದುಕಿದಂತೆ ಬರೆದ, ಅಪರೂಪದ ಬರಹಗಾರ ನಮ್ಮ ಜೀವಿತ ಕಾಲದಲ್ಲಿ ನೋಡ ಸಿಗುತ್ತಾರೆ ಎಂದರೆ ನಾವೇ ಪುಣ್ಯವಂತರು. ಇವರ ಕೃತಿಗಳು ತತ್ವಶಾಸ್ತ್ರ, ದರ್ಶನಶಾಸ್ತ್ರ ಹಾಗೂ ಮಾನವೀಯ ಸಂವೇದನೆಯ ಚಿಂತನೆಗಳೊಂದಿಗೆ ಹೆಣೆದುಕೊಂಡಿವೆ ಎನ್ನಬಹುದು. ಹೀಗೆ ತಮ್ಮ ಬರವಣಿಗೆಯ ಮೌಲ್ಯವನ್ನು ಹೆಚ್ಚಿಸಿದವರು. ಎಂ.ಹಿರಿಯಣ್ಣನವರ ಶಿಷ್ಯರು ಯಾಮುನಾಚಾರ್ಯರು, ಯಾಮುನಾಚಾರ್ಯರ ಶಿಷ್ಯರು ಎಸ್.ಎಲ್.ಭೈರಪ್ಪನವರು. ಇದೊಂದು ಮೌಲ್ಯಯುತ ಗುರು ಪರಂಪರೆ, ದಾರ್ಶನಿಕ ವ್ಯಕ್ತಿಗಳ ಕೊಂಡಿ. ಭೈರಪ್ಪನವರು ತಮ್ಮ ಗುರು ಮತ್ತು ಗುರವಿನ ಗುರುವಿನಲ್ಲಿರುವ ಉದಾತ್ತ ಗುಣಗಳನ್ನು ಮೈಗೂಡಿಸಿಕೊಂಡು ಬೆಳೆದವರು, ಬಾಳಿದವರು.

ಮೊನ್ನೆ ೨೦೨೫ರ ಜೂನ್ ೧೪ರಂದು ಎಸ್.ಎಲ್.ಭೈರಪ್ಪ ಪ್ರತಿಷ್ಠಾನದ ಉದ್ಘಾಟನೆಯಾಯಿತು. ಈ ಪ್ರತಿಷ್ಠಾನವನ್ನು ಸ್ವತಃ ಡಾ.ಎಸ್.ಎಲ್.ಭೈರಪ್ಪನವರೇ ತಮ್ಮ ೯೪ನೇ ಇಳಿವಯಸ್ಸಿನಲ್ಲಿ ಅತಿ ಉತ್ಸಾಹದಿಂದ ಉದ್ಘಾಟಿಸಿ, "ನನ್ನ ಜೀವಿತಕಾಲದ ಉಳಿತಾಯದ ಚಿಕ್ಕಾಸು ಕೂಡ ಬೇರೆ ಉದ್ದೇಶಕ್ಕೆ ವ್ಯಯವಾಗಬಾರದು, ಅದು ಅಕ್ಷರ ಸೇವೆಗೆ ಮುಡಿಪಾಗಿರಬೇಕು. ತಮ್ಮ ಪ್ರತಿಷ್ಠಾನದಿಂದ ಬಡ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಹಣ ವಿನಿಯೋಗವಾಗಬೇಕು, ಪಿಯುಸಿ ನಂತರ ತಾಂತ್ರಿಕ ವಿದ್ಯಾಭ್ಯಾಸಕ್ಕೆ ತೊಡಗಿಕೊಳ್ಳುವ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಕನ್ನಡ ಭಾಷೆಯಲ್ಲಿ, ಭಾರತೀಯ ಬೇರೆ ಭಾಷೆಯಲ್ಲಿ ಮತ್ತು ಇಂಗ್ಲಿಷಿನಲ್ಲೂ ಉತ್ಕೃಷ್ಟ ಕೃತಿಗಳಿದ್ದರೆ ಅವುಗಳನ್ನು ಮರುಮುದ್ರಣ ಮಾಡಬೇಕು ಮತ್ತು ಬೇರೆ ಭಾಷೆಯಲ್ಲಿರುವ ಉತ್ಕೃಷ್ಟ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿ, ಕನ್ನಡ ಸಾಹಿತ್ಯ ಸಂಪತ್ತನ್ನು ಹೆಚ್ಚಿಸುವ, ಕಾಪಾಡುವ ಕೈಂಕರ್ಯಕ್ಕೆ ಪ್ರತಿಷ್ಠಾನದಿಂದ ಧನಸಹಾಯ ಆಗಬೇಕು. ಅಶಕ್ತರ ವೈದ್ಯಕೀಯ ಖರ್ಚುವೆಚ್ಚಗಳನ್ನು ಭರಿಸುವದು" ಎಂದರು. ಹೀಗೆ ಹತ್ತು ಹಲವು ಸಾಮಾಜಿಕ ಉತ್ಕೃಷ್ಟತೆಯನ್ನು ಹೆಚ್ಚಿಸಲು ಸಹಕಾರವಾಗುವಂತಹ ಕೆಲಸ ಕಾರ್ಯಗಳಿಗೆ ಅವರ ಪ್ರಾಮಾಣಿಕ ಗಳಿಕೆಯ ಹಣ ಸದ್ವಿನಿಯೋಗ ಆಗಬೇಕೆಂಬ ಗುರಿಯೊಂದಿಗೆ ಸ್ಥಾಪಿತವಾಗಿರುವ ಎಸ್.ಎಲ್. ಭೈರಪ್ಪ ಪ್ರತಿಷ್ಠಾನ, ಈ ದಿನಮಾನಗಳಲ್ಲಿ ಒಬ್ಬ ಮೇರು ಸಾಹಿತಿಯ ಒಂದು ವಿಶಿಷ್ಟ ನಡೆ ಎನ್ನಿಸಿತು. ತಾವು ಬಾಲ್ಯದಲ್ಲಿ ಕಡು ಬಡತನ ಅನುಭವಿಸಿ, ವಾರಾನ್ನದಿಂದ ಓದಿ, ಬೆಳೆದ ಭೈರಪ್ಪನವರು ತಮ್ಮ ವೃತ್ತಿಯ ಗಳಿಕೆಯಿಂದಲೂ, ತಮ್ಮ ಕೃತಿಗಳು ಸಾಕಷ್ಟು ಹಣ ಗಳಿಸುವಾಗಲೂ ವಿಲಾಸಿ ಜೀವನ ನಡೆಸದೇ ಎಷ್ಟು ಬೇಕೆನ್ನುವ ಮಿತಿಯ ಗೆರೆ ಹಾಕಿಕೊಂಡು ಬದುಕಿದವರು. ತಮ್ಮ ಗಳಿಕೆ ತಮ್ಮ ಮಕ್ಕಳು ಮೊಮ್ಮಕ್ಕಳಿಗೆ ಬೇಕು ಎನ್ನುವ ಸಾಮಾನ್ಯ ಯೋಚನೆ ತೋರದೆ, ಅಸಮಾನ್ಯರಂತೆ, ತಮ್ಮ ಕಾದಂಬರಿಯಲ್ಲಿ ಬರುವ ಹೃದಯ ವೈಶಾಲ್ಯತೆಯನ್ನು ನಿಜಜೀವನದಲ್ಲಿ ನಿರೂಪಿಸಿದವರು. ಹೀಗಾಗಿ ಭೈರಪ್ಪ ಪ್ರತಿಷ್ಠಾನ ನಿಜವಾಗಿಯೂ ಕನ್ನಡದ ಒಂದು ಪ್ರತಿಷ್ಠೆ.

ಕನ್ನಡ ಸಾಹಿತ್ಯ ಲೋಕದಲ್ಲಷ್ಟೇ ಅಲ್ಲ, ಭಾರತದ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮ ಸಾಹಿತ್ಯ ಕೃತಿಗಳಿಗೆ ಅತಿ ಹೆಚ್ಚು ರಾಯಲ್ಟಿ ಪಡೆಯುವವರಲ್ಲಿ ಭೈರಪ್ಪನವರೂ ಒಬ್ಬರು. ಇಷ್ಟು ದಿನ ತಮ್ಮ ವೃತ್ತಿಯಿಂದ ಗಳಿಸಿದ, ಸಾಹಿತ್ಯದ ಸೇವೆಯಿಂದ ಗಳಿಸಿದ, ಗಳಿಸುತ್ತಿರುವ ಎಲ್ಲ ಧನವೂ ಈ ಪ್ರತಿಷ್ಠಾನಕ್ಕೆ ಸೇರುತ್ತದೆ ಎಂದು ಘೋಷಿಸಿದ, ಸಾಹಿತಿ ಡಾ. ಎಸ್.ಎಲ್. ಭೈರಪ್ಪನವರು ತಮ್ಮ ಪ್ರತಿಯೊಂದು ಕೃತಿಗಳಲ್ಲಿ ಬರೆದಂತಹ ಉದಾತ್ತತೆಯನ್ನು ತಮ್ಮ ಜೀವನದಲ್ಲಿ ಸಾಕಾರಗೊಳಿಸಿದ್ದಾರೆ. ಅವರ ಕಾದಂಬರಿಗಳು ಕನ್ನಡ ಹೃದಯ ವೈಶಾಲ್ಯತೆಯ ಲೋಕಕ್ಕೆ ಮಾದರಿಯಾಗಿವೆ. ಅವರ ಸಾಹಿತ್ಯದಲ್ಲಿ ಹುಟ್ಟು ಯಾವತ್ತೂ ಮುಖ್ಯವಾಗಿಲ್ಲ, ಆದರೆ ಅಲ್ಲಿ ಬರುವ ವ್ಯಕ್ತಿಗಳು ಹೇಗೆ ಬದುಕುತ್ತಾರೆ ಎನ್ನುವುದನ್ನು ಮುಖ್ಯವಾಗಿಸಿ, ಎಳೆಎಳೆಯಾಗಿ ಬಿಡಿಸಿ ಲೋಕದ ಮನೆ ಮನಗಳಲ್ಲದೆ, ಭಾರತೀಯ ಇತರ ಸರಿಸುಮಾರು ಭಾಷೆಗಳಿಗೆ ಮತ್ತು ಇಂಗ್ಲೀಷ್ ಭಾಷೆಗೆ ತರ್ಜುಮೆಗಳಾಗಿ ಮನೆ ಮಾತುಗಳಾಗಿವೆ. ಎಲ್ಲಾ ಕಾಲದಲ್ಲೂ ಇರುವಂತಹ ಸಮಸ್ಯೆಯೆಂದರೆ ರಾಗದ್ವೇಷವೇ ಆಗಿದೆ, ಅದರ ಮೂಲದ ಬಗೆಗೆ ಬರೆದು, ತಮ್ಮ ಸಾಹಿತ್ಯವನ್ನು ಶಾಶ್ವತಗೊಳಿಸಿದ್ದಾರೆ. ಅವರ ಸಾಹಿತ್ಯ ಇಂದು, ಮುಂದು, ಎಂದೆಂದಿಗೂ ಅಮರ. ಬರವಣಿಗೆಯಲ್ಲಷ್ಟೆ ಅಲ್ಲ, ನಿಜ ಜೀವನದಲ್ಲೂ ಭೈರಪ್ಪನವರು, 'ಸಾವನ್ನು ಶಾಂತವಾಗಿ ಸ್ವೀಕರಿಸುವ ಸ್ವಭಾವ ಕಲಿಸುವುದೇ ಬದುಕು' ಎಂದು ಬದುಕಿನ ಬಗ್ಗೆ ದಾರ್ಶನಿಕತೆ ತೋರಿಸುತ್ತಾರೆ, ಬೆಳಕು ಚೆಲ್ಲುತ್ತಾರೆ.

ಇಂತಹ ವ್ಯಕ್ತಿಗೆ, ಆದರ್ಶ ವ್ಯಕ್ತಿಗಳೆಂದರೆ ಡಿ. ವಿ.ಗುಂಡಪ್ಪನವರು ಮತ್ತು ಅವರ ಬರವಣಿಗೆ, ವಿಶ್ವೇಶ್ವರಯ್ಯನವರು ಮತ್ತು ಅವರ ಕಾರ್ಯತತ್ಪರತೆ. ಇಂತಹ ಆದರ್ಶ ವ್ಯಕ್ತಿಗಳಂತೆ ತಾವು ಕೂಡ ತಮ್ಮ ಜೀವನದಲ್ಲಿ ಬದುಕಿ ಬಾಳಿ ನಮ್ಮೆದುರಿಗೆ ಜ್ವಲಂತ ಉದಾಹರಣೆಯಾಗಿ ನಿಂತಿದ್ದಾರೆ. ಈ ಕಲಿಯುಗದ ಕರಾಳ ದಿನಗಳಲ್ಲಿ ಇಂತಹ ಒಬ್ಬ ವ್ಯಕ್ತಿ ನಮ್ಮ ನಡುವಿದ್ದಾರೆ ಎನ್ನುವುದು ಹಲವು ವರ್ಷಗಳು ಕಳೆದ ನಂತರ ದಂತಕಥೆ ಆಗಬಹುದೇನೋ?!!

ಕನ್ನಡದ ಭಗವದ್ಗೀತೆ ಎಂದು ಕರೆಯಿಸಿಕೊಳ್ಳುವ ಮಂಕುತಿಮ್ಮನ ಕಗ್ಗದ ಕರ್ತೃ ಡಿವಿಜಿಯವರು ತಮ್ಮ ಜೀವಿತಾವಧಿಯಲ್ಲಿ ತಮಗೆ ಬಂದ ಪ್ರಶಸ್ತಿ ಪುರಸ್ಕಾರಗಳ ಮೊತ್ತದ ಚೆಕ್ಕನ್ನು ಎಂದಿಗೂ ನಗದೀಕರಿಸಿಕೊಳ್ಳಲಿಲ್ಲವಂತೆ, ಅವರಿಗೆ ಏನೇ ಬವಣೆ ಬಂದರೂ ಅವರ ಸಾಹಿತ್ಯಕ್ಕಾಗಿ ಬಂದ ಹಣವನ್ನಾಗಲಿ, ಸಾಹಿತಿಗಳಿಗೆ ಕೊಡುವ ಮಾಸಾಶನವನ್ನಾಗಲಿ ಅವರು ಸ್ವೀಕರಿಸಲೇ ಇಲ್ಲವಂತೆ. ಅದರಂತೆ ಭೈರಪ್ಪನವರು ಕೂಡ ತಮ್ಮ ಬದುಕಿನುದ್ದಕ್ಕೂ ದೊರೆತಿದ್ದ ಪ್ರಶಸ್ತಿ ಪುರಸ್ಕಾರಗಳ ಧನವನ್ನು ಈ ಕೈಯಲ್ಲಿ ಸ್ವೀಕರಿಸಿ, ಅದೇ ಕ್ಷಣದಲ್ಲಿ ಆ ಕೈಯಿಂದ ಅವಶ್ಯಕತೆ ಇರುವ ಜನತೆ, ಸಂಸ್ಥೆಗಳಿಗೆ ದಾನ ಮಾಡಿದ್ದು ಇದೆ. ಇದರ ಮೇಲೂ, ತಮ್ಮ ಪುಸ್ತಕಗಳ ಮಾರಾಟದಿಂದ ಬಂದ ಹಣವೆಲ್ಲವನ್ನು ಪ್ರತಿಷ್ಠಾನಕ್ಕೆ ಧಾರೆಯೆರೆದಿದ್ದಾರೆ. ಇದನ್ನು ಕೇಳಿದಾಗ ಹಣಕ್ಕಾಗಿ ಸಂಪತ್ತಿಗಾಗಿ ಕೈ ಚಾಚುವ ಬುದ್ಧಿಜೀವಿಗಳ ದೊಡ್ಡ ಗುಂಪಿನ ಮಧ್ಯೆ ಇಂತಹ ವ್ಯಕ್ತಿಗಳು ಇದ್ದಾರಾ!!? ಎನ್ನುವ ಪ್ರಶ್ನೆಯೊಂದಿಗೆ ಉದ್ಗಾರವೂ ಉಂಟಾಗುತ್ತದೆ. ಅವರ ಗುಣಸ್ವಭಾವ, ಅವರು ರಚಿಸಿದ ಕಾದಂಬರಿಗಳ ಉದಾತ್ತ ವ್ಯಕ್ತಿಗಳನ್ನೇ ಹೋಲುವಂತೆ ಕಾಣುವುದು ಸತ್ಯ.

ಭೈರಪ್ಪನವರೇ ಹೇಳಿದಂತೆ ಅವರೆಂದೂ ಯಾವ ರಾಜಕಾರಣಿಯನ್ನೂ ಭೇಟಿಯಾಗಿಲ್ಲ, ಮುಖ್ಯಮಂತ್ರಿಗಳ ಮನೆಗೆ ಹೋಗಿಲ್ಲ, ವಿಧಾನಸೌಧದ ಮೆಟ್ಟಿಲನ್ನು ಹತ್ತಿಯೇ ಇಲ್ಲ. ಆದರೆ ಮೊದಲಬಾರಿಗೆ ನಾನು ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರನ್ನು ಕಂಡು "ನನ್ನ ಹುಟ್ಟೂರಾದ ಸಂತೇಶಿವರಕ್ಕೆ ನೀರಿನ ವ್ಯವಸ್ಥೆಯಿಲ್ಲ, ಅದು ತುಂಬಾ ಬರಪೀಡಿತ ಹಳ್ಳಿ, ಅಲ್ಲಿ ನೀರಿನ ವ್ಯವಸ್ಥೆಗಾಗಿ ಒಂದು ಯೋಜನೆಯನ್ನು ನಾವು ನಿರ್ಮಿಸಿದ್ದೇವೆ, ಇದಕ್ಕೆ 25 ಕೋಟಿ ರೂಪಾಯಿಯ ಅವಶ್ಯಕತೆ ಇದೆ, ಅದನ್ನು ನೀವು ಬಿಡುಗಡೆ ಮಾಡಿದರೆ ನನ್ನ ಹುಟ್ಟೂರಿನ ಸರಿಸುಮಾರು 2,000 ಕುಟುಂಬಗಳು ಅದರ ಫಲಾನುಭವಿಗಳಾಗುತ್ತಾರೆ. ನನ್ನೂರಿನಲ್ಲಿ ನನಗೆ ಒಂದೇ ಒಂದು ಇಂಚು ಜಾಗ ಕೂಡ ಇಲ್ಲ, ಆದರೆ ನನ್ನೂರಿನ ಈ ಎಲ್ಲ ಬಡ ರೈತರ ಭೂಮಿಯಲ್ಲಿ ಹಸಿರು ಕಾಣುವಂತೆ ಮಾಡಬೇಕೆಂಬದು ನನ್ನ ಮಹದಾಸೆ" ಎಂದು ಅದಕ್ಕಾಗಿ ಶತಪ್ರಯತ್ನಪಟ್ಟು, ಅನುಮೋದನೆ ಪಡೆದರು. ತದನಂತರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಹಣ ಬಿಡುಗಡೆ ಮಾಡಿದರು.

ತನ್ನೂರಿನಲ್ಲಿ ವಿಶಾಲವಾದ ಕೆರೆ ಕಟ್ಟಿಸಿ, ಊರಿನ ನೀರಿನ ಬವಣೆ ತೀರಿಸಿ, ಅದೇ ಕೆರೆಯ ನೀರಿನಲ್ಲಿ ತೆಪ್ಪದಲ್ಲಿ ಕುಳಿತು ಇಡೀ ಕೆರೆಯ ಒಂದು ಸುತ್ತು ಸುತ್ತಿ ಸಾರ್ಥಕ ಭಾವನೆಹೊಂದಿದ ಮೇರು ವ್ಯಕ್ತಿತ್ವ ಈ ಸಾಹಿತಿಯದು. ಎಷ್ಟೋ ಸಾಹಿತಿಗಳು ರಾಜಕಾರಣದ ದರ್ಬಾರಿನಲ್ಲಿ ಅಡ್ಡಾಡಿ ಒಂದು ಅವಾರ್ಡ್, ಇಲ್ಲ ಒಂದು ಸಾಹಿತ್ಯ ಅಕಾಡೆಮಿಯ ಸದಸ್ಯನ ಪಟ್ಟವನ್ನು ಪಡೆಯುತ್ತಿರುವಾಗ ತನ್ನೂರಿನ ಬಗೆಗೆ ಚಿಂತಿಸಿ ಅದಕ್ಕೊಂದು ಪರಿಹಾರ ಕಂಡು, ನಂತರ ತಮ್ಮ ಎಲ್ಲಾ ಹಣ, ಆಸ್ತಿಯನ್ನು ಸಮಾಜದ ಒಳಿತಿಗಾಗಿ ವಿನಿಯೋಗಿಸಲು ಪ್ರತಿಷ್ಠಾನ ರಚಿಸಿ, ತಮ್ಮ ಇಬ್ಬರು ಮಕ್ಕಳಲ್ಲಿ ಒಬ್ಬರನ್ನೂ ಅದರಲ್ಲಿ ಒಳಗೊಳ್ಳದೆ ಸದ್ಯದ ಸಮಾಜದ ಆದರ್ಶ ವ್ಯಕ್ತಿಗಳನ್ನು ತಮ್ಮ ಪ್ರತಿಷ್ಠಾನದ ಟ್ರಸ್ಟಿಗಳನ್ನಾಗಿ ಮಾಡಿ ಮೇರುವ್ಯಕ್ತಿತ್ವ ಮೆರೆದಿದ್ದಾರೆ, ಹುಟ್ಟೂರಿನ ಋಣ ಸಂದಾಯ ಮಾಡಿದ್ದಾರೆ.

ಅವರ ಬರಹದ ಪ್ರತಿಯೊಂದು ಕೃತಿಯೂ ಮೇರುಕೃತಿ. 'ಉತ್ತರಕಾಂಡ'ದ ನಂತರದ ಅವರ ಎರಡು ಕೃತಿಗಳು, ಸಂತೇಶಿವರಕ್ಕೆ ನೀರು ತರಿಸಿದ್ದು ಒಂದು, ತಮ್ಮ ಸಕಲ ಸರ್ವಸ್ವವನ್ನೂ ಧಾರೆ ಎರೆದು ಪ್ರತಿಷ್ಠಾನ ಸ್ಥಾಪಿಸಿದ್ದು ಇನ್ನೊಂದು, ಎಂದು ಭೈರಪ್ಪ ಪ್ರತಿಷ್ಠಾನದ ಅಧ್ಯಕ್ಷ ಶ್ರೀಯುತ ಕೃಷ್ಣಪ್ರಸಾದ್ ಹೇಳಿರುವದು ಸೂಕ್ತವಾಗಿದೆ.

ಇಂತಹ ಸಾಹಿತಿಗೆ ನನ್ನದೊಂದು ನಮನ.

***

ನಗೆ ಲೇಖನ



ಬೌ... ಬೌ... ಬಿರಿಯಾನಿ

-ನಾಗರತ್ನ ಚಂದ್ರಶೇಖರ್

"ಅಮ್ಮ, ಇವತ್ತು ಮಧ್ಯಾಹ್ನಕ್ಕೆ ಅಡುಗೆ ಮಾಡಬೇಡ"

"ಯಾಕೆ ಮಗಳೇ, ಏನು ಫಂಕ್ಷನ್ ಇಲ್ವಲ್ಲ"

"ಅದಕ್ಕೇನಮ್ಮ, ಬಿರಿಯಾನಿ ತಿಂದು ತುಂಬಾ ದಿನ ಆಯ್ತಲ್ವಾ. ಆನ್ಲೈನ್ನಲ್ಲಿ ಆರ್ಡರ್ ಮಾಡ್ತೀನಿ ಬಿಡು."

"ಮೊದ್ಲೇ ಹೇಳಿದ್ರೆ ಎಲ್ಲಾ ತರಕಾರಿನೂ ತಂದು ನಾನೇ ಮಾಡ್ತಿದ್ನಲ್ಲ."

"ಇರ್ಲಿ ಬಿಡಮ್ಮ, ಹೊಸ ಹೊಸ ಹೋಟೆಲ್ ಗಳು ಆಗ್ತಾಯಿವೆ. ಅಲ್ಲೀ ರುಚಿನೂ ನೋಡೋಣಂತೆ".

"ಈಗಾಗಲೇ ಹೋಗಿದ್ವಲ್ಲ, 'ದೇವರೇ ಗತಿ', 'ಹೋಟೆಲ್ ಸ್ವರ್ಗ, 'ಸೆಕೆಂಡ್ ವೈಫು'. ಅದೇ ತರದ್ದು ತಾನೆ? ಆದರೆ ಪಕ್ಕದ ಮನೆಯವರು ಹೇಳ್ತಾ ಇದ್ರು, ಅದ್ಯಾವ್ದೋ ಎಂ.ಜಿ ರಸ್ತೆ ನಲ್ಲಿ 'ಭೌ ಭೌ ಬಿರಿಯಾನಿ' ಅಂತ ಒಂದು ಓಪನ್ ಆಗಿದೆಯಂತೆ."

"ಹ_ಹ_ಹ, ಅಮ್ಮ, ಅದು ಭೌಭೌ ಅಲ್ಲ. ನೀನು ತಪ್ಪಾಗಿ ಕೇಳಿಸ್ಕೊಂಡಿದ್ದೀಯ ಅನ್ಸುತ್ತೆ. 'ಬೌಲ್ ಬಿರಿಯಾನಿ' ಇರ್ಬೇಕು''.

"ಭೌ, ಭೌ ನೋ, ಬೌಲೋ, ಯಾವುದೋ ಒಂದು. ಈ ಸರ್ಕಾರದವರು ಬೀದಿ ನಾಯಿಗಳಿಗೆ ಬಿರಿಯಾನಿ ಕೊಡಬೇಕು ಅಂತ ತೀರ್ಮಾನ ಮಾಡಿದ್ಮೇಲೆ ನಾಯಿಗಾಗಿ ಬೌಬೌ ಬಿರಿಯಾನಿ ತಯಾರು ಮಾಡೋ ಹೋಟೆಲ್‌ಗಳು ಆಗಿರಬಹುದು. ಇದೂ ಅದೇ ಇರಬೇಕು ಅಂದ್ಕೊಂಡೆ". ಮಗಳು ನಗತೊಡಗಿದಳು.

''ಅಮ್ಮ, ಬೀದಿನಾಯಿಗಳಿಗೆ ಬಿರಿಯಾನಿ ಕೊಡಬೇಕೂಂತ ತೀರ್ಮಾನ ಮಾಡಿದ್ದಾರಾ? ಅಮೆರಿಕದಲ್ಲಿ ನಾಯಿಗಳಿಗೆ ಅದಕ್ಕಾಗೇ ಇರುವ ಸಿದ್ಧ ಆಹಾರ ಬಿಟ್ಟು ಬಿರಿಯಾನಿನೋ, ಬಿಸಿಬೇಳೆ ಬಾತೋ ಹಾಕಿದ್ರೆ ಅಷ್ಟೇ. ಬೇಗ ಸತ್ತೇಹೋಗ್ಬಿಡುತ್ತೆ."

"ಅಯ್ಯೋ ನಿಮ್ಮೂರಲ್ಲಿ ಬಿಡು. ನಾಯಿಗಳ ದರ್ಬಾರೋ, ದರ್ಬಾರು. ಒಳ್ಳೆ ರಾಜನ ತರಹ ಆತಿಥ್ಯ ಅವಕ್ಕೆ".

"ಮತ್ತೆ ಅವು ಬೀದಿನಾಯಿಗಳಲ್ಲ. ಸಾವಿರಾರು ಡಾಲರ್ ಕೊಟ್ಟು ಮನೆಯಲ್ಲಿ ಮುದ್ದುಮಾಡಲು ಖರೀದಿಸುವ ಒಳ್ಳೆ ತಳಿಯ ಜಾತಿ ನಾಯಿಗಳು".

"ಆದ್ರೂ, ಅನ್ನ ನೋಡಿದ್ರೆ ನಾಯಿಗಳು ಫಿದಾ ಆಗ್ಬಿಡ್ತವೆ. ನಿಮ್ಮನೆ ನಾಯಿಯಂತೂ ನಾವು ಊಟಮಾಡುವಾಗೆಲ್ಲ ಕಾಲ್ಬುಡದಲ್ಲೇ ಬಂದು ಕೂತ್ಕೊಳ್ತಾಯಿತ್ತು. ನಾವಂತೂ ತುತ್ತು ಅನ್ನ ಹಾಕಿದ್ರೆ ಸಾಕು, ಅದೆಷ್ಟು ಖುಷಿಯಿಂದ ಓಡಾಡ್ತಾ ಅದಕ್ಕೆ ಬೆಳಗ್ಗೆಯಿಂದ ನೀ ಹಾಕಿದ್ದ ಮಾತ್ರೆ ತರ ಇರೋದರ ಜೊತೆ ಇದನ್ನು ಮಿಕ್ಸ್ ಮಾಡಿಕೊಂಡು ಗಬಗಬ ಅಂತ ತಿಂದ್ಬಿಡ್ತಿತ್ತಲ್ಲ".

ನೀವೆಲ್ಲ ಚಿಕ್ಕವರಿದ್ದಾಗ ನಾವು ಒಂದು ನಾಯಿ ಸಾಕಿದ್ದೆವಲ್ಲ 'ಡಾಲಿ' ಅಂತ. ಅದಕ್ಕಂತೂ ನೀವು ತಿಂತಾ ಇದ್ದ ಅಕ್ಕಿ ರೊಟ್ಟಿ, ಅದೂ ಬಾಣಲೆ ರೊಟ್ಟಿ ಅಂದ್ರೆ ಪಂಚಪ್ರಾಣ. ನಿಮ್ಮಪ್ಪ ತೆಂಗಿನಕಾಯಿ ತುರಿಯುವಾಗೆಲ್ಲ ಅದಕ್ಕೂ ಒಂದಿಷ್ಟು ಹಾಕ್ಲೇಬೇಕಿತ್ತು. ಬೂದುಕುಂಬಳದ ಸಾಂಬಾರೋ, ಮಜ್ಜಿಗೆಹುಳಿನೋ ಮಾಡಿದ್ರಂತೂ ವಾಸನೆ ಹಿಡಿದು, ಅಡುಗೆಮನೆ ಬಾಗಿಲಲ್ಲೇ ಕೂತಿರ್ತಿತ್ತು.



ಹೋದ ಜನ್ಮದಲ್ಲಿ ನಮ್ಮ ಡಾಲಿ ಮನುಷ್ಯನಾಗಿ ಹುಟ್ಟಿರಬೇಕು ಅಂತ ನಾವು ಹೇಳ್ತಾ ಇದ್ವಲ್ವಾ. ಆದರೆ ಬೀದಿನಾಯಿಗಳಿಗೆ ಹೀಗೆಲ್ಲ ರುಚಿರುಚಿಯಾದ ಊಟ ಎಲ್ಲಿ ಸಿಗುತ್ತೆ ಹೇಳು? ತಂಗಳುಪಂಗಳೇ ಜಾಸ್ತಿ, ಬೀದಿಲಿ ಹಾಕೋದು."

ಅಮ್ಮನ ಮಾತು ಕೇಳುತ್ತಿದ್ದವಳು, "ಓಹೋ... ಅದಕ್ಕೆ ಇರಬೇಕು ಸರ್ಕಾರ ನಾಯಿಗೆ ಬಿರಿಯಾನಿ ಹಾಕ್ಬೇಕೂಂತ ತೀರ್ಮಾನ ಮಾಡಿರೋದು. ಪಾಪ, ಅವು ಕೂಡ ನಮ್ಮ ಹಾಗೆ ಅಲ್ವೇ?" ಅಂತ ಕನಿಕರದ ಮಾತಾಡಿದಳು ಅಮೇರಿಕದ ಮಗಳು.

"ಅಯ್ಯೋ... ಅಷ್ಟೇ ಆದರೆ ಸರಿ. ನಿಂಗೊತ್ತಿಲ್ಲ ಈ ತಂಗ್ಳುಪಂಗ್ಳು ತಿಂದೇ ನಾಯಿಗಳು ಒಳ್ಳೆ ಸಿಂಹನ ಥರ ಎಗರಿ ಎಗರಿ ಎಲ್ಲರನ್ನೂ ಅಟ್ಟಿಸಿಕೊಂಡು ಹೋಗಿ ಕಚ್ಚುತ್ತಾ ಇವೆ. ಇನ್ನೂ ಬಿರಿಯಾನಿ ಬಾಯಿಗೆ ಬಿದ್ರೆ ಅಷ್ಟೇ. ಹರಿದು ಮುಕ್ಕೇ ಬಿಡ್ತವೆ ನಮ್ಮ ಮನೆಯೊಳಗೇ ಬಂದು. ಇನ್ನೂ ಒಂದು ಅಪಾಯ ಇದೆ."

"ಏನಮ್ಮ ಅದು?"

"ಎಷ್ಟೋಕಡೆ ಹಸುವಿನ ಕರುಗಳನ್ನ ಕಳ್ಳಸಾಗಾಣಿಕೆ ಮಾಡಿ ಮಾಂಸದ ಅಂಗಡಿಯವರು ದನದ ಮಾಂಸ ಮಾರ್ತಾರೆ. ಮೊನ್ನೆ ಬೇರೆ ಯಾವುದೋ ದೇಶದಿಂದಲೋ ಹಸುವಿನ ಮಾಂಸ ತರ್ಸ್ಕೊಂಡಿದ್ದ ಕಂಟೈನರ್ ಡಬ್ಬಗಳಲ್ಲಿ ನಾಯಿಮಾಂಸನೂ ಇತ್ತಂತೆ. ಇದರಲ್ಲೂ ಕಲಬೆರಕೆ, ಕಾಳಸಂತೆ ಮಾಡ್ತಾರೆ. ನಾಯಿಮಾಂಸಾನೇ ಬಿರಿಯಾನಿ ಮಾಡಿ ನಾಯಿಗಳಿಗೆ ಹಾಕ್ತಾರೋ, ಮನುಷ್ಯರಿಗೆ ಹಾಕ್ತಾರೋ? ದೇವರಿಗೇ ಗೊತ್ತು."

"ಅಂದ್ರೆ ಈ ಚೈನಾದವರು ಹಾವು, ಕಪ್ಪೆ, ನಾಯಿ ಅಂತ ಎಲ್ಲಾ ಮಾಂಸಾನು ತಿಂತಾರಲ್ಲ. ಹಾಗೆ ಇಲ್ಲೂ ಜನ ಹೊಸರುಚಿ ಕೇಳ್ತಾ ಇರಬೇಕು"

"ನಮ್ ಬೀದೀಲಿರೊ ನಾಲ್ಕಾರು ಮನೆಯವ್ರು ಸಾಕಿಕೊಂಡಿರೋ ಟಾಮಿ ಇದೆಯಲ್ಲ. ಅದಂತೂ ನಾವೆಲ್ಲಾ ಕೊಡೋ ಹಾಲನ್ನ, ಬಿಸ್ಕೇಟು ಎಲ್ಲಾ ತಿಂದ್ರು ಕೂಡ, ನಾಯಿ ಬಾಲ ಡೊಂಕು ಅಂತರಲ್ಲ ಹಂಗೆ ಬೆಳಿಗ್ಗೆ ಎದ್ದು ತಿಪ್ಪೆ ಹತ್ರ ಕೆದಕುತ್ತಾ ನಿಂತಿರುತ್ತೆ."



"ನಾನ್ ಹೇಳಿದ್ ಮೇಲೆ ನೀನು ಟಾಮಿಗೊಂದು ಸ್ಟೀಲ್ ಬೌಲ್ ಇಟ್ಟಿದ್ದೆ ಅಲ್ಲವ?"

"ಹೌದು ಕಣೆ, ಅದು ಕಾಣಿಸ್ತಾ ಇಲ್ಲ. ಆ ನಾಯಿ ಪಾತ್ರೆನೂ ಯಾರೋ ಭಿಕ್ಷುಕರು ಕದ್ದುಕೊಂಡು ಹೋಗಿರಬೇಕು."

"ಹೌದಾ? ನಾಯಿ ಪಾತ್ರೇನೂ ಕಳ್ಳತನ ಮಾಡ್ತಾರ?"

"ನಾಯಿ ಬೌಲ್‌ಗೂ, ಬೆಗ್ಗರ್ ಬೌಲ್‌ಗೂ ವ್ಯತ್ಯಾಸ ಇಲ್ಲ ಅಂತ ಕಾಣಿಸುತ್ತೆ. ಇನ್ನು ನಾಯಿಗೆ ಹಾಕೋ ಬಿರಿಯಾನಿನಾ ಬಿಡ್ತಾರಾ? ಜನ. ನಾಯಿ ಹೆಸರು ಹೇಳ್ಕೊಂಡು, ಬಿಟ್ಟಿ ಭಾಗ್ಯ ಅಂತ ಇವರೇ ತಿಂದುಬಿಡ್ತಾರೆ ನೋಡ್ತಾ ಇರು". ಅಮ್ಮ ಮಗಳಿಬ್ಬರು ಮನಸಾರೆ ನಕ್ಕರು.



ಕೆಲ ತಿಂಗಳ ಹಿಂದಷ್ಟೇ ನಾಯಿಗಳಿಗೆ ಊಟ ನೀಡುವ ಯೋಜನೆ ಆರಂಭಿಸಿದ್ದ ನಗರಪಾಲಿಕೆ ಆಯಾ ವಾರ್ಡಗಳಲ್ಲಿರುವ ರೆಸ್ಟೊರೆಂಟ್, ಹೋಟೆಲ್‌ಗಳಲ್ಲಿ ಉಳಿದ ಆಹಾರವನ್ನು ಬೀದಿನಾಯಿಗಳಿಗೆ ಹಾಕುವ ಕೆಲಸಕ್ಕೆ ಮುಂದಾಗಿತ್ತು. ಆದರೆ ಇದೀಗ ಬೀದಿನಾಯಿಗಳಿಗೆ ಆಯಾ ಏರಿಯಾಗಳಲ್ಲೆ ಊಟ ಹಾಕಲು ಪ್ರತ್ಯೇಕ ಜಾಗ ಗುರುತಿಸುವುದು ಪಾಲಿಕೆಗೆ ದೊಡ್ಡ ಸವಾಲಾಗಿದೆ. ಬೆಂಗಳೂರು ನಗರ ಒಂದರಲ್ಲೇ ಬೀದಿನಾಯಿಗಳ ಸಂಖ್ಯೆ ಸುಮಾರು ೨.೮ ಲಕ್ಷದಷ್ಟು ಇದ್ದು, ಪ್ರತಿ ಬಡಾವಣೆಯಲ್ಲಿ ಜಾಗ ಗುರುತಿಸುವುದು ಕಷ್ಟವೆನಿಸಿದರೆ ನಾವೂ ಸಹಾಯಮಾಡಬಹುದು. ಹೇಗೆಂದರೆ ನಮ್ಮ ನಮ್ಮ ಮನೆಗಳ ಮುಂದೆಯೋ, ಹಿಂದೆಯೋ, ಆಸುಪಾಸು ಇರದಂತೆ ನೋಡಿಕೊಂಡರೆ ಬೌಬೌ ಬಿರಿಯಾನಿಯ ಪರಿಮಳ ಹಾಗU ನಾಯಿಗಳ ನಡುವಿನ ಕಚ್ಚಾಟ ಇವುಗಳಿಂದ ಪಾರಾಗಬಹುದು. ಏನಂತೀರ?

***

ಹಸಿವೆಂಬ ಗಾರುಡಿಗ

– ಕಮಲಾಕ್ಷಿ ಸಿ.ಆರ್.

ಜಗತ್ತಿನಲ್ಲಿ ಜೀವಿಸಲು ಬೇಕಾದ ಅವಶ್ಯಕತೆಗಳಲ್ಲಿ ಪ್ರಧಾನವಾದದ್ದು ಆಹಾರ. ದೇಹಕ್ಕೆ ಬೇಕಾದ ಶಕ್ತಿಯ ಮೂಲ ಆಹಾರ. ಹಸಿವನ್ನು ಆಹಾರದಿಂದ ತಣಿಸಿದ ಮೇಲಷ್ಟೇ ಇತರ ಅವಶ್ಯಕತೆಗಳತ್ತ ಮನುಷ್ಯನ ಗಮನ ಹರಿಯುವುದು.

ಉದರದೈವಕೆ ಜಗದೊಳೆದುರು ದೈವವದೆಲ್ಲಿ ।
ಮೊದಲದರ ಪೂಜೆ ಮಿಕ್ಕೆಲ್ಲವದರಿಂದ ।।
ಮದಿಸುವುದದಾದರಿಸೆ ಕುದಿವುದು ನಿರಾಕರಿಸೆ ।
ಹದದೊಳಿರಿಸುವುದೆಂತೊ ಮಂಕುತಿಮ್ಮ ।।

ಹೊಟ್ಟೆಯ ದೈವಕ್ಕಿಂತ ಮಿಗಿಲಾದ ದೈವ ಜಗದಲ್ಲಿ ಇದೆಯೆ? ಮೊದಲು ಅದರ ಪೂಜೆಯಾದ ನಂತರ ಉಳಿದದ್ದೆಲ್ಲ ಅದರ ಬಳಿಕ. ಹಸಿವನ್ನೇ ಹೆಚ್ಚು ಆದರಿಸಿದರೆ ಅದು ಮದವೇರುತ್ತದೆ, ಕಡೆಗಣಿಸಿದರೆ ಒಳಗೆ ಕುದಿಯುವಂತೆ ಮಾಡುತ್ತದೆ. ಹೊಟ್ಟೆ ಎಂಬ ದೈವ ಅಂದರೆ ಹಸಿವನ್ನು ಸಮತೋಲನದಲ್ಲಿ ಇಡುವುದು ಹೇಗೆ ಎಂದು ಚಿಂತನೆಗೆ ತಳ್ಳುತ್ತಾರೆ ಡಿವಿಜಿಯವರು.

ಹಸಿವಿನ ಕುರಿತು ಶರಣರಾದ ಜೇಡರ ದಾಸೀಮಯ್ಯನವರ ವಚನ ಹೀಗಿದೆ..

ಹಸಿವೆಂಬ ಹೆಬ್ಬಾವು ಬಸಿರ ಬಂದು ಹಿಡಿವಡೆ
ವಿಷವೇರಿತ್ತಯ್ಯ ಆಪಾದಮಸ್ತಕಕ್ಕೆ
ಹಸಿವಿಗನ್ನವನಿಕ್ಕಿ ವಿಷವನಿಳುಹಬಲ್ಲಡೆ
ವಸುಧೆಯೊಳಗೆ ಆತನೆ ಗಾರುಡಿಗ ಕಾಣಾ ರಾಮನಾಥ

ಹೊಟ್ಟೆ ಹಸಿವನ್ನು ಹೆಬ್ಬಾವಿಗೆ ಹೋಲಿಸುವ ಜೇಡರ ದಾಸೀಮಯ್ಯನವರು, ಹಸಿವು ಹೊಟ್ಟೆಯನ್ನು ಹಿಂಡಿದಾಗ, ಆ ಹಸಿವು ವಿಷದಂತೆ ಕಾಲಿನಿಂದ ತಲೆಯವರೆಗೂ ಹರಡುತ್ತದೆ. ಆ ಹಸಿವಿಗೆ ಅನ್ನಾಹಾರವನ್ನು ಇತ್ತು ವಿಷವನ್ನು ಇಳಿಸಲು ತಿಳಿದಿದ್ದರೆ, ಅವನು ಈ ಭೂಮಿಯಲ್ಲಿ ಮೋಡಿಗಾರನಾಗಿರುತ್ತಾನೆ ಎನ್ನುತ್ತಾರೆ.

ಹಸಿವನ್ನು ತಣಿಸುವ ಸಲುವಾಗಿಯೇ ಮನುಜರು ಬಗೆಬಗೆಯ ಕೃತ್ಯಗಳಲ್ಲಿ ತೊಡಗುವರು. ಹಾಗಾಗಿಯೇ "ಎಲ್ಲಾರು ಮಾಡುವುದು ಹೊಟ್ಟೆಗಾಗಿ" ಎಂದು ಕನಕದಾಸರು ತಮ್ಮ ಕೀರ್ತನೆಯಲ್ಲಿ ಹೇಳಿರುವುದು. ಆದರೆ ಹಸಿದ ಹೊಟ್ಟೆಗೆ ಅನ್ನಾಹಾರ ಬೇಕು ನಿಜ. ಆದರೆ ಈ ಹೊಟ್ಟೆ ಹಸಿವು ತಣಿಸಿದ ನಂತರವೂ ಹೊಟ್ಟೆಯ ಪೋಷಣೆ ಅಧಿಕವಾದರೆ ತಿಂದದ್ದು ಕೊಬ್ಬಿನಂಶವಾಗಿ ದೇಹದಲ್ಲಿ ಸಂಗ್ರಹವಾಗಿ ಮದವೇರುತ್ತದೆ. ಆಗ ದೇಹ ಹಲವು ಆರೋಗ್ಯ ಸಮಸ್ಯೆಗಳಿಗೆ ಪ್ರವೇಶ ನೀಡುತ್ತದೆ. ಹಾಗೆಯೇ ಹೊಟ್ಟೆ ಹಸಿವನ್ನು ಕಡೆಗಣಿಸಿದರೆ ಅಶಕ್ತಿ, ಆರೋಗ್ಯದಲ್ಲಿ ಏರುಪೇರು. ಇವುಗಳಿಗೆ ಸಿಲುಕಿ ದೇಹ ನರುಳುತ್ತದೆ.

ವಚನದಲ್ಲಿ ಹಸಿದ ಹೆಬ್ಬಾವು ಮನುಷ್ಯನನ್ನು ನುಂಗುವಂತೆ, ಹಸಿವೆಂಬ ಹೆಬ್ಬಾವು ವಿಷಕ್ಕೆ ಸಮ ಎಂದಿದ್ದಾರೆ. ಹಸಿವಿನಿಂದಲೇ ಹಲವು ಹೋರಾಟ, ದಂಗೆ, ಕ್ರಾಂತಿಗಳು ನಡೆದಿವೆ. ಹಸಿದ ಹೊಟ್ಟೆಯ ಮುಂದೆ ಆಧ್ಯಾತ್ಮವನ್ನು ಉಸುರಬೇಡ ಎಂದು ವಿವೇಕಾನಂದರು ಹೇಳಿದ್ದಾರೆ. ಅಂತೆಯೇ ಪರತಂತ್ರದಲ್ಲಿ ಇರುವವರಿಗೆ ಸ್ವಾತಂತ್ರ್ಯದ ಹಸಿವು, ಕತ್ತಲಲ್ಲಿ ಇರುವವರಿಗೆ ಬೆಳಕಿನ ಹಸಿವು, ಅಜ್ಞಾನದ ಹಸಿವಿನಲ್ಲಿ ಇರುವವರಿಗೆ ಜ್ಞಾನದ ಹಸಿವು ಅವುಗಳಿಗಾಗಿ ಹಂಬಲಿಸುವಂತೆ ಮಾಡುತ್ತವೆ.

ಅಧಿಕಾರ, ಗೆಲುವು, ಯಶಸ್ಸುಗಳ ಹಸಿವಿಗಾಗಿ ಜನ ಹಪಾಹಪಿಸುತ್ತ ವಾಮಮಾರ್ಗ ತುಳಿಯುವಂತೆಯೂ ಮಾಡುತ್ತದೆ. ಮೋಸ, ವಂಚನೆ ಯಾವ ಮಾರ್ಗದಲ್ಲಿಯಾದರೂ ಪಡೆಯಲು ಮುಂದಾಗುತ್ತಾರೆ.

ಕವಿರತ್ನ ರನ್ನ ಬಳೆಗಾರ ವೃತ್ತಿಯವನಾದರೂ ಅವನಿಗಿದ್ದ ಜ್ಞಾನದ ಹಸಿವು ಆತನನ್ನು ಅಜಿತ ಸೇನಾಚಾರ್ಯರ ಬಳಿ ಸೇರಿಸಿತು. ಮುಂದೆ ಅವನ ವಿದ್ಯಾಸಕ್ತಿ, ಪರಿಶ್ರಮದಿಂದ ಕವಿಯಾಗಿ, ವಿದ್ವಾಂಸನಾಗಿ ಹೊರಹೊಮ್ಮಿದ.

ಭಕ್ತಿಮಾರ್ಗದಲ್ಲಿ ಇರುವವನಿಗೆ ದೈವ ದರ್ಶನದ ಹಸಿವು. ಕನಕದಾಸರು ಶ್ರೀ ಕೃಷ್ಣ ದರ್ಶನಕ್ಕಾಗಿ ಹಾತೊರೆದು ದೈನ್ಯತೆಯಿಂದ ಉಡುಪಿಯ ಶ್ರೀ ಕೃಷ್ಣ ಮಠದಲ್ಲಿ ಕೃಷ್ಣನಿಗಾಗಿ ಪ್ರಾರ್ಥಿಸಿದರು..ಅವನ ಮೊರೆಗೆ ಶ್ರೀ ಕೃಷ್ಣ ಕನಕನ ಕಡೆಗೆ ತಿರುಗಿ ಗೋಡೆಯಲ್ಲಿ ಕಿಂಡಿಯ ಮೂಲಕ ದರ್ಶನ ನೀಡಿದ.

ಇಲ್ಲಿ ರನ್ನ, ಕನಕದಾಸರು ತಮ್ಮ ತಮ್ಮ ಹಸಿವನ್ನು ನೀಗಿಸಿಕೊಂಡು ಗಾರುಡಿಗರಾದರು. ಹಾಗೆಯೇ ಧನಾತ್ಮಕ ಹಸಿವುಗಳು ನಮಗೆ ಸಾಧನೆಯತ್ತ ದಾರಿ ತೋರಿದರೆ.. ಋಣಾತ್ಮಕ ಹಸಿವುಗಳು ಅವನತಿಯತ್ತ ಕರೆದೊಯ್ಯುತ್ತವೆ. ಅದ್ದರಿಂದ ಮಾನವ ಕಲ್ಯಾಣದತ್ತ ದಾರಿ ತೋರುವ ಹಸಿವು ನಮ್ಮದಾಗಬೇಕು ಅಲ್ಲವೆ?

***

ಎಲ್ಲಿ ಹೋದ ನನ್ನ ಗಣಪ

– ಮಾಲತಿ ಶ್ರೀನಿವಾಸನ್



ಎಲ್ಲಿ ಹೋದ ನನ್ನ ಗಣಪ
ಗಂಗೆ ಕರೆದೊಯ್ದಳೆ ?
ನಿರಾಕಾರ ನಿರ್ವಿಕಲ್ಪ ಅವನ
ಹೇಗೆ ಸೆಳೆದಳೆ ?

ಪುಟ್ಟ ಬಾಲಕನಾಗಿ ಭುವಿಗೆ
ಬಂದನವ ಶ್ರಾವಣದಿ,
ಶ್ಲೋಕಗುರು, ಗುಪ್ತಚಾರ
ಸಲಹೆಗಾರನ ಪಾತ್ರದಿ.

ಎಲ್ಲರಲ್ಲೂ ಒಂದಾಗಿ
ಎಲ್ಲರಿಗೂ ಬೇಕಾಗಿ,
ಹಲವಾರು ಪಾತ್ರ ಧರಿಸಿ
ಮೋಡಿ ಮಾಡಿ ಮೆರೆದ
ನಗುತ ಭುವಿಯಲಿ .

ಭಾದ್ರಪದದ ಚೌತಿ ಕಳೆಯೆ
ತಾಯಿ ಗೌರಿ ಕರೆದಳೆ?
ಹರನ ನಂದಿ ಕೈಲಾಸದ
ಸೊಬಗು ಸೆಳೆದೊಯ್ಯಿತೇ?

ಆದಿಯಲ್ಲಿ ಗಾಂಧಾರ ಅಂತ್ಯದಲಿ
ಪಂಚಮ, ಮಧ್ಯದಲ್ಲಿ"ಣ"ಕಾರ
ಝೇಂಕಾರಿಸೆ ಮನದಾಳದಿ,
ಕ್ಷಣದಲ್ಲಿ ಮಾಯವಾದನವ
ಎಲ್ಲೆಡೆ ನಾ ಹುಡುಕಿದೆ.

ಹೋಗಿ ಬಾ ಪುಟ್ಟ ಗಣಪ
ಎಲ್ಲಿಗೆ ನೀ ಓಡುವೆ ?
ನಿನ್ನ ರೂಪ ನಿನ್ನ ಬಿಂಬ
ಒಳಗು ಹೊರಗು ಎಲ್ಲೆಡೆ
ನನ್ನಲಿ ಸದಾ ತುಂಬಿರೆ.

***

ಮಕ್ಕಳ ಕಥೆ ರಚನೆ ಅಭಿಯಾನ

"ಭುವಿಯಲ್ಲಿ ಗಣಪನ ಪಯಣ"~ಪಕ್ಷಿನೋಟ

– ಮಾಲತಿ ಶ್ರೀನಿವಾಸನ್



ಕೈಲಾಸದಿಂದ ಶಿವ ಪಾರ್ವತಿಯವರ ಒಪ್ಪಿಗೆ ಪಡೆದು ಭೂಮಿಗೆ ಬಂದರು, ಗಣೇಶ ಬಾಲಕನ ರೂಪದಲ್ಲಿ ಗಣಪನಾಗಿ, ಅವನ ವಾಹನ ಮೂಷಿಕ ಮುದ್ದಾದ ಬಿಳಿಯ ನಾಯಿಯ ರೂಪದಲ್ಲಿ. ಅವರಿಬ್ಬರ ಅನುಭವಗಳು ನಮ್ಮ ಬೆಂಗಳೂರಿನಲ್ಲಿ ಎಷ್ಟು ಸೊಗಸಾಗಿತ್ತಲ್ಲವೇ?

ಗಣಪ ಮತ್ತು ಮೂಷಿಕನನ್ನು ಅನಾಥಾಶ್ರಮದಿಂದ ಮನೆಗೆ ಕರೆದುಕೊಂಡು ಹೋಗಿ ಆಶ್ರಯ ಕೊಟ್ಟವರು ಶಿವಣ್ಣ ಪಾರ್ವತಿ ದಂಪತಿಗಳು. ಮಕ್ಕಳಿಲ್ಲದ ಅವರಿಗೆ ಮಗನಂತೆ ಇದ್ದು, ಅವರ ಮನೆಯಲ್ಲಿ ಹಸುಗಳನ್ನು ಕದಿಯಲು ಬಂದ ಕಳ್ಳರನ್ನು ಓಡಿಸಿ ಶಿವಣ್ಣನವರ ಹಸುಗಳನ್ನು ಕಾಪಾಡಿದ ನಮ್ಮ ಗಣಪ.

ಶಾಲೆಯಲ್ಲಿ ಗುರುಗಳು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಸರಿಯಾದ ಉತ್ತರ ಕೊಟ್ಟು ಶಾಲೆ ಸೇರಿದ. ಜೊತೆಯಲ್ಲಿದ್ದವರಿಗೆಲ್ಲಾ ಶ್ಲೋಕ ಹೇಳಿಕೊಡುವ ಗುರುವಾದ. ಬೆಕ್ಕಿಗೆ ಹೆದರಿ ಶಾಲೆಗೆ ನುಗ್ಗಿದ ಮೂಷಿಕ ಮಾಡಿದ ಅವಾಂತರವನ್ನು ತಡೆಯಲು ಅವನಿಗೆ ಸರಪಳಿ ಹಾಕಿ ಕಟ್ಟುವುದನ್ನು ರೂಢಿ ಮಾಡಿಕೊಂಡ. ಶಾಲೆಯಲ್ಲಿ ಗೆಳೆಯರೊಡನೆ ಊಟದ ಡಬ್ಬಿಯ ತಿಂಡಿ ಹಂಚಿ ತಿಂದು ಸಂತೈಸಿದ.

ಕಾಲಿನ ತೊಂದರೆಯಿಂದ ನರಳುತ್ತಿದ್ದ ಸ್ನೇಹಿತ, ಮಧುವಿಗೆ ತೊಂದರೆ ಕೊಡುತ್ತಿದ್ದ ಹುಡುಗರಿಗೆ ಬುದ್ಧಿ ಕಲಿಸಿದ. ಗರುಡ ಪಂಚಮಿ ಹಬ್ಬದಂದು ನಾಗನಿಗೆ ಹಾಲೆರದು ಉಂಡೆ ತಿಂದು ಖುಷಿಪಟ್ಟ. ಶ್ರಾವಣದಲ್ಲಿ ತನಗೆ ಬಾಗಿನ ಕೊಡಲು ಯಾರು ಇಲ್ಲವೆಂದು ಕೊರಗುತ್ತಿದ್ದ ಪಾರ್ವತಿಯವರಿಗೆ ತಾಯಿ ಗೌರಿಯ ಕಡೆಯಿಂದ ಉಡುಗೊರೆ ಕೊಡಿಸಿ ಸಂತೋಷಪಡಿಸಿದ.

ಶಾಲೆಯ ಗೆಳೆಯರೊಡನೆ ಪಿಕ್ನಿಕ್ ಹೊರಟು ಗಣಪನ ದೇವಸ್ಥಾನದಲ್ಲಿ ಪಂಚಾಮೃತ ಸವಿದು, ನಂದಿಬೆಟ್ಟ ಹತ್ತಿ ಅಲ್ಲಿ ಕೋತಿಗಳು ಅವನನ್ನು ಗುರುತಿಸಿದಾಗ ನಕ್ಕು, ಬಸ್ ಕೆಟ್ಟು ನಿಂತಾಗ ಮ್ಯಾಜಿಕ್ ಮಾಡಿ ಬಸ್ಸನ್ನು ಸರಿ ಮಾಡಿ ಹೊರಡಿಸಿದ. ಶಾಲೆಯಲ್ಲಿ ನರ್ತನ ಸ್ಪರ್ಧೆಗೆ ಕರೆ ಬಂದಾಗ ಕುಂಟನೆಂದು ಮಧುವನ್ನು ರೇಗಿಸಿದ ಹುಡುಗರಿಗೆ ಬುದ್ಧಿ ಕಲಿಸಲು ಮಧುವಿಗೆ ತರಬೇತಿ ಕೊಟ್ಟು ನರ್ತನ ಮಾಡಿಸಿ ಬಹುಮಾನ ಕೊಡಿಸಿದ.



ರಾಖಿ ಹುಣ್ಣಿಮೆ ಹಬ್ಬದ ದಿನ ಹೂವು ಮಾರುವ ಹುಡುಗಿಯ ಕೈಯಿಂದ ಮಧುವಿಗೆ ತನಗೆ ರಾಖಿ ಕಟ್ಟಿಸಿಕೊಂಡು ಸಂಭ್ರಮಿಸಿದ. ಶಾಲೆಯ ಸುತ್ತಲಿನ ಕಸ ತಾನೇ ತೆಗೆದು ಹಾಕಿ ಸ್ವಚ್ಛತೆಯ ಪಾಠವನ್ನು ಗೆಳೆಯರಿಗೆ ಕಲಿಸಿದ.

ಗುಪ್ತಚಾರನಾಗಿ ಆಶ್ರಮದಲ್ಲಿ ದಿನಸಿ ತರಕಾರಿ ಕದ್ದವರನ್ನು ಹಿಡಿದು ಶಿವಣ್ಣನವರಿಗೆ ಸಹಾಯ ಮಾಡಿದ. ಸದಾ ಜಗಳ ಮಾಡುತ್ತಿದ್ದ ಅಣ್ಣ ತಮ್ಮ ರಾಮು ಶಾಮುಗೆ ಬುದ್ಧಿವಾದ ಹೇಳಿ ಪ್ರಾಣಿದಯೆ ಬಗ್ಗೆ ಪಾಠ ಕಲಿಸಿದ. ಪರೀಕ್ಷೆಗೆ ಹೆದರುತ್ತಿದ್ದ

ಮಧುವಿನೊಡನೆ ಒಟ್ಟಿಗೆ ಪಾಠಗಳನ್ನು ಓದಿ ಅವನು ಪರೀಕ್ಷೆಯಲ್ಲಿ ಮೊದಲಿಗನಾಗಲು ಗುರುವಂತೆ ಸಹಾಯಮಾಡಿದ. ಗಣಕ ಯಂತ್ರ ಬಳಸುವುದರಲ್ಲಿ ಗಣಪ ತಾನೇ ಎಲ್ಲರಿಗಿಂತ ಮೊದಲು ಎನಿಸಿದ.



ಗೆಳೆಯರೊಡನೆ ಕೂಡಿ ತರಕಾರಿ, ಹೂವಿನ ಗಿಡ, ಸೊಗಸಾಗಿ ಬೆಳೆಸಿ ಸ್ವಾತಂತ್ರ್ಯೋತ್ಸವ ಸ್ಪರ್ಧೆಯಲ್ಲಿ ಆಶ್ರಮಕ್ಕೆ ಬಹುಮಾನ ಗಿಟ್ಟಿಸಿದ. ನಗರದ ನಾಯಿಗಳನ್ನ ಹಿಡಿದು ಒಯ್ಯುವ ವಾಹನದಲ್ಲಿ ಹೋದ ಮೂಷಿಕನನ್ನು ಅಲ್ಲಿಂದ ಬಿಡಿಸಿ ತಂದ. ತಾನೇ ಬ್ಯಾಟು, ಬಾಲು ಹಿಡಿದು ಗೆಳೆಯರಿಗೆಲ್ಲ ಕ್ರಿಕಟ್ ಕಲಿಸಿದ.

ಕೃಷ್ಣಜನ್ಮಾಷ್ಟಮಿಯಂದು, ಕುಂಟನೆಂದು ಮಧುವನ್ನು ಹೀಯಾಳಿಸಿದವರಿಗೆ ಬುದ್ಧಿ ಕಲಿಸಲು ಅವನನ್ನು ಎತ್ತಿಕೊಂಡು ಮೊಸರಿನ ಗಡಿಗೆ ಅವನ ಕೈಯಲ್ಲಿ ಒಡೆಸಿದ.

ತಾಯಿ ಗೌರಿಯ ಭಯ ನಿವಾರಿಸಲು ಶ್ರಾವಣ ಕಳೆಯುತ್ತಿದ್ದಂತೆ ಕೈಲಾಸಕ್ಕೆ ಹೊರಡಲು ಒಪ್ಪಿದ.

ಶಿವಣ್ಣನವರೊಡನೆ ಅವರ ಹಳ್ಳಿಗೆ ಹೊರಟು, ಅಲ್ಲಿನ ಸುಂದರ ವಾತಾವರಣ, ರುಚಿಯಾದ ಊಟ ಸವಿದು, ಹಿಂತಿರುಗಿ ಬರುತ್ತಿದ್ದಾಗ ಬಸ್ಸಿನಲ್ಲಿ ಸಿಕ್ಕ ತಾಯಿ ಗೌರಿಯ ಗುರುತು ಹತ್ತಿದವನಂತೆ "ಅಮ್ಮ" ಎಂದು ತಬ್ಬಿದ. ಗಣಪ ಗೌರವ್ವನ ಮಗನೆಂದು ಎಲ್ಲರೂ ಒಪ್ಪಿಕೊಂಡ ನಂತರ, ಪಾರ್ವತಿಯವರು ನೀಡಿದ ಔತಣ ಉಡುಗೊರೆ ಸ್ವೀಕರಿಸಿ ರಿಕ್ಷಾ ಏರಿ ಅಮ್ಮನೊಡನೆ ಮತ್ತೆ ಚೌತಿಗೆ ಭೂಮಿಗೆ ಬರುವ ಕನಸು ಕಾಣುತ್ತಾ ಕೈಲಾಸಕ್ಕೆ ಹೊರಟ.

ಮಕ್ಕಳೇ, ಎಂತಹ ಸುಂದರ ಅನುಭವ ಗಣಪನಿಗೆ, ಅವನ ಸ್ನೇಹಿತರಿಗೆ ಮತ್ತು ಶಿವಣ್ಣ ಪಾರ್ವತಿ ದಂಪತಿಗಳಿಗೆ. ನಮಗೆ ತಿಳಿಯದೆ ನಮ್ಮ ಸುತ್ತಲೂ ಅದೆಷ್ಟು ಜನ ಗಣಪರಿದ್ದಾರೋ ಎಲ್ಲರಿಗೂ ಒಳ್ಳೆಯದನ್ನು ಮಾಡುತ್ತಾ ನೀತಿ ಪಾಠ ಹೇಳುತ್ತಾ ನಮ್ಮಲ್ಲಿ ನಿಮ್ಮಲ್ಲಿ ಒಂದಾಗಿರುತ್ತಾರೆ. ಅವರಿಗೆ ನಮಸ್ಕರಿಸೋಣ.

ಈ ಗಣಪನ ಪಯಣದ ಅನುಭವ ಕಥೆಗಳಿಗೆ ಪ್ರೋತ್ಸಾಹ, ಸಲಹೆ ನೀಡಿದ ಮೊಮ್ಮಕ್ಕಳು ಆದಿತ್ಯ ಮತ್ತು ಅಮರಾಗೆ ಪ್ರೀತಿಯಿಂದ ಧನ್ಯವಾದಗಳು.

***

'ಜಿ.ಎಂ.' ~ ಒಂದು ಆವಿಷ್ಕಾರ

– ಹೆಚ್. ಶ್ರೀಧರ ರಾವ್

ವಾಹನಗಳಿಗೆ 'ಜಿ.ಎಂ.' ಅಳವಡಿಸಬೇಕೆಂಬ ಸಾಮೂಹಿಕ ಗೀಳು ವಾಹನ ಮಾಲೀಕರಲ್ಲಿ ಕಳೆದ ಒಂದು ವಾರದಿಂದ ದಿನದಿನಕ್ಕೂ ಹೆಚ್ಚಾಗುತ್ತಲೇ ಇದೆ. ಹಾಗಾದರೆ ಮೋಡಿ ಮಾಡಿದ ಆ 'ಜಿ.ಎಂ' ಎಂದರೇನು? ಅದನ್ನರಿಯಬೇಕೆಂದರೆ, ಸುಮಾರು ಇಪ್ಪತ್ತೈದು ವರ್ಷಗಳ ಈ ಮಹಾನಗರದ ಇತಿಹಾಸವನ್ನು ಕೊಂಚ ಮಟ್ಟಿಗೆ ತಿಳಿಯಲೇಬೇಕಾಗುತ್ತದೆ.

21ನೇ ಶತಮಾನದ ಉದಯದಿಂದಲೇ, Y2Kಗೆ ಪರಿಹಾರ, ತದನಂತರ ವೇಗೋತ್ಕರ್ಷ ಪಡೆದ ಐಟಿ ಉದ್ಯಮ, ಕಂಪ್ಯೂಟರೀಕರಣಗಳಿಂದಾಗಿ, ಈ ನಗರಕ್ಕೆ ಜಾಗತಿಕ ನಕ್ಷೆಯಲ್ಲಿ ವಿಶೇಷ ಸ್ಥಾನ–ಮಾನ ಲಭಿಸಲಾರಂಭಿಸಿತು. ಇಲ್ಲಿಯ ಅತ್ಯುತ್ತಮ ಹವಾಮಾನ, ಏರ್–ಕಂಡೀಶನ್ ಸಿಟಿ ಎಂಬ ಹೆಗ್ಗಳಿಕೆ, ಉದ್ಯಾನನಗರಿ ಎಂಬ ವಿಶೇಷ ಮನ್ನಣೆ, ನಗರದ ಜನತೆಯಲ್ಲಿನ ಆಪ್ತತೆ ತಂತ್ರಜ್ಞರನ್ನು ಆಕರ್ಷಿಸುತ್ತಿತ್ತು. ಟೆಕ್ನಿಕಲ್ ವಿದ್ಯಾಭ್ಯಾಸಕ್ಕೆ ತೆರೆದುಕೊಂಡಿದ್ದ ಹಲವಾರು ಶಾಲಾ ಕಾಲೇಜುಗಳು ಅವುಗಳಿಂದ ಪ್ರೇರಿತರಾಗಿ, ವಿದ್ಯಾವಂತರಾಗಿ, ಬುದ್ಧಿವಂತರಾದ ಯುವಜನತೆ, ನಗರದ ನಾಗರಿಕರಿಗೆ ಲಭಿಸುತ್ತಿದ್ದ ಅಗ್ಗದ ದೈನಂದಿನ ಊಟೋಪಚಾರ ಮತ್ತು ಜೀವನ ಕ್ರಮವೆಲ್ಲವೂ ಈ ನಗರವನ್ನು ಐಟಿ ಉದ್ದಿಮೆಗೆ, ಟೆಕ್ನಾಲಜಿ ಅಭಿವೃದ್ಧಿಗೆ ಹೇಳಿಮಾಡಿಸಿದ ಮಹಾನಗರವನ್ನಾಗಿಸಿತ್ತು. ದೇಶದ ಮಾತ್ರವಲ್ಲ, ಪ್ರಪಂಚದ ಮೂಲೆ–ಮೂಲೆಗಳಿಂದಲೂ, ಐಟಿ ದಿಗ್ಗಜರೂ, ಕಾರ್ಪೊರೇಟ್‌ಗಳೂ ಈ ನಗರದ ಪ್ರತಿಷ್ಠೆಗೆ ಮರುಳಾಗಿ ದಾಂಗುಡಿಯಿಡಲಾರಂಭಿಸಿದರು.

ಈ ಮಹಾನಗರದಲ್ಲಿ ಏನೇನು ಆಗುತ್ತಿದೆ? ಹೇಗೆ ನಗರವನ್ನು ಯೋಜಿಸಬೇಕು? ಏನು ಗೃಹ ನಿರ್ಮಾಣ ಯೋಜನೆಗಳನ್ನು ಸಿದ್ಧಪಡಿಸಿಕೊಳ್ಳಬೇಕು ಎಂದು, ಯೋಜನಾತಜ್ಞರು ಯೋಚಿಸುವ ಮೊದಲೇ, ಐಟಿ ಸಂಸ್ಥೆಗಳ, ಕಾರ್ಪೊರೇಟ್‌ಗಳ ಶಾಖೆಗಳು, ಪ್ರಧಾನ ಕಚೇರಿಗಳೂ ಬಂದು ತಳವೂರಿಯಾಯಿತು. ಟೆಕ್ನಾಲಜಿ ಅಭಿವೃದ್ಧಿಗಾಗಿ, ಫ್ರಂಟ್ ಆಫೀಸ್, ಬ್ಯಾಕ್ ಆಫೀಸ್ ಗಳೆಂದು ಪ್ರಪಂಚದ ಬಹಳಷ್ಟು ಸಂಸ್ಥೆಗಳು ಈ ಮಹಾನಗರದಲ್ಲಿ ಸ್ಥಾಪನೆಯಾದವು. ಹಾಗೆಯೇ ತಮ್ಮ ತಮ್ಮ ಸಂಸ್ಥೆಗಳಿಗಾಗಿ ಬೇಕಾದಷ್ಟು ಉದ್ಯೋಗಿಗಳನ್ನು ನೇಮಿಸಿಕೊಂಡವು. ಈ ಮಟ್ಟದ ಜನಗಳ ಒಳಹರಿವಿಗೆ ತಕ್ಕಂತೆ, ಅವರುಗಳಿಗೆಲ್ಲ ಬೇಕಾದ ಮೂಲಭೂತ ಸೌಕರ್ಯ, ವಸತಿ–ಸೌಲಭ್ಯವನ್ನು ಕಲ್ಪಿಸುವುದು ಈ ಮಹಾನಗರಕ್ಕೆ ಭಾರಿ ದೊಡ್ಡ ಸವಾಲೇ ಆಗಿತ್ತು.



ಮಹಾನಗರದ ಯೋಜನೆಗಳೆಲ್ಲವನ್ನೂ ಗಾಳಿಗೆ ತೂರಿ ಕೆಲವು ಹಿತಾಸಕ್ತ ಭಾರಿ ನಿರ್ಮಾಣ ಕಂಪನಿಗಳೂ, ಕೆಲವು ಸಣ್ಣ ಮಟ್ಟ ರಿಯಲ್ ಎಸ್ಟೇಟ್ ಡೆವಲಪರುಗಳೂ, ಕಾಂಟ್ರಾಕ್ಟರುಗಳೂ, ಜನಸಾಮಾನ್ಯರೂ ಕೂಡ ನಗರದಲ್ಲಿ ಎಡೆಯಿದ್ದ ಕಡೆ, ಕಟ್ಟಡಗಳನ್ನು ನಿರ್ಮಿಸಲಾರಂಭಿಸಿದರು. ಕೆಲವು ಪ್ರಭಾವಿ ನಿರ್ಮಾಣ ಸಂಸ್ಥೆಗಳು ಗೋಮಾಳಗಳನ್ನೂ, ಕೆರೆಕಟ್ಟೆಗಳನ್ನೂ ಆಪೋಶನ ತೆಗೆದುಕೊಂಡು ಗೃಹ, ಅಪಾರ್ಟ್ಮೆಂಟ್, ವಿಲ್ಲಾಗಳೆಂದು ನಿರ್ಮಾಣ ಮಾಡಿದವು.

ಈ ಪರಿಯಲ್ಲಿ ಬೆಳೆಯುತ್ತಿರುವ ನಗರದ ಮೂಲಭೂತ ಸೌಲಭ್ಯಗಳನ್ನು, ನಿಗದಿತ ಯೋಜನಾ ಬದ್ಧತೆಯನ್ನು ನಿರ್ದೇಶಿಸುವ ಅಥವಾ ನಿರೀಕ್ಷಿಸುವ ಕೆಲಸವನ್ನೂ ಮಹಾನಗರಪಾಲಿಕೆಯ ಅಧಿಕಾರಿಗಳಿಗೆ ನಿರ್ವಹಿಸಲು ಸಾಧ್ಯವಾಗಲೇ ಇಲ್ಲ. ಕಟ್ಟಡಗಳಿಗೆ, ಮನೆಗಳಿಗೆ ಬೇಕಾದಂತಹ ನೀರಾಗಲೀ, ವಿದ್ಯುಚ್ಛಕ್ತಿಯಾಗಲೀ, ಸುವ್ಯವಸ್ಥಿತ ರಸ್ತೆಗಳನ್ನಾಗಲೀ ಒದಗಿಸುವಲ್ಲಿ ಕಟ್ಟಡದ ಮಾಲಿಕರ, ಮಹಾನಗರಪಾಲಿಕೆ ಅಧಿಕಾರಿಗಳ ಪ್ರಯತ್ನ ಯಶಸ್ವಿಯಾಗಲಿಲ್ಲ.

25 ವರ್ಷಗಳ ನಿರಂತರ ಯೋಜನಾರಹಿತ, ಶಿಸ್ತುಬದ್ಧ ನಿರ್ಮಾಣ ಕಾರ್ಯದ ಕೊರತೆಯಿಂದಾಗಿ ಇಂದು ಮಹಾನಗರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೆಟ್ಟ ವಿಚಾರಗಳಿಗೆ ಸುದ್ದಿಯಲ್ಲಿದೆ. ಮಳೆ ಬಂದಾಗ, ರೋಡಿನಲ್ಲಿ ದೋಣಿ ವಿಹಾರವೆಂದೂ, ದಟ್ಟಣೆಯ ವಾಹನ ಸಂಚಾರಕ್ಕೂ, ಅತ್ಯಂತ ಕನಿಷ್ಠ ವೇಗ ಮಿತಿಗೂ, ಹೆಚ್ಚಿನ ಅಪಘಾತ ಪ್ರಕರಣಗಳಿಗೂ, ಅವೆಲ್ಲಕ್ಕೂ ಮಿಗಿಲಾಗಿ ರಸ್ತೆಗಳಲ್ಲಿ ಅಡಿಗಡಿಗೂ ಉಂಟಾದ ಹೊಂಡ-ಗುಂಡಿಗಳಿಂದಾಗಿ ಮಹಾನಗರ ಅಪಖ್ಯಾತಿಯನ್ನು ಹೊಂದಿ, ಹಿಂದಿನ ದಶಕಗಳ 'ಸ್ವಚ್ಛ ಸುಂದರ ನಗರ' ವೆಂಬ ವೈಭವವನ್ನು ಕಳೆದುಕೊಳ್ಳಬೇಕಾಯಿತು.

ರಸ್ತೆಗುಂಡಿಗಳು ಸಾಮಾನ್ಯ ನಾಗರಿಕರ ನಿದ್ರೆಗೆಡಿಸಿದ್ದಲ್ಲದೆ ದಿನನಿತ್ಯದ ಸಾಮಾನ್ಯ ಜನರ ಬದುಕಿಗೆ ಶಾಪವಾಗಿ ಪರಿಣಮಿಸಿತ್ತು. ಹಲವು ಸಮಾಜ ಸೇವಾ ಸಂಸ್ಥೆಗಳೂ, ನಾಗರಿಕರೂ ಮಹಾನಗರಪಾಲಿಕೆಗೆ ಎಷ್ಟೇ ಒತ್ತಡ ತಂದರೂ ಗುಂಡಿ ಮುಚ್ಚಲು ಸಾಧ್ಯವಾಗದೆ, ಆಗಾಗ ಪ್ರಜ್ಞಾವಂತ ನಾಗರಿಕರು ಪಿಐಎಲ್ ಹಾಕಿ ಮಹಾನಗರ ಪಾಲಿಕೆಗೆ ನಿರ್ದೇಶನ ನೀಡುವಂತೆ ನ್ಯಾಯಪೀಠವನ್ನು ವಿನಂತಿಸಿಕೊಂಡದ್ದೂ ಆಯಿತು. ನಿಜವಾದ ಪರಿಸ್ಥಿತಿಯನ್ನು ಕಂಡು ಅನುಭವಿಸಿದ ನ್ಯಾಯಾಧೀಶರು ಕೂಡ ಹಲವು ಬಾರಿ ಮಹಾನಗರಪಾಲಿಕೆಗೆ ನಿರ್ದೇಶನ ನೀಡಿದ್ದೂ ಆಯಿತು.



ನ್ಯಾಯಾಂಗದ ಆದೇಶವನ್ನು ಕಡೆಗಣಿಸಲೂ ಆಗದೆ, ಇರುವ ಹೊಂಡ ಮುಚ್ಚಲೂ ಸಾಧ್ಯವಾಗದೆ, ಸಂಬಂಧಿತ ಅಧಿಕಾರಿಗಳು ಮತ್ತು ರಾಜ್ಯ ಸರ್ಕಾರದ ಮಂತ್ರಿಗಳು ತೆನಾಲಿರಾಮನ ಜಾಣ್ಮೆಯನ್ನು ಅಳವಡಿಸಿಕೊಂಡದ್ದು ಜನಜನಿತವಾಗಿತ್ತು.

ಒಮ್ಮೆ ವಿಜಯನಗರದ ಮಹಾರಾಜರು, ಆಸ್ಥಾನ ಜಾಣನಾಗಿದ್ದ ತೆನಾಲಿ ರಾಮನಿಗೆ ಒಂದು ಪ್ರಶ್ನೆಯನ್ನು ಕೇಳುತ್ತಾರೆ, "ನಮ್ಮ ಸಾಮ್ರಾಜ್ಯದಲ್ಲಿ ಎಷ್ಟು ಕಾಗೆಗಳಿವೆ ಎಂಬುದನ್ನು ಎಣಿಸಿ ಹೇಳಬೇಕು?" ಎಂದು. ಎರಡನೇ ಮಾತಿಲ್ಲದೆ ತೆನಾಲಿ ರಾಮ ಉತ್ತರಿಸುತ್ತಾನೆ, "ಆಗಲಿ ಮಹಾಸ್ವಾಮಿಗಳೇ, ನಾಳೇನೇ ಹೇಳುತ್ತೇನೆ" ಎಂದು.

ಮರುದಿನ ತನ್ನ ಲೆಕ್ಕವನ್ನು ಮಹಾರಾಜರ ಮುಂದಿಡುತ್ತಾನೆ, "ಮಹಾಸ್ವಾಮಿ, ನಮ್ಮ ಸಾಮ್ರಾಜ್ಯದಲ್ಲಿ ಸರಿಯಾಗಿ, 11,22,345 ಕಾಗೆಗಳಿವೆ"

"ಹೇಗೆ ಹೇಳುತ್ತೀರಾ ಅಷ್ಟು ಕರಾರುವಕ್ಕಾಗಿ" ಎಂದಾಗ, "ನಾನು ಎಣಿಸಿದಾಗ, ಅಷ್ಟೇ ಇದ್ದದ್ದು. ಈಗ ನೀವು ಎಣಿಸಿ ನೋಡಿ, ಹೆಚ್ಚು ಕಡಿಮೆ ಇದ್ದರೆ ಪಕ್ಕದ ರಾಜ್ಯದಿಂದ ಬಂದಿರಬಹುದು, ಇಲ್ಲವಾದಲ್ಲಿ ಪಕ್ಕದ ರಾಜ್ಯಕ್ಕೆ ಹೋಗಿರಬಹುದು ಒಟ್ಟಿನಲ್ಲಿ ನನ್ನ ಲೆಕ್ಕ ಪಕ್ಕಾ." ಎನ್ನುತ್ತಾನೆ.

ಅದೇ ರೀತಿ, ನ್ಯಾಯಪೀಠ ಆಗಾಗ ಕೇಳುತ್ತಿದ್ದ ಪ್ರಶ್ನೆ, "ಮಹಾನಗರದಲ್ಲಿ ಎಷ್ಟು ಹೊಂಡಗಳಿವೆ? ಎಷ್ಟು ಮುಚ್ಚಿದ್ದೀರಿ? ಎಷ್ಟು ಮುಚ್ಚಲು ಬಾಕಿ ಇವೆ?" ಎಂದಾಗ, ಅಧಿಕಾರಿಗಳ, ಸಂಬಂಧಿತ ರಾಜ್ಯ ಸರ್ಕಾರದ ಮಂತ್ರಿಗಳ ಉತ್ತರ ತೆನಾಲಿರಾಮನ ಜಾಣ್ಮೆಯನ್ನು ಮೀರಿಸುವಂತೆ ಇರುತ್ತಿತ್ತು. ಆಗಾಗ ಬರುತ್ತಿದ್ದ ಪಿಐಎಲ್‌ಗಳಿಂದ, ಅದಕ್ಕೆ ನ್ಯಾಯಪೀಠ ಕೊಡುತ್ತಿದ್ದ ನಿರ್ದೇಶನ, ಅಧಿಕಾರಿಗಳು ನೀಡುತ್ತಿದ್ದ ಉತ್ತರ ಎಲ್ಲವನ್ನೂ ನೋಡಿ ಬೇಸತ್ತ ನ್ಯಾಯಾಲಯ ಒಂದು ಅಂತಿಮ ತೀರ್ಮಾನಕ್ಕೆ ಬರುತ್ತದೆ. ಅದರಂತೆ ನ್ಯಾಯಪೀಠವೇ, ಮಹಾನಗರದ ಬುದ್ಧಿವಂತರ, ಪ್ರತಿಷ್ಠಿತರ, ರಸ್ತೆ ತಜ್ಞರ, ವಾಹನ ಸವಾರರ, ಪ್ರತಿಭಾನ್ವಿತ ವಿದ್ಯಾರ್ಥಿಗಳ ಒಂದು ತಂಡವನ್ನು ರಚಿಸಿ, ಅವರಿಗೆ ಒಂದು ತಿಂಗಳ ಅವಕಾಶವನ್ನು ನೀಡಿ ಸೂಕ್ತ ಸಲಹೆಯೊಂದಿಗೆ ನ್ಯಾಯಾಲಯಕ್ಕೆ ವರದಿ ನೀಡುವಂತೆ ಆದೇಶಿಸುತ್ತದೆ.

ಆ ತಂಡದ ಎರಡನೆಯ ಸಭೆಯಲ್ಲಿ, ಯುವ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿದ್ಯಾರ್ಥಿ ತನ್ನ ಅತ್ಯಮೂಲ್ಯ ಸಲಹೆಯನ್ನು ನೀಡಿದ. ವೇಗದ ಅಳತೆಗೆ ಮತ್ತು ಮಿತಿಗೆ ಸ್ಪೀಡೋಮೀಟರ್ ವಾಹನಗಳಲ್ಲಿ ಇರುವಂತೆ ವಾಹನ ಎಷ್ಟು ಹೊಂಡ ಹಾರುತ್ತದೆ ಎನ್ನುವುದನ್ನು ಲೆಕ್ಕಹಾಕಲು ಒಂದು ಕೇಬಲ್‌ನ್ನು ಶಾಕ್‌ಅಬ್ಸಾರ್ಬರ್‌ಗೆ ಅಳವಡಿಸಿ, ಅದನ್ನು ಜಿಪಿಎಸ್ ಸಿಸ್ಟಂಗೆ ಲಿಂಕ್ ಮಾಡಿದಾಗ, ಯಾವ್ಯಾವ ರಸ್ತೆಯಲ್ಲಿ ಎಷ್ಟೊಂದು ಗುಂಡಿಗಳಿವೆ ಎಂಬ ಲೆಕ್ಕ ಸಿಕ್ಕುವುದೆಂದು ತನ್ನ ಆವಿಷ್ಕಾರವನ್ನು ಸಭೆಯ ಮುಂದಿಟ್ಟ.

ತಂಡದ ಇನ್ನೊಬ್ಬ ಬುದ್ಧಿವಂತ ಸದಸ್ಯ, ಮಹಾನಗರಪಾಲಿಕೆ ಏನು ಹೇಳಿದರೂ ತನ್ನ ಕರ್ತವ್ಯವನ್ನು ನಿರ್ವಹಿಸದೇ ಇರುವುದರಿಂದ, ಅವರಿಗೆ ದಂಡ ಹಾಕಬೇಕೆಂಬ ಸಲಹೆ ನೀಡಿದ. ಮತ್ತೊಬ್ಬ ಯುವ ಐಟಿ ಪ್ರತಿನಿಧಿ, ವಾಹನ ಸವಾರನೊಬ್ಬ ಎಷ್ಟು ಗುಂಡಿ ಹಾರುತ್ತಾನೋ ಅದಕ್ಕೆ ನಿಗದಿತ ಹಣವನ್ನು ನಗರಪಾಲಿಕೆಯ ಖಾತೆಗೆ ಲಿಂಕ್ ಮಾಡುವುದಾಗಿ ತನ್ನ ವಿದ್ವತ್ತನ್ನು ಪ್ರದರ್ಶಿಸಿದ. ದಂಡದ ಹಣವನ್ನು ರಸ್ತೆಯಲ್ಲಿ ಗುಂಡಿಯಿಂದ ತೊಂದರೆಗೆ ಒಳಗಾದವರಿಗೆ ನೇರವಾಗಿ ನೀಡಬೇಕೆಂಬ ಸಲಹೆಯನ್ನು ತಂಡದಲ್ಲಿದ್ದ ವಿರೋಧ ಪಕ್ಷದ ರಾಜಕಾರಣಿ ಒತ್ತಾಯಿಸಿದರು. ಇನ್ನೊಬ್ಬ ಸಾಫ್ಟ್‌ವೇರ್ ಕನ್ಸಲ್ಟೆಂಟ್ ಆನ್-ಲೈನಲ್ಲಿಯೇ ಎಷ್ಟು ಗುಂಡಿ ಹಾರುತ್ತದೋ, ಅಷ್ಟು ಹಣವನ್ನು ವಾಹನ ಮಾಲೀಕರ ಖಾತೆಗೆ ಜಮಾ ಮಾಡುವ ಪ್ರೋಗ್ರಾಮ್ ಮಾಡಿಕೊಡುವುದಾಗಿ ಒಪ್ಪಿಕೊಂಡನು.

ಮೂರನೆಯ ಮೀಟಿಂಗಿನಲ್ಲಿ ವಿಶೇಷ ತಜ್ಞರ ತಂಡ ಒಂದು ತೀರ್ಮಾನಕ್ಕೆ ಬಂತು. ಪ್ರಾಯೋಗಿಕವಾಗಿ ನಗರದ ಯಾವುದಾದರೂ ಒಂದು ಬಡಾವಣೆಯ ಎಲ್ಲ ವಾಹನಗಳಿಗೂ ಶಾಕ್-ಅಬ್ಸರ್ವರ್ ಗೆ ಕೇಬಲ್ ಜೋಡಿಸುವುದೆಂದೂ,



ಗುಂಡಿ ಹಾರಿದಂತೆಲ್ಲ ಒಂದೊಂದು ಗುಂಡಿಗೆ ಒಂದೊಂದು ರೂಪಾಯಿಯಂತೆ ವಾಹನದ ಮಾಲೀಕರ ಖಾತೆಗೆ ಜಮಾ ಮಾಡುವುದೆಂದೂ, ಈ ಹಣವನ್ನು ಮಹಾ ನಗರಪಾಲಿಕೆಯೇ ತನ್ನ ಸೇವೆಯಲ್ಲಿನ ಕೊರತೆಗಾಗಿ ಭರಿಸಬೇಕೆಂದೂ, ಈ ಪ್ರಸ್ತಾವನೆ ಸರಿಯಾಗಿ ಜಾರಿಯಾದಲ್ಲಿ ಇದನ್ನು ಮುಂದಿನ ದಿನಗಳಲ್ಲಿ ಮಹಾನಗರದ ಎಲ್ಲ ವಾಹನಗಳಿಗೂ ವಿಸ್ತರಿಸಬೇಕೆಂಬ ಸಲಹೆಯನ್ನು ನ್ಯಾಯಾಲಯಕ್ಕೆ ನೀಡಲಾಯಿತು. ಈ ನೂತನ ಆವಿಷ್ಕಾರಕ್ಕೆ "GM" ಎಂದು ನಾಮಕರಣಮಾಡಲಾಯಿತು. ನ್ಯಾಯಾಲಯವು ಮಹಾನಗರ ಸಭೆಯ ಅಧಿಕಾರಿಗಳಿಗೆ GMನ್ನು ಪ್ರಾಯೋಗಿಕವಾಗಿ, ಪ್ರಯತ್ನಿಸಲು ಸಲಹೆಯನ್ನು ನೀಡಿತು.

ಮಹಾನಗರಪಾಲಿಕೆಯು ನ್ಯಾಯಾಲಯದ ಸಲಹೆಯನ್ನು ಒಪ್ಪಿಕೊಂಡು, ತನ್ನ ವ್ಯಾಪ್ತಿಯಲ್ಲಿರುವ ಉತ್ತಮ ಎನಿಸಿಕೊಂಡಿದ್ದ ಪ್ರತಿಷ್ಠಿತ ಲೇ-ಔಟಿನಲ್ಲಿ ರಿಜಿಸ್ಟರ್ ಆಗಿದ್ದ ಎಲ್ಲ ವಾಹನಗಳಿಗೂ GM ಗಳನ್ನು ಅಳವಡಿಸಿಕೊಳ್ಳುವಂತೆ ಸಲಹೆ ನೀಡಿತು. GM ಯೋಜನೆ ವಾಹನ ಸವಾರರಿಗೆ ಬಯಸದೆ ಬಂದ ಭಾಗ್ಯವಾಯಿತು. ಯೋಜನೆಯ ಅನುಷ್ಠಾನವಾದ ಒಂದೇ ವಾರದಲ್ಲಿ ಕೆಲವು ವಾಹನ ಸವಾರರು ಸಾವಿರಾರು ರೂಪಾಯಿಯ ಸರದಾರರಾದರು. ಅದರಲ್ಲೂ ಕೆಲವು ಚಾಲಾಕಿ ಆಟೋ ಚಾಲಕರು, ಕ್ಯಾಬ್ ಚಾಲಕರು ಬೇಕೆಂದೇ ಗುಂಡಿಯನ್ನು ಹಾರಿಸುವ ಪ್ರಯತ್ನ ಮಾಡಲಾರಂಭಿಸಿದರು. ಎಲ್ಲ ವಾಹನ ಸವಾರರು ನಾಮುಂದು ತಾಮುಂದು ಎಂದು GM ಹಾಕಿಸಿಕೊಳ್ಳಲು GM ಏಜೆನ್ಸಿ ಮತ್ತು ಮೆಕ್ಯಾನಿಕ್‌ಗಳ ಮುಂದೆ ಉದ್ದುದ್ದ ಸರತಿ ಸಾಲುಗಳಲ್ಲಿ ನಿಲ್ಲಲಾರಂಭಿಸಿದರು.

ಒಂದು ವಾರದಲ್ಲಿ, ಮಹಾನಗರಪಾಲಿಕೆಯ ಅಧಿಕಾರಿಗಳು GM ಪ್ರಯೋಗವನ್ನು ಪುನರ್ ವಿಮರ್ಶೆ ಮಾಡುವ ಮೊದಲೇ, ನೂರಾರು ಕೋಟಿ ರೂಪಾಯಿಗಳ ದಂಡವನ್ನು ತೆತ್ತಾಗಿತ್ತು. ತಕ್ಷಣವೇ ಎಚ್ಚೆತ್ತುಕೊಂಡ ಅಧಿಕಾರಿಗಳು ತಮ್ಮ ಕಳವಳವನ್ನು, ಆರ್ಥಿಕ ಹೊರೆಯ ಸಂಪೂರ್ಣ ವರದಿಯನ್ನು ಮೇಲಧಿಕಾರಿಗಳಿಗೂ, ರಾಜ್ಯ ಸರಕಾರಕ್ಕೂ, ಸಂಬಂಧಿತ ನ್ಯಾಯಾಲಯಕ್ಕೂ ಸಲ್ಲಿಸಿ ಈ ಪ್ರಾಯೋಗಿಕ ಯೋಜನೆಯನ್ನು ಸ್ಥಗಿತಗೊಳಿಸಬೇಕೆಂದು ವಿನಂತಿಸಿದರು.

ತಕ್ಷಣವೇ, ಮಹಾನಗರ ಪಾಲಿಕೆಯು ತನ್ನ ಸಂಪೂರ್ಣ ರಸ್ತೆ ಕಾಮಗಾರಿ ತಂಡವನ್ನು, ಇತರ ಕಾಸಗಿ ಕಾಂಟ್ರಾಕ್ಟರುಗಳನ್ನು ನಗರದ ಎಲ್ಲ ರಸ್ತೆ ಗುಂಡಿ ಮುಚ್ಚುವ ಕಾರ್ಯಕ್ಕೆ ಕೈಜೋಡಿಸಲು ವಿನಂತಿಸಿತು. ಇಡೀ ನಗರದಲ್ಲಿ ಮಹಾನಗರಪಾಲಿಕೆಯ ಎಂದೆಂದೂ ಕಾಣದಿದ್ದ ಈ ಧಾವಂತ ಮತ್ತು ಜವಾಬ್ದಾರಿಯುತ ಕಾರ್ಯವನ್ನು ಕಂಡು ಜನತೆ ನಿಬ್ಬೆರಗಾರಾದರು. ಸಾಮಾನ್ಯ ನಾಗರೀಕರದ್ದೆಲ್ಲ ಒಂದೇ ಪ್ರಶ್ನೆ.

ಹಾಗಾದರೆ ಈ ಬದಲಾವಣೆಗೆ ಕಾರಣವಾದ, ಇಷ್ಟೊಂದು ಪ್ರಸಿದ್ಧಿ ಪಡೆದ GM ಎಂದರೇನು?

ಆ ತಜ್ಞರ ತಂಡದಲ್ಲಿದ್ದ ಹಾಸ್ಯ ಬರೆಹಗಾರ ಈ ನಾಮಾಂಕಿತವನ್ನು ಈ ಯೋಜನೆಗೆ ನೀಡಿದ್ದರಂತೆ. GM ಅಂದರೆ, ಸುಲಭವಾಗಿ ಅರ್ಥಮಾಡಿಕೊಳ್ಳಬಹುದಾದ ಅದೇ, "ಗುಂಡಿ ಮೀಟರ್"!

***

ಸಿಂಬ ~ ಅನಿರೀಕ್ಷಿತ ಅತಿಥಿ

– ಗುರುರಾಜ ಶಾಸ್ತ್ರಿ



ಯಾರ ಅನ್ನದ ಋಣ ಎಲ್ಲಿರುತ್ತದೆ ಎಂಬುದು ತುಂಬಾ ನಿಗೂಢವಾದ ವಿಷಯ. ಹಾಗೇ ನಮ್ಮ ಮನೆ ಅನ್ನ ಮತ್ತು ಹಾಲಿನ ಋಣ ಈ ಸಿಂಬಕ್ಕೆ ಬರೆದಿತ್ತು ಅನಿಸುತ್ತೆ.

ಅದು ಜೂನ್ ತಿಂಗಳು 15ನೇ ತಾರೀಖು, ಮನೆಯ ಹೊರಗಡೆ ಯಾವುದೋ ಪ್ರಾಣಿ ಸತ್ತಿರುವ ವಾಸನೆ. ಎಲ್ಲಾ ಕಡೆ ಹುಡುಕುತ್ತಿರುವಾಗ ಪಕ್ಕದ ಮನೆಯವರು ಓಡಿ ಬಂದರು. "ನಮ್ಮ ಮನೆಯ ಗ್ಯಾರೇಜಿನಲ್ಲಿ ಒಂದು ದೊಡ್ಡ ಬೆಕ್ಕು ಸತ್ತಿದೆ" ಎಂದರು. ಅಷ್ಟರಲ್ಲಿ ಅಣ್ಣನ ಮಗ ನಮ್ಮ ಮನೆಯ ಮೇಲಿನಿಂದ ಕೂಗಿ ಹೇಳಿದ. "ಮಹಡಿಯ ಮೇಲೆ ಪುಟ್ಟ ಬೆಕ್ಕಿನ ಮರಿ ಇದೆ" ಎಂದು. ಆ ದಿನ ತಾಯಿಬೆಕ್ಕು ಮರಿಯನ್ನು ಹಾಕಿ ಪಕ್ಕದಮನೆಯ ಗ್ಯಾರೇಜಿನಲ್ಲಿ ಸತ್ತಿತ್ತು.

ನಮ್ಮದೋ ವೈದಿಕ ಕುಟುಂಬ. ಪ್ರಾಣಿಗಳನ್ನು ಸಾಕುವುದು ನಮ್ಮ ಹಣೆಯಲ್ಲೇ ಬರೆದಿಲ್ಲ. ಹೀಗಿರುವಾಗ ಈ ಬೆಕ್ಕಿನ ಮರಿಯನ್ನು ಉಳಿಸುವುದಾದರೂ ಹೇಗೆ. ಗೆಳೆಯರನ್ನೆಲ್ಲಾ ವಿಚಾರಿಸಿದೆ. ಕೆಲವರು ಎಲ್ಲಾದರೂ ದೂರದ ಮೋರಿಯಲ್ಲಿ ಬಿಟ್ಟುಬಿಡಲು ಹೇಳಿದರು, ಆದರೆ ಆ ಮರಿಯನ್ನು ನೋಡಿದರೆ ವ್ಯಾಘ್ರ ಮನಸ್ಸಿರುವವರು ಕೂಡ ಹಾಗೆ ಮಾಡಲು ಸಾಧ್ಯವಿರಲಿಲ್ಲ. ಮೊದಲೇ ಬೀದಿನಾಯಿಗಳ ಸಾಮ್ರಾಜ್ಯವಾಗಿರುವ ನಮ್ಮ ಶ್ರೀನಗರದಲ್ಲಿ ಈ ಬೆಕ್ಕಿನ ಮರಿ ಯಾವುದಾದರು ನಾಯಿಯ ಕೋರೆ ಹಲ್ಲಿಗೆ ಸಿಕ್ಕಿಹಾಕಿಕೊಳ್ಳುವುದಂತೂ ಸತ್ಯ.

“ಇಂತಹ ಅನಾಥ ಬೆಕ್ಕುಗಳನ್ನು ಸಾಕುವವರೇ ಇದ್ದಾರೆ, ಅಂತರ್ಜಾಲದಲ್ಲಿ ಅವರ ಮೊಬೈಲ್ ನಂಬರ್ ಹುಡುಕಿ ಫೋನ್ ಮಾಡಿ” ಎಂದರು ಕೆಲವರು. ಹಾಗೆ ಹುಡುಕಿದಾಗ ನಮಗೇನೇ ಬೆಕ್ಕನ್ನು ಸಾಕಲು ಅವರು ಒತ್ತಡ ಹಾಕಿದರು. ಬೇಕಾದರೆ ಇನ್ನೊಂದೆರೆಡು ಬೆಕ್ಕುಗಳನ್ನು ಜೊತೆಗೆ ಕೊಡುವುದಾಗಿ ತಿಳಿಸಿದರು. ಈ ಯೋಜನೆಯೂ ಫಲಕಾರಿಯಾಗುವುದಿಲ್ಲ ಅಂತ ನಮಗೆ ಖಾತ್ರಿಯಾಯಿತು. "ಒಂದೆರೆಡು ದಿನ ಹಾಲು ಹಾಕಿ ಬೆಳೆಸಿ, ಆಮೇಲೆ ತನಗೆ ಬೇಕಾದ ಇಲಿ ಹೆಗ್ಗಣ ಹುಡುಕಿಕೊಂಡು ಓಡಿಹೋಗುತ್ತದೆ" ಎಂದರು ಕೆಲವರು. ಇದು ಸರಿ ಅನಿಸಿತು ನಮಗೆಲ್ಲಾ. ಆದರೆ ಮನೆಯಲ್ಲಿರುವ ಮಕ್ಕಳು ಅದಕ್ಕೆ ಭಾವನಾತ್ಮಕವಾಗಿ ಹೊಂದಿಕೊಂಡುಬಿಟ್ಟರೆ, ಅದು ಓಡಿಹೋದಾಗ ಇವರನ್ನು ತಡೆಯೋದು ತುಂಬಾ ಕಷ್ಟ ಅಂತ ನನಗೆ ಗೊತ್ತಿತ್ತು. ನಾಯಿ ಸಾಕಿದ್ದ ನನ್ನ ಗೆಳೆಯರ ಮನೆಯಲ್ಲಿ ನಾಯಿ ಸತ್ತಾಗ ಅವರು ನಡೆದುಕೊಂಡಿದ್ದ ರೀತಿ ನಾನು ನೋಡಿದ್ದೆ.

ಯಾವುದಕ್ಕೂ ಇರಲಿ ಎಂದು ಹಾಲು ಹಾಕಿ ಸಾಕಲು ಆರಂಭಿಸಿದರು ಅಣ್ಣನ ಮಕ್ಕಳು. ಅದಕ್ಕೆ "ಸಿಂಬ" ಎಂದು ನಾಮಕರಣವನ್ನೂ ಮಾಡಿದರು. ಯಾವುದೇ ಕಾರಣಕ್ಕೂ ಮನೆಯ ಮೇಲಿರುವ ಬೆಕ್ಕಿನ ಮರಿ ಮನೆ ಒಳಗೆ ಬರಬಾರದು ಎಂಬುದು ಅತ್ತಿಗೆಯ ಆಜ್ಞೆ. ನನ್ನದೂ ಅದೇ ನಿರ್ಣಯವಾಗಿತ್ತು. ದಿನ ಕಳೆಯುತ್ತಿದ್ದಂತೆ ಅಣ್ಣ ಮತ್ತು ಅಣ್ಣನ ಮಕ್ಕಳಿಗೆ ಬೆಕ್ಕಿನ ಮರಿಯ ಜೊತೆ ಒಡನಾಟ ಜಾಸ್ತಿಯಾಯಿತು.

ಸಾಮಾನ್ಯವಾಗಿ ಬೆಳೆಯುವಂತೆ ಮರಿಯು ಬೆಳೆಯುತ್ತಿಲ್ಲ ಎಂಬುದು ನಮಗೆ ಅದನ್ನು ನೋಡಿದರೆ ಗೊತ್ತಾಗುತ್ತಿತ್ತು. ಅಣ್ಣನ ಮಗ ಅಂಗಡಿಯಿಂದ ಬೆಕ್ಕಿನ ಊಟ ತಂದು ಅದಕ್ಕೆ ನೀಡಲಾರಂಭಿಸಿದಾಗ ಸ್ವಲ್ಪ ಬೆಳವಣಿಗೆಯಾಯಿತು. ನಾನು ಅದರ ಗೋಜಿಗೆ ಹೋಗಲಿಲ್ಲ. ಅದನ್ನು ಹಚ್ಚಿಕೊಳ್ಳುವುದು ನನಗೆ ಇಷ್ಟವಿರಲಿಲ್ಲ.

ಈ ಮಧ್ಯೆ ಮನೆಯವರೆಲ್ಲಾ ಶೃಂಗೇರಿಗೆ ಹೊರಟಿದ್ದರು. ಸಿಂಬಕ್ಕೆ ಬೆಳಿಗ್ಗೆ ಮತ್ತು ರಾತ್ರಿ ಹಾಲು ಹಾಕು ಎಂಬ ಕಟ್ಟಾಜ್ಞೆ ಎಲ್ಲರದೂ ನನಗೆ. ಅದಲ್ಲದೆ "ಅಲ್ಲಿ ಒಂದು ಪುಟ್ಟ ಪೈಂಟ್ ಬ್ರಶ್ ಇದೆ, ಅದರಲ್ಲಿ ಆ ಸಿಂಬನ ಮುಖ ಸ್ವಲ್ಪ ಮಾಲೀಷ್ ಮಾಡಬೇಕು" ಎಂದ ಅಣ್ಣನ ಮಗ. ಹಾಲು ಬೇಕಾದರೆ ಹಾಕುತ್ತೇನೆ, ಮಾಲೀಷ್ ಪಾಲೀಷ್ ಎಲ್ಲಾ ಮಾಡುವುದಿಲ್ಲ ಎಂದೆ.

ಅಂದು ಬೆಳಿಗ್ಗೆ ಹೋಗಿ ಅದಕ್ಕೆ ಹಾಲು ಹಾಕಿದ ಮೇಲೆ, ಕುಡಿಯುತ್ತಾ ಅಂತ ಅಲ್ಲೇ ನೋಡುತ್ತಾ ನಿಂತೆ. ಸ್ವಲ್ಪ ಹಾಲು ಕುಡಿದು, ನಂತರ ಪೈಂಟ್ ಬ್ರಷ್ ಹತ್ತಿರ ಬಂದು ಕೈಲಿ ತನ್ನ ಮುಖವನ್ನು ಒರೆಸಿಕೊಳ್ಳುತ್ತಾ ನನಗೆ ಸೂಚನೆ ಕೊಡಲಾರಂಭಿಸಿತು, ಮುಖ ಮಾಲೀಷ್ ಮಾಡು ಎಂದು. ಅದರ ಸೌಂದರ್ಯ ಮತ್ತು ಮುಗ್ಧತೆಗೆ ನಾನು ಸ್ವಲ್ಪ ಮಾರುಹೋದೆ. ಬ್ರಷ್ ತೆಗೆದು ಮುಖ ಮಾಲೀಷ್ ಮಾಡಿ, ಕೆಳಗೆ ಬಂದೆ. ಇದೇ ಕೆಲಸ ಎರಡು ದಿನ ನಡೆಯಿತು. ನಂತರ ಮನೆಯವರೆಲ್ಲಾ ಶೃಂಗೇರಿಯಿಂದ ವಾಪಸ್ ಆಗಿ ನನ್ನನ್ನು ಈ ಕೆಲಸದಿಂದ ಬಿಡುಗಡೆ ಮಾಡಿದರು, ಆದರೆ ನನ್ನ ಮನಸ್ಸಿನಲ್ಲೂ ಸಿಂಬ ಹತ್ತಿರವಾಗಿದ್ದ.

ಆಗಸ್ಟ್ ತಿಂಗಳು ಬರುತ್ತಿದ್ದಂತೆ ಆ ಬೆಕ್ಕು ವಾಟರ್ ಟ್ಯಾಂಕ್ ಇರುವ ಟಾರ್ಸಿ ಮೇಲೆ ಹೋಗುತ್ತಿತ್ತು. ಅಕ್ಕಪಕ್ಕದ ಮನೆಗಳು ನಮ್ಮ ಮನೆಗೆ ಕೂಡಿಕೊಂಡಿದ್ದರೂ ನಮ್ಮ ಮನೆಯ ಮಿತಿ ಬಿಟ್ಟು ಎಲ್ಲೂ ಹೋಗಲೇ ಇಲ್ಲ ಸಿಂಬ. ಇದು ನನಗೆ ಯೋಚನೆಗೀಡುಮಾಡಿತ್ತು. ಇಲಿಯನ್ನು ಹುಡುಕಿಕೊಂಡು ಹೋಗುವುದರ ಬದಲು ಅದು ಬಟ್ಟೆ ಒಣಗಿಸಲು ಹಾಕುವ ಕ್ಲಿಪ್ಪು, ದಾಸವಾಳದ ಹೂವು ಇವುಗಳ ಜೊತೆ ಆಟವಾಡಲು ಆರಂಭಿಸಿತು. ವೈದಿಕರಮನೆಯ ಬೆಕ್ಕಿನಂತೆ ಬೆಳೆದು ಇರುವೆ ಕಂಡರೂ ಹೆದರುತ್ತಿತ್ತು. ಯಾವುದೇ ಪ್ರಾಣಿಯನ್ನು ಅದರ ನೈಜ ಜೀವನಶೈಲಿಯ ವಿರುದ್ಧವಾಗಿ ಬೆಳೆಸಬಾರದು ಎಂಬುದು ನನ್ನ ವಾದ

ಇದ್ದಕ್ಕಿದ್ದಂತೆ ಒಂದು ದಿನ ಅದು ಮಹಡಿಯ ಮೇಲೆ ಕಾಣಲೇ ಇಲ್ಲ. ಹಿಂದಿನ ರಾತ್ರಿ ಭಯಂಕರ ಮಳೆ ಬೇರೆ ಸುರಿದಿತ್ತು. ಅಣ್ಣನ ಮಕ್ಕಳ ಮುಖ ಬಾಡಿತ್ತು. ಸದ್ಯ "ಅದಕ್ಕೆ ಬ್ರಾಹ್ಮಣರ ಮನೆಯಿಂದ ಬಿಡುಗಡೆಯಾಯಿತು ಬಿಡು" ಎಂದು ನಾನು ಹೇಳಿದರೆ, ನನ್ನಣ್ಣ "ಯಾವುದಾದರೂ ಹದ್ದು ಅದನ್ನು ಕಚ್ಚಿಕೊಂಡು ಹೋಗಿರಬಹುದು" ಎಂದು ಹೇಳಿ ನೊಂದಿದ್ದ ಮಕ್ಕಳಿಗೆ ಇನ್ನಷ್ಟು ಮನ ನೋಯಿಸಿದ್ದ. ಅಂದು ಮಧ್ಯಾಹ್ನ ಅದರ ಬಗ್ಗೆಯೇ ಮಾತನಾಡುತ್ತಾ ಊಟ ಮಾಡುತ್ತಿದ್ದಾಗ, ಎಲ್ಲಿಂದಲೋ "ಮಿಯಾವ್' ಎಂಬ ಶಬ್ಧ. ಒಮ್ಮೆಲೇ ಶಾಕ್ ಹೊಡೆದವರಂತೆ ಅಣ್ಣನ ಮಕ್ಕಳು ಮತ್ತು ಅಣ್ಣ ಮಹಡಿಗೆ ಓಡಿದರು. ಆದರೆ ಶಬ್ದ ಬರುತ್ತಿದ್ದದ್ದು ನಮ್ಮ ನೆಲಮಹಡಿಯಲ್ಲಿ ಎಂಬದನ್ನು ತಿಳಿದುಕೊಳ್ಳುವ ಸಂಯಮವೂ ಅವರಿಗಿರಲಿಲ್ಲ. ನಾನು ಮನೆಯ ಕೆಳಗೆ ಬಂದರೆ, ಪಕ್ಕದ ಮನೆಯ ಓಣಿಯಿಂದ ನಮ್ಮ ಮನೆ ಕಡೆ ಬರುತ್ತಿದೆ ಸಿಂಬ. ಎರಡು ಮಹಡಿ ಅದು ಹೇಗೆ ಇಳಿಯಿತೋ, ನಿಗೂಢ. ಎಲ್ಲರನ್ನೂ ಕೆಳಗೆ ಬರಲು ಹೇಳಿದೆ. ಅಣ್ಣನ ಮಗನ ಮುಖ ನೋಡಿದ ಸಿಂಬಾ ಸಂತೋಷಗೊಂಡ, ಹಾಗೇ ಅಣ್ಣನ ಮಗ ಕೂಡ. ಇಷ್ಟಾಗಿ ಮನೆಯಲ್ಲಿ ಯಾರೂ ಅದನ್ನು ಇದುವರೆವಿಗೂ ನೇರವಾಗಿ ಮುಟ್ಟಿರಲಿಲ್ಲ.

ಆ ಮಧ್ಯಾಹ್ನ ಅದಕ್ಕೆ ನಮ್ಮ ಗ್ಯಾರೇಜಿನಲ್ಲೇ ಹಾಲು ಹಾಕಿ ಮುಂದೇನು ಎಂದು ಯೋಚಿಸುತ್ತಿದ್ದೆವು. ಮತ್ತೆ ಅದನ್ನು ಮಹಡಿಗೆ ತೆಗೆದುಕೊಂಡು ಹೋಗಲು ನನಗೂ ಮತ್ತು ಅತ್ತಿಗೆಗೆ ಒಪ್ಪಿಗೆ ಇರಲಿಲ್ಲ. ಇಷ್ಟರಲ್ಲಿ ಬೀದಿಯಲ್ಲಿದ್ದ ಒಂದೆರೆಡು ದೊಡ್ಡ ಬೆಕ್ಕುಗಳು ಬಂದು ಅದನ್ನು ಹೆದರಿಸಿ ಹೋದವು. ನಾನು ಸಮಯಕ್ಕೆ ಸರಿಯಾಗಿ ಹೊರಬಂದಿದ್ದಕ್ಕೆ ಬಹುಶಃ ಸಿಂಬಾ ಉಳಿದುಕೊಂಡ. ಆಗಲೇ ನಿರ್ಧರಿಸಿದೆ, ಇದನ್ನು ಬೆಕ್ಕನ್ನು ಸಾಕುವ ಜನರಿಗೆ ಕೊಟ್ಟುಬಿಡಬೇಕೆಂದು. ಸದ್ಯಕ್ಕೆ ಅದನ್ನು ಉಳಿಸಿಕೊಳ್ಳಲು ಕೆಳಗೆ ನಾನಿದ್ದ ಮನೆಯ ಒಳಗೆ ಅದನ್ನು ಬರಲು ಬಿಟ್ಟೆ. ಅದು ನನ್ನ ಸುತ್ತಲೂ ಓಡಾಡುತ್ತಾ ನನ್ನ ಕಾಲಿನ ಬೆರಳುಗಳ ಜೊತೆ ಆಟವಾಡುತ್ತಿತ್ತು. ಆಗಾಗ ನನ್ನ ಕಣ್ಣುಗಳು ಮತ್ತು ಅದರು ಕಣ್ಣು ಒಂದಾಗುತ್ತಿತ್ತು. 'ಎಲ್ಲಿಯ ಋಣ ಮಾರಾಯ ನಿಂದು, ಬ್ರಾಹ್ಮಣರ ಮನೆಯ ಹಾಲು ಕುಡಿದು ಬೆಳೆಯೋ ಆಸೆ ನಿನಗೇಕಾಯ್ತು' ಎಂದು ಅದನ್ನು ನೋಡುತ್ತಾ ಮನದಲ್ಲೇ ಅಂದುಕೊಂಡೆ.

ಬೆಕ್ಕು ಸಾಕುವುದು ತಿಳಿಯದ ನಾವು ಇದನ್ನು ನಮ್ಮಲ್ಲೇ ಉಳಿಸಿಕೊಂಡರೆ ನಾವು ಎದುರಿಸಬೇಕಾದ ಸವಾಲುಗಳನ್ನು ಮನಯವರಿಗೆಲ್ಲಾ ಸಂಕ್ಷಿಪ್ತವಾಗಿ ತಿಳಿಸಿ ಅದನ್ನು ಸುರಕ್ಷಿತವಾದ ಜಾಗಕ್ಕೆ ಕಳಿಸುವುದಕ್ಕೆ ಒಪ್ಪಿಸಿದೆ. ಹತ್ತಾರು ಕಡೆ ಫೋನ್

ಮಾಡಿದ ಮೇಲೆ ಪಶುವೈದ್ಯ ಕ್ಲಿನಿಕ್‌ನವರು ಒಂದು ಮೊಬೈಲ್ ನಂಬರ್ ಕೊಟ್ಟು ಸಂಪರ್ಕಿಸಲು ತಿಳಿಸಿದರು. ಆ ವ್ಯಕ್ತಿಯನ್ನು ಸಂಪರ್ಕಿಸಿದಾಗ "ಸಾರ್, ಈಗಾಗಲೇ ನಮ್ಮಲ್ಲಿ ನೂರಾರು ಬೆಕ್ಕುಗಳಿವೆ, ಸಾಕೋದು ತುಂಬಾ ಕಷ್ಟ. ಅದಲ್ಲದೆ ಸಾರ್ವಜನಿಕರು ಬೆಕ್ಕುಗಳನ್ನು ಕೊಳ್ಳುವುದು ಮತ್ತು ಸಾಕುವುದು ತುಂಬಾ ಕಡಿಮೆ" ಎಂದರು. "ನಮಗೆ ನೀವು ಈಗ ಹೇಗೆ ಸಹಾಯ ಮಾಡಲು ಸಾಧ್ಯ" ಎಂದಾಗ, "ಸಾರ್ ನೀವು ಸ್ವಲ್ಪ ಡೊನೇಶನ್ ಕೊಟ್ಟರೆ ನಾನು ಬೆಕ್ಕನ್ನು ತೆಗೆದುಕೊಂಡುಹೋಗುವ ವ್ಯವಸ್ಥೆ ಮಾಡುತ್ತೇನೆ' ಎಂದರು. ಅವರು ಕೇಳಿದ ಹಣ ಸ್ವಲ್ಪ ಜಾಸ್ತಿಯಾದರೂ ಸಿಂಬಾ ಸರಿಯಾದ ಜಾಗಕ್ಕೆ ಸೇರುತ್ತಾನೆಂಬ ನಂಬಿಕೆ ನನಗಾಯಿತು, ಒಪ್ಪಿಕೊಂಡೆ. ಇನ್ನೆರೆಡು ಗಂಟೆಗಳಲ್ಲಿ ನಾವು ಬರುತ್ತೇವೆ ಎಂದು ಹೇಳಿ ಫೋನ್ ಇಟ್ಟರು. ಆ ಎರಡು ಗಂಟೆ ಅಣ್ಣನ ಮಗ ತನ್ನ ಆಫೀಸ್ ಮೀಟಿಂಗ್‌ಗಳನ್ನು ಮುಂದಕ್ಕೆ ಹಾಕಿ ಸಿಂಬನ ಜೊತೆ ಆಟವಾಡುತ್ತಾ ಕುಳಿತ.

ಸಂಜೆ ಆರು ಗಂಟೆಗೆ ಅದನ್ನು ಕೊಂಡಯ್ಯುವವರು ಬಂದರು. ಒಂದು ಬುಟ್ಟಿಯಲ್ಲಿ ಅದನ್ನು ಕೂಡಿಸಿಕೊಂಡು ಹೊರಟೇ ಹೋದರು. ಹೊರಗಡೆ ಜೋರಾಗಿ ಮಳೆ ಸುರಿಯುತ್ತಿತ್ತು. ಮನೆಯ ಒಳಗಡೆ ಅದಕ್ಕಿಂತ ರಭಸವಾಗಿತ್ತು ಮನೆಯವರೆಲ್ಲರ ಕಣ್ಣಿನಲ್ಲಿ ಸುರಿಯುತ್ತಿದ್ದ ನೀರು.

ಈಗ ಸಿಂಬ ಒಂದು ಸುರಕ್ಷಿತ ಜಾಗದಲ್ಲಿ ಸರಿಯಾಗಿ ಬೆಳೆಯುತ್ತಿದ್ದಾನೆ ಎಂಬ ನಂಬಿಕೆ. ಒಂದೆರೆಡು ದಿನ ಧ್ಯಾನಕ್ಕೆ ಕುಳಿತರ ಸಿಂಬನ ಮುಗ್ಧ ಕಣ್ಣುಗಳು ನನ್ನ ಮುಂದೆ ಬಂದು "ನಾನೊಬ್ಬ ಚಿಕ್ಕ ಬೆಕ್ಕು ನಿಮಗೆ ಭಾರವಾದೆನೇ?" ಎಂದು ಕೇಳುತ್ತಿದ್ದ ಹಾಗೆ ಆಗುತ್ತಿತ್ತು. ಈಗ ಒಂದು ತಿಂಗಳಿನ ನಂತರ ಎಲ್ಲರೂ ಸ್ವಲ್ಪ ಸುಧಾರಿಸಿಕೊಂಡಿದ್ದೇವೆ.

***

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಮನ್ವಯ ಸಮಿತಿ ಜಾಲತಾಣ

ನಮ್ಮ ಜಾಲತಾಣದಲ್ಲಿ (ವೆಬ್‌ಸೈಟ್) ವೀಕ್ಷಿಸಿ:

- ಸಾಹಿತ್ಯ ದಾಸೋಹದ ಎಲ್ಲಾ ಸಂಚಿಕೆಗಳು
- ಸಾಹಿತ್ಯ ದಾಸೋಹದ ಯುಟ್ಯೂಬ್ ಕೊಂಡಿಗಳು
- ವೇದಿಕೆಯ ಇತರ ಕಾರ್ಯಕ್ರಮಗಳ ಯುಟ್ಯೂಬ್ ಕೊಂಡಿಗಳು
- ಧ್ವನಿ ಕಡತಗಳು
- ಛಾಯಾಚಿತ್ರಗಳು
- ಆಲಿಸಿ – ನಮ್ಮ ಸದಸ್ಯರು ಬರೆದ ಕತೆಗಳು ಇತ್ಯಾದಿ,,, ಇತ್ಯಾದಿ...

ನಮ್ಮ ಜಾಲತಾಣ ಪ್ರವೇಶಿಸಲು ಈ ಕೊಂಡಿ ಬಳಸಿ: https://sahithyadasoha.com

ಹರಟೆ ಚೂರುಗಳು

– ವೆಂಕಟೇಶ ಕಾಮತ್, ಉಡುಪಿ

ಚೂರು 1 ~ ನಾಯಿ

ಆತ ಕಿರುಚುತ್ತಿದ್ದ, "ನಾಯಿ ಬೊಗಳಿದರೆ ದೇವಲೋಕ ಹಾಳಾಗುತ್ತಾ".

ಈ ದೇವಲೋಕ ಒಂದು ಇದ್ದರೆ ಅಲ್ಲಿದ್ದವರಿಗೆ ನಾಯಿಯ ಬಗ್ಗೆ ಗೊತ್ತಿರುವ ಸಾಧ್ಯತೆ ಇದೆ, ಆದರೆ ನಾಯಿಗಂತೂ ಖಂಡಿತ ಈ ಸ್ವರ್ಗ ನರಕಗಳ ಪರಿವೆಯೇ ಇಲ್ಲ.

ಸ್ವರ್ಗ ಶಾಪ ಕೊಟ್ಟಾಗ ಮುನ್ಸಿಪಾಲಿಟಿ ವ್ಯಾನ್ ಬಂದು ಈ ಪಾಪದ ಪ್ರಾಣಿಗಳನ್ನು ಒಯ್ಯುತ್ತಾರೇನೋ...

ನಾಯಿಯನ್ನು ನಾಯಿ ಎಂದು ಕರೆದಲ್ಲಿ ಅದು ಅಗೌರವ ಸೂಚ್ಯ, ಯಾರ ಮನಸ್ಸನ್ನೂ ನೋಯಿಸದೆ ಜಾಗ್ರತೆ ವಹಿಸಲು ಖರ್ಚಿಲ್ಲ. ಮಾತಿನ ಮೊದಲು ಪ್ರತಿ ವಾಕ್ಯ ಯೋಚಿಸಿ ಮಾತಾಡಿ, "ಈ ಮುದ್ದುಮರಿಗೆ ಏನು ಹೆಸರು ಇಟ್ಟಿರುವಿರಿ.. ಹಾಗೆ ಹೀಗೆ ಎಂದು ಮಾತಾಡಿ. ಮಂದಿ ಇವರ ಟಾಮಿಯನ್ನು ಅವರ ರಾಕಿ ಎಂದೋ ಬ್ಲಾಕಿ ಎಂದೋ ಕರೆದಲ್ಲಿ ತಪ್ಪಿಲ್ಲ. ಮನೆಯವರು ಅರ್ಥಮಾಡಿಕೊಳ್ಳುತ್ತಾರೆ. ಈ ಜಿಮ್ಮಿ, ಟಾಮಿ ತಮ್ಮ ಹೆಸರನ್ನು ಬಿಟ್ಟು ಬೇರೆ ಯಾವುದೇ ಹೆಸರು ಕರೆದರೆ ತಲೆ ತಿರುಗಿಸುವುದಿಲ್ಲಾ, ಮೂಸಿನೋಡುವುದೂ ಇಲ್ಲ.

ಈ ವಿಷಯದಲ್ಲಿ ಮನುಷ್ಯ ಜಾತಿಯೇ ಬೇರೆ. ನನ್ನ ತಂಗಿಗೆ ಆಕೆ ಬೆಳೆಯುತ್ತಿದ್ದಾಗ ಮುದ್ದಿನಿಂದಲೋ, ಸಿಟ್ಟಿನಿಂದಲೋ ಅಮ್ಮ "ಓ ಕತ್ತೆ", "ಏ ಗಾಡ್ವಾ" ಎಂದಾಗ ಆಕೆ ಕೂಡಲೇ ಅದು ತನ್ನನ್ನೇ ಕರೆದದ್ದು ಎಂದು ಓಗೊಡುವಳು, ಅಪ್ಪ ಈಗೀಗ "ಪಾಪ ಅವಳಿಗೆ ಅವಳ ಹೆಸರೇ ಮರೆತುಹೋಗಿದೆ" ಎಂದು ಹೇಳಿ ನಗುವರು.

ನಮ್ಮ ಪುಟ್ಟ ಪಾಪುಗೆ ಗೊಂಡು, ಪುಂಗನ್ನು, ರಾಂಪಾ, ಬಾಂಬ್ರೂ, ಬಾಂಬ್ರೂ ಕುಟ್ಟು, ಮತ್ತೆ ಗಲಾಟೆ ಮಾಡಿದಾಗ ಇವನೊಬ್ಬ ಪಿಆರ್ (PR) "ಪಿಣ್ಣಾ ರಾಕ್ಷಸು" ಎಂದೆಲ್ಲಾ ಕರೆದಾಗ ಆತ "ಗಾಂಡೀ, ಆಯ್ಕು" ನಿಮ್ಮ ಮಾತು ನನ್ನ ಕುಂಡಿ ಕೂಡ ಕೇಳುವುದಿಲ್ಲಾ ಎಂದು ತನ್ನ ಲೂಟಿಯಲ್ಲಿ ಮಗ್ನನಾಗಿರುತ್ತಾನೆ

ಚೂರು 2 – ನಾಗರ ಪಂಚಮಿ ಮತ್ತು ಅಪ್ಪ

ನಾಗರಪಂಚಮಿ, ಶಿವರಾತ್ರಿ, ಕಾರ್ಕಳ ತೇರು ಮತ್ತು ಕಾರ್ತಿಕ ಹುಣ್ಣಿಮೆ ಎಂದೊಡನೆ ಅಪ್ಪ ಕಾರ್ಕಳಕ್ಕೆ ಹೋಗಿ ಕಾಯಿ, ಹಣ್ಣು, ಹೂ ದೇವರಿಗೆ ಅರ್ಚನೆ ಮಾಡಿಸಿ ಪ್ರಸಾದ ತಂದು ಗಂಧವನ್ನು ನಮಗೆಲ್ಲಾ ಹಚ್ಚಿ ತೀರ್ಥ ಕುಡಿಸುತ್ತಿದ್ದರು. ಅಮ್ಮ ಕೆಲವು ಸಲ ಅವರೊಡನೆ ಹೋಗುತ್ತಿದ್ದರು, ಆದರೆ ಅಪ್ಪ ಯಾರು ತನ್ನೊಂದಿಗೆ ಬರಲಿ ಬಿಡಲಿ ತಾವು ಹೋಗುವುದನ್ನು ತಪ್ಪಿಸುತ್ತಿರಲಿಲ್ಲ. ನಾವು "ಅಲ್ಲಿ ಕಾರ್ಕಳದಲ್ಲಿ ಆ ದೇವರು ಅಪ್ಪನ ಬರುವಿಗಾಗಿ ಕಾದು ಕುಳಿತಿರುತ್ತಾರೆ" ಎಂದು ಆಡಿಕೊಂಡರೆ, ಅಪ್ಪ ಕೂಡಾ "ಕೊನೆಕೊನೆಗೆ ಅಲ್ಲಿ ಹನುಮಂತ ನನಗೆ ಕಾಯುತ್ತಿರುತ್ತಾನಲ್ಲವೇ" ಅಂದದ್ದು ಇದೆ.. ಅಪ್ಪ ಸಂಧ್ಯಾವಂದನೆ, ಮುದ್ರೆ ಎಲ್ಲಾ ಮಾಡುವುದಾಗಲಿ ನಿತ್ಯ ದೇವರೆದರು ಮಣ ಮಣ ಮಂತ್ರ, ಸ್ತೋತ್ರ ಜಪಿಸುತಿದ್ದುದ್ದಾಗಲಿ ನನಗೆ ನೆನಪಿಲ್ಲ. ಅವರ ಅಕ್ಷರ ದುಂಡಗೆ ಇತ್ತು ಮತ್ತು ಇಂಗ್ಲಿಷ್ ಸ್ಟ್ರೋಕ್ಸ್ ಸ್ಟೈಲಿಶ್ ಇತ್ತು.

ಕಥೆ ಏನೆಂದರೆ ಬಾಬರನಿಂದ ಶುರುವಾಗುವ ಮೊಘಲ್ ವಂಶದ ಬಾಬರ್, ಹುಮಾಯೂನ್, ಜಹಾಂಗೀರ್, ಶಾಹ್ ಜಹಾನ್, ಔರಂಗಝೇಬ್ ಅಂದಿನಿಂದ ಇಂದಿನವರೆಗೆ ಎಲ್ಲರಿಗೂ ಬಾಯಿಪಾಠ. ಇಂದು ಗೂಗಲ್ ವೈಕೀ ನೋಡಿದರೆ ಇಪ್ಪತ್ತು ತಲೆಮಾರು ಹೆಸರುಗಳು ೧೫೨೬ರಿಂದ ೧೮೬೨ ಬಾಬರನಿಂದ ಬಹದ್ದೂರ್ ಶಾಹ್-೨ ಅಂತ್ಯದವರೆಗೆ ೩೩೬

ವರುಷಗಳು. ನಮ್ಮಲ್ಲಿ ಯಾರು ಹೀಗೆ ಲೆಕ್ಕ ಇಟ್ಟರೋ ಗೊತ್ತಿಲ್ಲ. ನಮಗೆ ಮುತ್ತಜ್ಜ ಬಿಟ್ಟರೆ ಅವರ ಅಪ್ಪನ ಅಮ್ಮನ ತಂದೆ ತಾಯಿ, ಅಣ್ಣ ತಮ್ಮ ತಂದೆಯ ತಾಯಿಯ ಕುಟುಂಬದ ಯಾವ ಸುಳಿವು ಕಥೆಗಳು ನಾನಂತೂ ಕೇಳಿಲ್ಲ. ಇಂದು ಪಾಂಡುರಂಗ ಹೆಸರಿನ ಮುತ್ತಜ್ಜನ ಕುಲ ಹೆಣ್ಣು ಗಂಡು ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಅಂದಾಜು ಹುಡುಕಿದರೆ ಆರು ತಲೆಮಾರು ಇದ್ದು ಇನ್ನೇನು ಏಳನೇ ತಲೆ ಹುಟ್ಟಲಿದೆ.

ಅಪ್ಪ ಇದ್ದಾಗ ಕಾರ್ಕಳ ನಡುವೆ ಇದ್ದ ನಾಗನಕಟ್ಟೆ ಈಗ ೫ ಕಿ ಮೀ ದೂರ ಮಿಯ್ಯಾರು ಎಂಬಲ್ಲಿ ಮೂಲನಾಗ ಎಂದು ತಿಳಿದು ಕುಟುಂಬದವರು ಅಲ್ಲಿ ಪೂಜೆ ಸಲ್ಲಿಸುತ್ತಾರೆ.

ನಾವು ಹಣ ಕಳಿಸಿ ಮನೆಯಿಂದಲೇ ನಮಸ್ಕರಿಸಿ ಪ್ರಸಾದ ಬಂದಾಗ ಭಕ್ತಿಯಿಂದ ಹಚ್ಚಿ ಕೊಳ್ಳುತ್ತೇವೆ.

ಚೂರು 3 ~ ಅಮ್ಮ ಮತ್ತು ಆಗಸ್ಟ್ 1

ನಮ್ಮಮ್ಮನಿಗೂ ಆಗಸ್ಟ್ ಒಂದಕ್ಕೂ ಬಹಳ ನಂಟು. ಅಂದು ನಮ್ಮಮ್ಮ ಮೊದಲಬಾರಿಗೆ ಅಮ್ಮನಾದರು, ಇಸವಿ ೧೯೫೫. ಇಂದು ಅಕ್ಕನಿಗೆ ತುಂಬಿತು ಎಪ್ಪತ್ತು. ಅಮ್ಮ ಈಗ ಇಲ್ಲ.

ಅಮ್ಮ ಮದುವೆ ಆದಾಗ ಆಕೆಗೆ ೧೮ ತುಂಬಲು ಇನ್ನೂ ಐದು ತಿಂಗಳು ಮತ್ತು ಅಮ್ಮನಾದಾಗ ೧೯ಕ್ಕೂ ಒಂದೂವರೆ ತಿಂಗಳು ಕಡಿಮೆ ನಾ ೧೯೫೬ರಲ್ಲಿ ಹುಟ್ಟಿದಾಗ ಅಮ್ಮನಿಗೆ ೨೦ ವರುಷ ೬ ದಿನ, ಎರಡು ಮಕ್ಕಳ ತಾಯಿ. ಮುಂದೆ ಅಮ್ಮ ಅಜ್ಜಿ ಆದಾಗ ಅವರಿಗೆ ೪೦ ತುಂಬಲು ಮೂರು ತಿಂಗಳು ಕಡಿಮೆ. ಆ ಕಾಲ ಹಾಗಿತ್ತು.

ಶಾಲೆಗೆ ಹೋಗುವಾಗ ನನ್ನಕ್ಕ ಪ್ರತಿ ವರುಷ ನನ್ನ ಮುಂದಿನ ತರಗತಿ ಆದರೂ ನಾನು ಮೊದಲಿಂದ ಪ್ರತಿ ವರುಷ ಹೊಸ ಪುಸ್ತಕವೇ ಬೇಕೆಂದು ಹೊಸತನ್ನೇ ಕೊಳ್ಳುತ್ತಿದ್ದೆ. ಒಮ್ಮೆ ಅಂತೂ ಎರಡನೇ ತರಗತಿಯಲ್ಲಿದ್ದಾಗ ನನ್ನ ಪುಸ್ತಕ ಓದಿ ಮುಗಿಸಿ ಅವಳ ಮೂರನೇ ತರಗತಿಯ ಪುಸ್ತಕ ನನಗೆ ಓದಲು ಕೊಡಲಿಲ್ಲವೆಂದು ಹಠ ಹಿಡಿದು ನನ್ನದೇ ಹೊಸತು ಒಂದು ಮುಂದಿನ ತರಗತಿಯ ಪುಸ್ತಕ ಕೊಂಡಿದ್ದ ನೆನಪು ಇಂದಿಗೂ ಮಾಸಿಲ್ಲ.

ಶಾಲೆಯಲ್ಲಿ ವೆಂಕಟೇಶ್ ಎಂದು ಗುರುತಿಸುವದಕ್ಕಿಂತ ಹೆಚ್ಚಾಗಿ ರವಿಕಲಾಳ ತಮ್ಮ ಎಂದೇ ಗುರುತಿಸುವವರು ಹೆಚ್ಚು. ಅವಳು ಯಾವಾಗಲೂ ತರಗತಿಯಲ್ಲಿ ಒಂದನೇ ಯಾ ಎರಡನೇ ಸ್ಥಾನ, ಮೂರಕ್ಕೆ ಹೋದದ್ದು ಅಪರೂಪ. ಸ್ವಲ್ಪ ಕಡಿಮೆ ಮಾರ್ಕ್ ಬಂದಾಗ ಅವಳು ಆಕಾಶವೇ ಕಳಚಿಬಿದ್ದಂತೆ ಅಳುವುದು, ಅಕ್ಕಪಕ್ಕದವರು ಫೇಲ್ ಆಗಿದ್ದಾಳೇನೋ ಅಂದುಕೊಳ್ಳುವಂತಿತ್ತು. ಆ ದಿನಗಳಲ್ಲಿ ಈ ಯಾವುದರ ಗೊಡವೆ, ಕೀಳರಿಮೆ ಏನೂ ಇಲ್ಲದೆ ನಾ ಬೆಳೆದೆ. ನಮ್ಮಲ್ಲಿ ಆಗ ಕಷ್ಟದ ದಿನಗಳು, ಬಹಳ ಕಷ್ಟದ ದಿನಗಳು ಎರಡೇ. ಸುಖದ ದಿನಗಳು ಎಂಬ ಕಾನ್ಸೆಪ್ಟ್ ಇರಲಿಲ್ಲ. ಮನೆ ತುಂಬಾ ಜನರು. ಅಂದಿನ ಒಂದು ರೂಮ್, ಹಾಲ್ ನ ಮನೇಲಿ ಬಂದು ಹೋಗುವವರು ಬಹಳ.

ಹುಟ್ಟುಹಬ್ಬಗಳನ್ನು ಅಮ್ಮ ಅಪ್ಪಂದಿರ ಸಂಸಾರ ಸಾಗರದಲ್ಲಿ ೧೦-೧೨ ಮಕ್ಕಳು ಇದ್ದು ಆಚರಿಸುತ್ತಿದ್ದರೋ ಇಲ್ಲವೋ? ನಮ್ಮಮ್ಮ ನಮ್ಮ ಹುಟ್ಟಿದ ಹಬ್ಬವನ್ನು ಪ್ರತಿ ವರುಷ ನಮ್ಮ ಪ್ರೀತಿಯ ತಿನಿಸು ಸಮೋಸ, ಕಟ್ಲೇಟ್ ಹಾಗೂ ಸಿಹಿ ಅವಲಕ್ಕಿ ಎಲ್ಲ ಮಾಡಿ ಒಂದು ಯಾ ಎರಡು ನೆರೆಮನೆಯ ಮಕ್ಕಳು ಯಾ ಶಾಲೆಯ ಗೆಳೆಯರು ಬಂದ ನೆನಪು ಇದೆ. ಆಗ ಕೇಕು ಕಟಿಂಗ್ ಇರಲಿಲ್ಲ.

ಅಪ್ಪ ನನಗೆ ನನ್ನ ಹಠ, ಸ್ಟ್ರೈಕ್ ಗೆ ಬಗ್ಗಿ ಪ್ರತಿಸಲ ಒಮ್ಮೆ ಬ್ಯಾಂಜೋ ವಾದ್ಯ, ಒಮ್ಮೆ ಕ್ರಿಕೆಟ್ ಸೆಟ್ ಹೀಗೆ ಏನಾದರೂ ಕೊಡಿಸುತ್ತಿದ್ದರು. ನನ್ನ ಹುಟ್ಟುಹಬ್ಬ ೨೨ನೇ ತಾರೀಕು ಬಂದು ಪ್ರತಿ ವರುಷ ಆ ಸಮಯ ಅಪ್ಪ ಅಲ್ಲಿ ಇಲ್ಲಿ ಸಾಲಮಾಡಿಯೇ

ನನ್ನ ಆಸೆಗಳನ್ನು ಪೂರೈಸುತ್ತಿದ್ದರು. ಅಕ್ಕನ ಹುಟ್ಟುಹಬ್ಬ ಒಂದನೇ ತಾರೀಕು ಬಂದು ಪುಡಿಗಾಸು ಇದ್ದರೂ ಆಕೆ ಯಾವುದೇ ವಸ್ತುವನ್ನು ಆಸೆ ಪಟ್ಟದ್ದಾಗಲಿ ಬೇಡಿದ್ದಾಗಲಿ ನನಗೆ ನೆನಪಿಲ್ಲ. ಅವಳಿಗೆ ಅಮ್ಮ ಒಮ್ಮೆ ಹೊಸದೊಂದು ನೈಲಾನ್ ಫ್ರಾಕ್ ಕೊಡಿಸಿದ ನೆನಪು. ನಾವೇ ಬಾಡಿಗೆ ಮನೆಯಲ್ಲಿ ಕಷ್ಟದಿಂದ ಇದ್ದಾಗ ಅವಳು ಆ ಹೊಸ ಗೌನು ಹಾಕಿಕೊಂಡು ಗೋಡೆಯ ಪಕ್ಕದ ಪುಟ್ಟ ಔಟ್‌ಹೌಸಿನಲ್ಲಿದ್ದ ಜಲಜ, ವನಜರ ಮನೆಗೆ ಹೋಗಿ ತೋರಿಸುತ್ತಾ ಕುಪ್ಪಳಿಸುತ್ತಿರುವಾಗ ಅವರಲ್ಲೊಬ್ಬಳು "ಇದನ್ನೂ ನೀನು ಉಪಯೋಗಿಸಿ ಮುಂದೆ ಹಳತಾದಾಗ ನಮಗೆಯೇ ಕೊಡುತ್ತೀಯಲ್ಲಾ" ಅಂದಾಗ ನಮಗಿಂತ ಕಷ್ಟದಲ್ಲಿ ಇರುವವರು ಬಹಳ ಜನ ಇದ್ದಾರೆ ಎಂಬ ಸತ್ಯದ ಅರಿವು ಆ ಪುಟ್ಟ ಮಕ್ಕಳಾದ ನಮಗೆ ತಿಳಿದದ್ದು ಇಂದಿಗೂ ಒಂದು ಮರೆಯಲಾಗದ ನೆನಪು.

ಹ್ಯಾಪಿ ಬರ್ಥ್ ಡೇ ರವಿಕಲಾ.. ದೇವರು ನಿನಗೆ ಆರೋಗ್ಯ ಶಾಂತಿ ಪ್ರೀತಿ ಮತ್ತು ಎಲ್ಲರ ಒಲವು ಸದಾ ಕರುಣಿಸಲಿ.

***

ಗಾಳಿ ಗಂಟೆ

– ರಾಧಿಕಾ ವಿ ಗುಜ್ಜರ್

ಪಾರ್ಕಿಂಗ್ ಸೂರಿನ ಕೊಕ್ಕೆಗೆ
ಮುಖ್ಯ ಬಾಗಿಲ ಎದುರೇ
ಕಂಬಿಗಳ ಗಾಳಿ ಗಂಟೆ
ಆಗಾಗ ಟಣಿಗುಟ್ಟುತ್ತಿರುತ್ತದೆ

ಮನೆಯವರ ಗಮನವಿರದೆ
ಮಾರುತದ ಗಮನವದಕೆ
ಕೊಕ್ಕೆಗೆ ಬಂಧಿಸಿದ್ದರೂ
ಮಧುರ ಉಲಿಯುತ್ತಿರುತ್ತದೆ

ಮಾತೆಮ್ಮದು ಮುಗಿಯದಿಲ್ಲಿ
ತರಾವರಿಯ ಗಿರಿಗಿಟ್ಲೆ
ಸಂಸಾರದ ಸದ್ದುಗಳಲ್ಲಿ
ಗೋಡೆಗಳಾಗಿವೆ ಕೆಪ್ಪೆ

ದಿನದ ಇಪ್ಪತ್ನಾಲ್ಕೂ ತಾಸು
ಶಬ್ದಗಳಿಗಿದೆ ನಿಯಮ
ಹಗಲಿಗೆ ಆಗುಹೋಗುಗಳು
ಇರುಳಿಗೆ ತೆರವು ವಿಶ್ರಾಮ

ಯಂತ್ರಗಳೆಲ್ಲ ಅಧೀನ
ಮಾಲೀಕನ ಸನ್ನೆ ಸೂತ್ರ
ಆಡದ, ನುಡಿಯದ ಜಾಲ
ಸೋರದು ಮೀರಿ ಹಿಡಿತ

ಗೋಡೆಗಳಿಗೆ ತೆತ್ತುಕೊಂಡೇ
ಸರ್ವ ಸ್ವತಂತ್ರರು ನಾವು
ಬಾಗಿಲು ಕಿಟಕಿಗಳಿಟ್ಟು
ಚಿಲಕ ಹಾಕುವ ಬದುಕು

ಅಗುಳಿ, ಚಿಲಕ ಪೇರಿಸುತ
ಒಳಗೂ ಬೆಳೆದಿದೆ ಸಟ
ಕೆಡೆ ಅಹಮ್ಮಿನ ಪಾತ
ಸೆಲೆಯರಸಲು ಬಿಡು ತಟ

ಚದುರದಂತೆ ಬಿಗಿಹಿಡಿದು
ತೂಗಿ ಹೊಂದಿಕೊ ಲಯಕೆ
ನಿರ್ಭೀತ ಗಾಳಿ ಗಂಟೆಯಾಗು
ಏರಿಳಿತಕೆ ಅಂಜಿಕೆಯೇಕೆ

ಸರಳವೊಂದೇ ದನಿಯದು
ಖಾಲಿ ಕಂಬಿಗಳ ಉಲಿವು
ನಾದ ನಿನಾದ ಎಲ್ಲವು
ಆನಂದದ ಅನಾಹತವು

***

ಹೋಳಿಗೆಯ ಘಮಲಿನ ಹಿಂದೆ ಸಾಗುತ್ತಾ



– ಟಿ. ಎಸ್. ಶ್ರವಣ ಕುಮಾರಿ

ನಮ್ಮ ಹಿರಿಯ ಸದಸ್ಯರಾದ ಶ್ರೀಧರ ಬಾಣಾವರ ಅವರು ಬರೆದ ಒಬ್ಬಟ್ಟಿನ ಸಾರಿನ ಬಗೆಗಿನ ಸಾರವತ್ತಾದ ಲೇಖನ ನನ್ನೊಳಗೆ ಅಡಗಿ ಕುಳಿತಿದ್ದ ಒಬ್ಬಟ್ಟಿನ ಘಮಲನ್ನು ತಿವಿದೆಬ್ಬಿಸಿತು. ಅವರು ತಮ್ಮ ಲೇಖನದಲ್ಲಿ ತಿಳಿಸಿದ್ದ ಹಿರಿಯೂರಿನ ಮನೆ ನಮ್ಮ ದೊಡ್ಡಮ್ಮನ ಮನೆಯಾಗಿದ್ದು ಅಲ್ಲಿನ ರೀತಿ ರಿವಾಜುಗಳೆಲ್ಲಾ ನನಗೆ ತಕ್ಕಮಟ್ಟಿಗೆ ಪರಿಚಿತವಾದ್ದರಿಂದ ಇನ್ನೂ ಹೆಚ್ಚು ಸಂತೋಷವಾಗಿ, ಅದಕ್ಕೆ ಪೂರಕವಾದ ನನ್ನ ಅನುಭವದ ಸಂಗತಿಗಳನ್ನೂ ಸೇರಿಸಿಕೊಂಡು ಇಂದಿನ ಒಬ್ಬಟ್ಟಿನ ಕಥಾಪುರಾಣವನ್ನು ಆರಂಭಿಸುತ್ತಿದ್ದೇನೆ.

ಒಬ್ಬಟ್ಟಾಗಲೀ, ಅದನ್ನು ಮಾಡುವ ಕ್ರಮವಾಗಲೀ ಯಾರಿಗೆ ತಿಳಿದಿಲ್ಲ ಹೇಳಿ. ಅದನ್ನು ಹೇಳುತ್ತಾ ನಿಮ್ಮ ತಲೆ ತಿನ್ನುವುದಿಲ್ಲ. ಈಗಂತೂ ಎಲ್ಲೆಲ್ಲೂ ಹೋಳಿಗೆಮನೆಗಳು ತಲೆಯೆತ್ತಿ ಇಡೀ ಬೀದಿಗೆಲ್ಲಾ ತನ್ನ ಕಂಪನ್ನು ಬೀರುತ್ತಾ ಒಬ್ಬಟ್ಟು ಪ್ರಿಯರನ್ನು ಆಹ್ವಾನಿಸುತ್ತಿರುವಾಗ, ಇಂದಿನ ತರುಣ ತರುಣಿಯರೂ ಗುಂಪುಕಟ್ಟಿಕೊಂಡು ಅಲ್ಲಿ ನಿಂತು ಬಿಸಿಬಿಸಿ ಒಬ್ಬಟ್ಟಿಗೆ ಬೇಡಿಕೆ ಸಲ್ಲಿಸಿ ಹರಟುತ್ತಾ ಬಿಸಿಬಿಸಿ ಹೋಳಿಗೆಯ ಮೇಲೆ ತುಪ್ಪವನ್ನೂ ಹಾಕಿಸಿಕೊಂಡು ಬೀದಿಯಲ್ಲೇ ಮೆಲ್ಲುತ್ತಾ ನಿಲ್ಲುವುದು ಅತಿ ಸಾಮಾನ್ಯವಾದ ದೃಶ್ಯವಾಗಿದೆ. ಮಾಡುವ ಕಷ್ಟಕ್ಕೆ ಬೇಸರಿಸಿ ಮರೆವೆಗೆ ಸಂದೇ ಹೋಗಬಹುದಾಗಿದ್ದ ಹೋಳಿಗೆಯೆಂಬ ಅತ್ಯುತ್ಕೃಷ್ಟ ಖಾದ್ಯಕ್ಕೆ ಜೀವ ನೀಡಿ ಅದನ್ನೇ ತಮ್ಮ ಜೀವನೋಪಾಯವನ್ನಾಗಿ ಮಾಡಿಕೊಂಡ ಹೋಳಿಗೆಮನೆಯವರಿಗೆ ನನ್ನದೊಂದು ಹೃದಯಪೂರ್ವಕ ನಮನ. ಬಾಣಾವರರವರು ಹೇಳಿದಂತೆ ಒಂದು ಅಷ್ಟೋತ್ರಕ್ಕೆ ಸಮನಾಗುವಷ್ಟು ನಾಮಗಳ ವಿಧ ವಿಧವಾದ ಹೋಳಿಗೆಗಳು ಜಿಹ್ವಾಪ್ರಿಯರ ರಸನೆಗಳನ್ನು ತಣಿಸಲು ಅಲ್ಲಿರುತ್ತವೆ.

ನಾನು ಚಿಕ್ಕಂದಿನಲ್ಲಿ ನೋಡಿದ್ದು ಬೇಳೆ ಹೋಳಿಗೆ, ಕಾಯಿ ಹೋಳಿಗೆ, ಸಕ್ಕರೆ ಹೋಳಿಗೆ ಮತ್ತು ಕೊಬ್ಬರಿ ಹೋಳಿಗೆ ಇವಿಷ್ಟೇ. ನಮ್ಮಮ್ಮನ ಸೋದರತ್ತೆ ವತ್ಸಲಾ ಬಾಯಿ, ನಮ್ಮೆಲ್ಲರ ಪ್ರೀತಿಯ ವಚ್ಚಕ್ಕ ಹುಬ್ಬಳ್ಳಿಯ ಕಡೆಯವರು; ಅವರು ಹುರಿಗಡಲೆಯ ಪುಟಾಣಿ ಹೋಳಿಗೆ, ಖರ್ಜೂರದ ಹೋಳಿಗೆ, ಬೆಲ್ಲದ ಹೋಳಿಗೆ, ಶೇಂಗಾ ಹೋಳಿಗೆ... ಇಂತಹ ಮೂರ್‍ನಾಲ್ಕು ಹೊಸ ಬಗೆಯ ಹೋಳಿಗೆಗಳನ್ನು ತಯಾರಿಸುತ್ತಿದ್ದದ್ದನ್ನು ನೋಡಿದ್ದೆ ಮಾತ್ರವಲ್ಲ; ಸವಿದಿದ್ದೆ ಕೂಡಾ. ಹೋಳಿಗೆ ಮಾಡುವುದು ಎನ್ನುವುದು ಅವರಿಗೆ ಅನ್ನ ಸಾರು ಮಾಡಿದಷ್ಟೇ ಸಲೀಸು. ತಿಂಗಳಿಗೆ ಐದು ಕೇಜಿ ತೊಗರಿ ಬೇಳೆ ತರುವುದು ಮಾಮೂಲಿ ಯಾದರೆ ಶ್ರಾವಣ ಮಾಸದಲ್ಲಿ ಅದು ಹತ್ತು ಕೇಜಿಯಾಗುತ್ತಿತ್ತು. ಶ್ರಾವಣ ಸೋಮವಾರ, ಮಂಗಳವಾರ, ಬುಧ ಬೃಹಸ್ಪತಿವಾರ, ಶುಕ್ರವಾರವಂತೂ ಸರಿಯೇ ಸರಿ; ಇನ್ನು ಶ್ರಾವಣ ಶನಿವಾರ... ಎಲ್ಲವೂ ಅವರ ಪಾಲಿಗೆ ಹಬ್ಬದ ದಿನಗಳೇ. ಎಲ್ಲಕ್ಕೂ ಬೇಳೆ ಹೂರಣವೇ – ಹೋಳಿಗೆ ಇಲ್ಲವೇ ಕಡುಬಿನ ರೂಪದಲ್ಲಿ. ಮಧ್ಯೆ ಮಧ್ಯೆ ವರಮಹಾಲಕ್ಷ್ಮಿ, ಗೋಕುಲಾಷ್ಟಮಿ ಬೇರೆ. ಹಾಗಾಗಿ ಶ್ರಾವಣ ಮಾಸದಲ್ಲಿ ಎಂದು ಅವರ ಮನೆಗೆ ಹೋದರೂ ವಚ್ಚಕ್ಕನ ವಾತ್ಸಲ್ಯ ತುಂಬಿಕೊಂಡ ರುಚಿರುಚಿಯಾದ ಹೋಳಿಗೆ, ಕಡುಬುಗಳು ನಮಗೆ ನೈವೇದ್ಯವಾಗುತ್ತಿದ್ದವು.

ನಮ್ಮಮ್ಮ ಎಂದೂ ಹೋಳಿಗೆ ಮಾಡಿದವರಲ್ಲ. ನಮ್ಮಮ್ಮನ ದೊಡ್ಡಕ್ಕ, ಸಣ್ಣಮ್ಮ ದೊಡ್ಡಮ್ಮ ಮಾತ್ರಾ ಸಕಲ ಪಾಕವಿಶಾರದೆಯಾಗಿದ್ದು ಹೋಳಿಗೆಯಲ್ಲಂತೂ ಒಂದು ವಿಶೇಷ ನೈಪುಣ್ಯತೆಯನ್ನೇ ಪಡೆದುಕೊಂಡಿದ್ದರು. ಆದರೆ ನಮ್ಮಮ್ಮ



ಹಬ್ಬಗಳಲ್ಲಿ ಮುಂಚಿತವಾಗಿಯೇ ಯಾರಾದರೂ ಅಡುಗೆಯ ಹೆಂಗಸರಿಂದ ಮಾಡಿಸಿ ತರಿಸಿಕೊಳ್ಳುತ್ತಿದ್ದರು. ಒಂದೆರೆಡು ದಿನ ಮೊದಲೇ ತರುತ್ತಿದ್ದುದರಿಂದ ಹೆಚ್ಚಾಗಿ ಸಕ್ಕರೆ, ಕಾಯಿ ಇಲ್ಲವೇ ಕೊಬ್ಬರಿಯ ಹೋಳಿಗೆಯೇ. ಹಾಗಾಗಿ ಬೇಳೆ ಹೋಳಿಗೆ ನಮ್ಮಲ್ಲಿ ಕಡಿಮೆಯೇ; ಬೇರೆ ಯಾವುದಾದರೂ ವಿಶೇಷ ದಿನಗಳಲ್ಲಿ ಹೋಳಿಗೆಯ ಪರಿಣಿತರನ್ನು ಕರೆಸಿ ಮಾಡಿಸುತ್ತಿದ್ದರಷ್ಟೇ.

ನಮ್ಮೂರಲ್ಲಿ ಅದಕ್ಕಾಗಿ ಹೆಸರಾಂತ ಮಹಿಳೆಯರು ಸಾಕಷ್ಟಿದ್ದರು. ಹೋಳಿಗೆ ಗೌರಮ್ಮ, ಮೋಟುಗ್ಯೆ ಪಾರ್ವತಮ್ಮ, ಅಚ್ಚಮ್ಮ, ಮಡಿ ಲಕ್ಷಮ್ಮ ಇತ್ಯಾದಿ... ಇತ್ಯಾದಿ. ಅವರಲ್ಲಿ ಹೋಳಿಗೆ ಗೌರಮ್ಮ ಸುಪ್ರಸಿದ್ಧರಾಗಿ, ವಿಧವೆಯಾದಾಗ ಜೀವನೋಪಾಯಕ್ಕಾಗಿ ಒಬ್ಬಂಟಿಯಾಗಿ ಆರಂಭಿಸಿದ್ದ ಕಾಯಕಕ್ಕೆ ಜೊತೆಯಾಗಿ ಸಹಾಯಕರನ್ನು ಸೇರಿಸಿಕೊಳ್ಳುತ್ತಾ, ಬರುಬರುತ್ತಾ ತಮ್ಮ ಉದ್ದಿಮೆಯನ್ನು ವಿಸ್ತಾರವಾಗಿಸಿಕೊಂಡು, ತಾವಿದ್ದ ಮನೆಯನ್ನೂ, ಪಕ್ಕದ ಮನೆಯನ್ನೂ ಕೊಂಡು, ಅದರಲ್ಲೊಂದು ಮನೆಯನ್ನು ಹೋಳಿಗೆ ತಯಾರಿಕಾ ಕಾರ್ಖಾನೆಯನ್ನೇ ಮಾಡಿಕೊಂಡರು. ವಿದೇಶದಿಂದಲೂ ಅವರ ವಿವಿಧ ಹೋಳಿಗೆಗಳಿಗೆ ಬೇಡಿಕೆಯಿರುತ್ತಿತ್ತು. ಅವರು ಅಷ್ಟು ಪ್ರಸಿದ್ಧಿಗೆ ಬಂದ ನಂತರ ಶಿವಮೊಗ್ಗೆಯ ದೊಡ್ಡ ಬ್ರಾಹ್ಮಣರ ಕೇರಿಯ ಹಲವರು ಉತ್ಸಾಹದಿಂದ ಈ ಉದ್ಯಮಕ್ಕಿಳಿದು ಹೋಳಿಗೆ ಮತ್ತಿತರ ಖಾದ್ಯ ಪದಾರ್ಥಗಳನ್ನು ತಯಾರಿಸುತ್ತಾ ಇಡೀ ಕೇರಿಯೇ ಒಂದು ಸಂಚಲನಕ್ಕೆ ಒಳಗಾಯಿತು ಎನ್ನುವುದನ್ನು ಕೇಳಿದ್ದೇನೆ. ಗೌರಮ್ಮನವರು ಮಾಡಿದ ಸಕ್ಕರೆ ಹೋಳಿಗೆಯನ್ನು ತಿಂದ ಮೇಲೆ ನನ್ನ ನಾಲಗೆಗೆ ಬೇರಾವ ಸಕ್ಕರೆ ಹೋಳಿಗೆಯೂ ರುಚಿಸಿಲ್ಲ ಎಂಬ ಮಾತು ಸತ್ಯ... ಸತ್ಯ... ಸತ್ಯ... ಇದು ಸುಜಾತಾ ಭಟ್ಟಳ ಪ್ರಮಾಣವಲ್ಲ. ನನ್ನ ಪ್ರಾಮಾಣಿಕ ಪ್ರಮಾಣ.

ನಮ್ಮ ಪಕ್ಕದ ನಾಗಪ್ಪ ಸೆಟ್ಟರ ಹೆಂಡತಿ ಸುಶೀಲಮ್ಮನ ಮನೆಯಲ್ಲಿ ಬೇಳೆ ಹೋಳಿಗೆಯದ್ದೇ ಮೇಲುಗ್ಯೆ, ಸುಶೀಲಮ್ಮನೇ ಕಟ್ಟಿಗೆ ಒಲೆಯ ಮೇಲೆ ದಪ್ಪ ಕಬ್ಬಿಣದ ಹೆಂಚನ್ನಿಟ್ಟು ಸರಸರನೆ ಬಾಳೆಲೆಯ ಮೇಲೆ ಹೋಳಿಗೆಯನ್ನು ತೆಳ್ಳಗೆ ತಟ್ಟಿ ಬೇಯಿಸುತ್ತಿದ್ದ ದೃಶ್ಯ ಕಣ್ಣಿಗೆ ಕಟ್ಟಿದಂತಿದೆ. ಅವರ ಅಡುಗೆಮನೆಯ ಕಿಟಕಿಯನ್ನು ದಾಟಿಕೊಂಡು ನಮ್ಮ ಮುಂಬಾಗಿಲ ಮೂಲಕ ರಾಜಾರೋಷವಾಗಿ ನುಗ್ಗುತ್ತಿದ್ದ ಪರಿಮಳಕ್ಕೆ ನಮ್ಮ ಎಂದರೆ ನಾನು ಮತ್ತು ನನ್ನ ತಂಗಿಯ ಮೂಗು ಅರಳದಿರುವುದು ಸಾಧ್ಯವೇ? ನಮ್ಮ ಜಠರಾಗ್ನಿ ಕೆರಳದಿರುವುದು ಸಾಧ್ಯವೇ?! ಓದುವ ನೆಪ ಹೂಡಿಕೊಂಡು ಕೂತ ಇಬ್ಬರೂ ಗಂಧದ

ಜಾಡನ್ನರಸುತ್ತಾ ಅವರ ಮನೆಯ ಅಡುಗೆಮನೆಯಲ್ಲಿ ಇಣುಕುತ್ತಿದ್ದೆವು. "ಬಂದ್ರಾ, ಬನ್ನಿ. ಇನ್ನೇನು ನಾನೇ ಕರೆಯೋಣಾಂತಿದ್ದೆ. ಕೂತ್ಕೊಳಿ. ಬಿಸಿಬಿಸಿಯಾಗಿ ಒಬ್ಬಟ್ಟು ತಿನ್ನೋವ್ರಂತೆ" ಎಂದು ಮಣೆ ಹಾಕಿ ಮುಂದೆ ತಟ್ಟೆಯಿಟ್ಟು ಕರೆದರೆ ನಾವು ಏನೋ ಬಿಂಕ ಮಾಡಿ "ಶೀಲನ ಹತ್ರ ಪುಸ್ತಕ ಇಸ್ಕೊಳಕ್ಕೆ ಬಂದಿದ್ವಿ" ಎಂದರೆ, ಅವರಿಗೆ ನಮ್ಮ ಕಳ್ಳಾಟ ಗೊತ್ತಿಲ್ಲವೇ (ಪುಸ್ತಕ ಅಡುಗೆಮನೆಯಲ್ಲಿರುತ್ತದೆಯೇ? ಒಂದು ಪುಸ್ತಕ ತೆಗೆದುಕೊಳ್ಳೋಕೆ ಇಬ್ಬರ್‍ಯಾಕೆ?) ಪರವಾಗಿಲ್ಲ. ತಿಂದು ಹೋಗ್ತಾ ತೊಗೊಂಡು ಹೋಗುವಿರಂತೆ ಎಂದು ಫರ್ಮಾನು ಹೊರಡಿಸಿ ತಟ್ಟೆಗೆ ಬಿಸಿಬಿಸಿಯಾದ ಒಬ್ಬಟ್ಟು, ಜೊತೆಗೆ ಧಾರಾಳವಾಗಿ ಮನೆಯಲ್ಲೇ ಕಾಸಿದ ತುಪ್ಪವನ್ನೂ ಹಾಕಿದಾಗ ಅಂತಹ ಆಹ್ವಾನವನ್ನು ಮೀರುವ ಧೈರ್ಯವುಂಟೇ! ಶುರುಮಾಡಿದ ಮೇಲಿನ್ನೇನು! ಇನ್ನೊಂದು ಒಬ್ಬಟ್ಟನ್ನು ಹಾಲಿನ ಜೊತೆಗೂ ಸವಿದು ಏಳುತ್ತಿದ್ದೆವೆನ್ನಿ. ಅವರು ವರಮಹಾಲಕ್ಷ್ಮಿ ಹಬ್ಬದ ದಿನ ಮಾಡುತ್ತಿದ್ದ ಹಾಲೊಬ್ಬಟ್ಟನ್ನು ನಾನು ಮತ್ತೆಲ್ಲಿಯೂ ತಿಂದಿಲ್ಲ.

ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಆ ಕಾಲಕ್ಕೆ ಊರಿನಿಂದ ಹೊರಗಿದ್ದ ಸಹ್ಯಾದ್ರಿ ಕಾಲೇಜಿನ ಬಳಿಯಲ್ಲಿದ್ದ ಕೆ ಇ ಬಿ ಅಧಿಕಾರಿಗಳ ವಸತಿ ಸಮುಚ್ಚಯದಲ್ಲಿದ್ದ ಗೆಳತಿ ಶಾಂತವೀರಮ್ಮ ತರುತ್ತಿದ್ದ ಬೇಳೆ ಹೋಳಿಗೆಯ ರುಚಿ ಅದ್ವಿತೀಯವಾದದ್ದು. ಅವರ ಮನೆ ಅಷ್ಟು ದೂರದಲ್ಲಿತ್ತು ಎಂದೇಕೆ ವಿವರಿಸಿದ್ದೇನೆಂದರೆ ಅವರು ಮಾಡಿದಾಗೆಲ್ಲಾ ಹೋಗಿ ತಿನ್ನುವಷ್ಟು ಹತ್ತಿರವಿರಲಿಲ್ಲ ಎನ್ನುವ ಕೊರತೆ ನನ್ನನ್ನು ಕಾಡಿದೆ. ಅದರ ರುಚಿ ಎಷ್ಟು ಚೆನ್ನಾಗಿ ಮೆದುಳಿನಲ್ಲಿ ಅಚ್ಚಾಗಿದೆಯೆಂದರೆ ಇದುವರೆಗೂ ನೂರಾರು ಕಡೆಗಳಲ್ಲಿ ಹೋಳಿಗೆ ತಿಂದಿರಬಹುದು. ಉತ್ತಮ ಎನ್ನುವಂತಹ ಹೋಳಿಗೆಗಳನ್ನು ಕೆಲವೆಡೆಯಲ್ಲಿ ಸವಿದಿರಬಹುದು. ಆದರೆ ಶಾಂತವೀರಮ್ಮನ ತಾಯಿಯ ಹೋಳಿಗೆಯ ರುಚಿ... ಅದು ಬೇರೆಯದೇ ಲೋಕದ್ದು ಬಿಡಿ... ಆ ಮೃದು... ಆ ಘಮಲು... ಆ ಸವಿ... ಆ ನೆನಪು ಹಾಗೆಯೇ ಇರಲಿ. ಹಾಗೆಂದೇ ನಾನು ಹೋಳಿಗೆ ಮಾಡುವುದನ್ನು ಕಲಿಯುವ ಸಾಹಸವನ್ನೇ ಮಾಡಲಿಲ್ಲ! ಎಷ್ಟೆಲ್ಲಾ ಜನರ ಸವಿನೆನಪುಗಳು ಅಳಿಸಬಾರದು ನೋಡಿ.

ಹೋಳಿಗೆ ಮಾಡಿದರಷ್ಟೇ ಸಾಕೆ! ತಿನ್ನುವವರೂ ಅದರ ರುಚಿಯನ್ನು ಅನುಭವಿಸಿ ತಿಂದರಷ್ಟೇ ಅದನ್ನು ಕಷ್ಟಪಟ್ಟು ಮಾಡಿದ್ದಕ್ಕೊಂದು ಬೆಲೆ. ನಮ್ಮ ಸುಶೀಲಮ್ಮ ಒಮ್ಮೆ ನೆಂಟರಿಷ್ಟರನ್ನೆಲ್ಲಾ ಕರೆದು ಹೋಳಿಗೆ ಔತಣವನ್ನು ಮಾಡಿ ಸೈಯೆನಿಸಿಕೊಂಡು ಬೀಗುತ್ತಿದ್ದಾಗ ನಾಗಪ್ಪ ಸೆಟ್ಟರು, "ಸುಶೀಲಾ ಸಿಹಿ ಸ್ವಲ್ಪ ಕಮ್ಮಿಯಾಗಿತ್ತಲ್ವೇ" ಎಂದಾಗ ಭೂಮಿಗಿಳಿದು ಹೋಗಿದ್ದರು. 'ಇಲ್ಲ, ತುಂಬಾ ಚೆನ್ನಾಗಿತ್ತು' ಎಂದು ಯಾರೆಷ್ಟು ಹೇಳಿದರೂ ಅವರಿಗೆ ಸಮಾಧಾನವಿಲ್ಲ; ಗಂಡ ಮೆಚ್ಚುವಂತೆ ಮಾಡಲಿಲ್ಲವಲ್ಲ ಎನ್ನುವ ಕೊರತೆ ಅವರಿಗೆ. ಈ ಕಾಲದಲ್ಲಾದರೆ "ಅದೇ, ಮಾಡಿಕ್ಕಿದ್ರೆ ನೂರೆಂಟು ಮಾತು!" ಅಂತ ತಿರುಗುಬಾಣ ಬರ್‍ತಿತ್ತು ಬಿಡಿ. ನಮ್ಮ ನಾಗಪ್ಪ ಸೆಟ್ಟರು ಮಾವಿನ ಹಣ್ಣಿನ ಕಾಲದಲ್ಲಿ ಅದರ ಸೀಕರಣೆ ಮಾಡಿಸಿಕೊಂಡು ಅದರ ಜೊತೆಗೆ ಹೋಳಿಗೆಯನ್ನು ತಿನ್ನುತ್ತಿದ್ದವರು. ಬೆಲ್ಲಕ್ಕೇ ಸಿಹಿ ಕಮ್ಮಿ ಎನ್ನುವವರಿಗೆ ಹೋಳಿಗೆಯಲ್ಲಿ ಸಿಹಿ ಕಮ್ಮಿ ಎನ್ನಿಸುವುದು ಸಹಜವೇ ಅಲ್ಲವೇ. ಆ ಕಾಲಕ್ಕೆ ತಿನ್ನುವವರು ಎಷ್ಟು ರುಚಿಗಾರರಾಗಿದ್ದರೆಂದರೆ ನಮ್ಮ ಕುಟುಂಬದ ಪೌರೋಹಿತ್ಯಕ್ಕೆ ಬರುತ್ತಿದ್ದ ಗುರುಮೂರ್ತಿ ಶಾಸ್ತ್ರಿಗಳು, "ಅಡುಗೆಯವರು ಹೋಳಿಗೆ ಮಾಡಿದ್ರೆ ಸಿಹಿ ಒಂದಿಷ್ಟು ಕಮ್ಮೀನೇ. ಜೊತೆಗೆ ಜೇನುತುಪ್ಪಾನೂ ಬಡಿಸಿಬಿಡಿ" ಎಂದು ಕೇಳಿ ಹಾಕಿಸಿಕೊಂಡು ತುಪ್ಪ, ಹಾಲಿನೊಂದಿಗೆ ಸವಿಯುತ್ತಿದ್ದರು.

ಇನ್ನು ನನ್ನ ಗೆಳತಿ ಲಾವಣ್ಯ; ಅವಳು ಹೋಳಿಗೆ ಸವಿಯುವುದನ್ನು ನೋಡಿಯೇ ಸಂತೋಷಪಡಬೇಕು. ನಾವು ಕೆಲಸ ಮಾಡುತ್ತಿದ್ದ ಶಾಖೆಯಲ್ಲಿ ಶುಕ್ರವಾರದ ಪೂಜೆಗೆ ಪ್ರಸಾದ ಕಳುಹಿಸುವುದನ್ನು ಸನಿಹದಲ್ಲೇ ಇದ್ದ ಅಡುಗೆಯವನೊಬ್ಬನಿಗೆ ವಹಿಸಿಕೊಟ್ಟಿದ್ದರು. ಅವನು ಅಂದು ಏನು ಸಿಹಿ ಮಾಡುತ್ತಿದ್ದನೋ ಅದೇ ನಮ್ಮ ಶುಕ್ರವಾರದ ಪ್ರಸಾದ. ಹಾಗೆ ಒಮ್ಮೊಮ್ಮೆ ಹೋಳಿಗೆಯೂ ಬರುವುದಿತ್ತು. ನಾವು ಕೊಡಲು ಒಪ್ಪಿಕೊಂಡಿದ್ದ ದುಡ್ಡಿಗೆ ಅವನು ಹೋಳಿಗೆ ಕೊಡುತ್ತಿದ್ದದ್ದೇ ಹೆಚ್ಚು; ಇನ್ನು ತುಪ್ಪ ಬೇರೆ ತಂದು ಹಾಕುತ್ತಾನೆಯೇ! ನಮ್ಮ ಲಾವಣ್ಯಳಿಗೆ ಕೋಪವೋ ಕೋಪ. "ನೀವು ಯಾವತ್ತು ಹೋಳಿಗೆ ಕೊಡ್ತೀರಿ ಅಂತ ಮೊದಲೇ ಹೇಳ್ಬಿಡಿ; ನಾನು ಮನೆಯಿಂದ್ಲೇ ತುಪ್ಪ ತಂದಿಟ್ಕೋತೀನಿ. ತುಪ್ಪ ಇಲ್ದೆ ಹೋಳ್ಗೆ ತಿಂತಾರ್‍ಯೆ?" ಎಂದು ರೇಗಿಕೊಂಡಳು. ಅವನೋ, "ಒಂದು ಬಾಟಲಿ ತುಪ್ಪ ಇಲ್ಲಿ ತಂದಿಟ್ಟುಕೊಂಡಿರಿ. ನಾನು ಹೋಳಿಗೆ ತಂದುಕೊಟ್ಟಾಗ ನೀವು ಎಲ್ರಿಗೂ ತುಪ್ಪ ಬಡಿಸೋರಂತೆ" ಎಂದು ಖಾಲಿ ಟ್ರೇಯನ್ನೆತ್ತಿಕೊಂಡು ಹೋದ. ಅವಳು ಇಂಗ್ಲೆಂಡ್ ಸೇರಿದ ಮೇಲೆ

ಯಾವಾಗಲೋ ಒಮ್ಮೆ ಬಂದಿದ್ದಾಗ ಅವಳನ್ನು ಭೇಟಿ ಮಾಡಿದ ಗೆಳತಿ ಹೋಳಿಗೆ ಮನೆಯಿಂದ ಬಿಸಿಯಾದ ಹೋಳಿಗೆಯನ್ನು ಜೊತೆಗೆ ಮರೆಯದೆ ತುಪ್ಪವನ್ನೂ ತೆಗೆದುಕೊಂಡೇ ಹೋಗಿದ್ದಳು. ಗಾಂಧೀ ಬಜಾರಾದರೇನು! ಅಲ್ಲೇ ಒಂದು ಮೆಟ್ಟಿಲ ಮೇಲೆ ಕುಳಿತು ಪೊಟ್ಟಣವನ್ನು ಬಿಚ್ಚಿ ಹೋಳಿಗೆಯ ಮೇಲೆ ತುಪ್ಪವನ್ನು ಹಾಕಿಸಿಕೊಂಡು ತನ್ಮಯ ಳಾಗಿ ಸವಿದು "ಹೋಳಿಗೆಯನ್ನು ಕೊಟ್ರೆ ಹೀಗೆ ಕೊಡ್ಬೇಕು ಅನು" ಎಂದು ತಾರೀಫು ಮಾಡಿದಳು. ಲಾವಣ್ಯ ಹೋಳಿಗೆ ಮಾಡುವುದಕ್ಕೂ ಸೈ! ತಿನ್ನುವುದಕ್ಕೂ ಸೈ! ತಿನ್ನಿಸುವುದಕ್ಕೂ ಸೈ!



ಇನ್ನು ನನ್ನ ಗೆಳತಿ ಶ್ರೀಲಕ್ಷ್ಮಿಗೆ ಹೋಳಿಗೆ ಮಾಡುವುದೆಂದರೇ ಖುಷಿ. ಹೋಳಿಗೆ ಮಾಡುವ ಸಲುವಾಗಿಯೇ ಒಂದು ಬಾಳೆ ಮರವನ್ನು ಮನೆಯ ಹಿಂದೆ ಹಾಕಿಕೊಂಡಿದ್ದಾಳೆ. ಚಂದದ ಎಲೆ ನೋಡಿದ ತಕ್ಷಣ ಅವಳಿಗೆ ಹೋಳಿಗೆ ಮಾಡುವ ಉಮೇದು ಬಂದುಬಿಡುತ್ತದಂತೆ! ಇನ್ನು ಯಾರಾದರೂ ಖುಷಿಯಿಂದ ತಿನ್ನುವವರಿದ್ದರೆ ಮಾಡುವ ಖದರೇ ಬೇರೆ. ತಾನು ತಿನ್ನುವುದಕ್ಕಿಂತ ಬೇರೆಯವರಿಗೆ ತಿನ್ನಿಸುವುದರಲ್ಲೇ ಅವಳಿಗೆ ಆಸಕ್ತಿ. ಅದರ ಪ್ರಯೋಜನವನ್ನು ನಮ್ಮಂಥವರು ಪಡೆದುಕೊಳ್ಳದಿದ್ದರೆ ಹೇಗೆ?! ಬಿಸಿಬಿಸಿಯಾದ ಹೋಳಿಗೆಯನ್ನು ಮಾಡಿಸಿಕೊಂಡು, ಸವಿದು ತಿಂದು ಬಂದಿದ್ದೇನೆ. ಇನ್ನು ನಮ್ಮ ಅನುರಾಧಾ; ಅವಳಿಗೆ ಹೋಳಿಗೆಮನೆಯ ಹೋಳಿಗೆಗೆ ಹೂರಣ ಕಮ್ಮಿ; ಅದಕ್ಕೇ ಡಬಲ್ ಹೂರಣ ಎಂದು ಹೇಳಿ ವಿಶೇಷವಾಗಿ ಮಾಡಿಸಿಕೊಂಡು ತರುತ್ತಾಳೆ. ಈಗ ನಾನೂ ಇಮ್ಮಡಿ ಹೂರಣವನ್ನೇ ಹಾಕಿಸುತ್ತೇನೆ – ನೀವೂ ಬೇಕಾದರೆ ನಮ್ಮನ್ನು ಅನುಸರಿಸಬಹುದು!

ಇಲ್ಲೊಂದು ಅಪರೂಪದ ಸನ್ನಿವೇಶವನ್ನು ಹಂಚಿಕೊಳ್ಳಬೇಕು. ಅಮೇರಿಕಾದಲ್ಲಿರುವ ನನ್ನ ಮಗಳ ಸೀಮಂತವು ಭಾರತೀಯ ರೀತಿಯಲ್ಲಿಯೇ ನಡೆಯುವುದೆಂದಾಯಿತು. ಇಲ್ಲಿಂದ ಎಲ್ಲಾ ಪರಿಕರಗಳನ್ನೂ ತೆಗೆದುಕೊಂಡು ಹೋಗುವಾಗ ಜೊತೆಯಲ್ಲಿ ಸಾಕಷ್ಟು ಡಬಲ್ ಹೂರಣದ ಕಾಯಿ ಹೋಳಿಗೆಯನ್ನೂ ತೆಗೆದುಕೊಂಡು ಹೋದೆವು. ಬಂದವರೆಲ್ಲರೂ ಅವರಿಗೆ ಹೊಸದಾದ ಈ ಖಾದ್ಯದ ರುಚಿಯನ್ನು ಅಪೂರ್ವವೆಂಬಂತೆ ಸವಿದರು. ಕಾರ್ಯಕ್ರಮ ಮುಗಿದು ಹೊರಟಾಗ ಅಲ್ಲಿಯವರೆಗೆ ತುಪ್ಪವನ್ನು ನೀರಿನ ಜಗ್ಗಿನಿಂದ ಹೋಳಿಗೆಗೆ ಸುರಿಯುತ್ತಿದ್ದ ಆ ಹೋಟೇಲಿನ ಸಿಬ್ಬಂದಿ "ಸರ್, ನೀವು ತಂದ ಈ ಸಿಹಿಯಂತಹ ಅಮೃತ ಸಮಾನವಾದದ್ದನ್ನು ಇದುವರೆಗೆ ತಿಂದದ್ದಿಲ್ಲ. ನನ್ನ ಮಗಳು ಬಸುರಿ. ಒಂದೆರೆಡು ಕೊಟ್ಟರೆ ಅವಳಿಗೂ ಕೊಡುತ್ತೇನೆ" ಎಂದು ಕೇಳಿದ. ಧಾರಾಳವಾಗಿ ನಾಲ್ಕು ಒಬ್ಬಟ್ಟನ್ನು ಎತ್ತಿಕೊಟ್ಟೆವು.

ತಿನ್ನುವ ವೈಖರಿಯಲ್ಲಿ ಆರಂಭದಲ್ಲಿ ಹೇಳಿದ ನಮ್ಮ ಹಿರಿಯೂರು ದೊಡ್ಡಮ್ಮನ ಮಗ ಕಿಟ್ಟಿಯದು ಬೇರೆಯದೇ ರೇಂಜು! ಅದು ಅಲ್ಟಿಮೇಟ್ ಅನ್ನುತ್ತಾರಲ್ಲ ಆ ಲೆವೆಲ್ಲಿನದ್ದು. ಅವನ ಮಾತಿನಲ್ಲೇ ಕೇಳಿ "ಹೋಳಿಗೆಯನ್ನು ಯಾವಾಗಲೂ ಒಂಟಿ ಒಂಟಿಯಾಗಿ ಹಾಕಿಸಿಕೊಳ್ಳಬಾರದು; ಅದು ಜೋಡಿಯಾಗಿಯೇ ಎಲೆಗೆ ಬೀಳಬೇಕು. ಹೋಳಿಗೆ ಬಡಿಸಿ ತುಪ್ಪ ಬಡಿಸುತ್ತಿರುವಾಗ ಬಡಿಸುವವರ ಮುಖವನ್ನು ತಪ್ಪಿಯೂ ನೋಡಬಾರದು; ಪಕ್ಕದಲ್ಲಿ ಯಾರೊಂದಿಗಾದರೂ ಮಾತನಾಡುತ್ತಿರಬೇಕು. ತುಪ್ಪವನ್ನು ಚಮಚದಲ್ಲಿ ಬಡಿಸಬಾರದು; ಅದಕ್ಕಾಗಿ ಪುಟ್ಟ ಸೌಟು ಇರಬೇಕು; ಅದರಿಂದ ಧಾರಾಕಾರವಾಗಿ ಬೀಳುತ್ತಿರಬೇಕು. ಬಿಸಿ ಹೋಳಿಗೆ ಸಂಪೂರ್ಣವಾಗಿ ತುಪ್ಪದಲ್ಲಿ ಮೀಯಬೇಕು. ನಂತರ ಕಣ್ಮುಚ್ಚಿಕೊಂಡು ಅದರ ರುಚಿಯನ್ನು ಅನುಭವಿಸುತ್ತಾ, ಆಸ್ವಾದಿಸುತ್ತಾ ಸ್ವಾಹಾ ಮಾಡಬೇಕು. ಹೋಳಿಗೆಯ ಜೊತೆಗೆ ಬಡಿಸುವ ಹಾಲು ಮಾಮೂಲಿ ಹಾಲಲ್ಲ; ತೆಂಗಿನಕಾಯನ್ನು ರುಬ್ಬಿ ಅದರ ಗಟ್ಟಿ ಹಾಲನ್ನು ಮಿಶ್ರಮಾಡಿದ ಕಾಯಿಹಾಲಾಗಬೇಕು. ಇಂತಹ ಒಂದು

ಒಬ್ಬೆಯನ್ನು ತಿಂದಮೇಲೆ ಮತ್ತೆ ಜೋಡಿ ಹೋಳಿಗೆಯೇ ಎಲೆಗೆ ಬೀಳಬೇಕು..'' ಹೀಗೇ ತಿಂದು ಅರಗಿಸಿಕೊಳ್ಳುತ್ತಿದ್ದರು ಆ ಮನೆಯವರೆಲ್ಲರೂ. ಹಾಗೆ ತಿಂದಮೇಲೆ ಮುಂದಿನ ಪರಿಣಾಮಗಳೇನು ಎನ್ನುವುದು ಓದುಗರ ಊಹೆಗೆ ಬಿಟ್ಟದ್ದು.

ಇದುವರೆಗೂ ಪ್ರೀತಿಯಿಂದ, ಆಸಕ್ತಿಯಿಂದ, ಆಸ್ವಾದಿಸಿದ, ಆಲಿಸಿದ ಎಲ್ಲರಿಗೂ ಜೋಡಿ ಜೋಡಿ ಹೋಳಿಗೆಗಳನ್ನು ತುಪ್ಪ, ಕಾಯಿಹಾಲಿನೊಂದಿಗೆ ತಿಂದಂತಹ ತೃಪ್ತಿಯು ಸಿಗಲಿ ಎಂದು ಹಾರೈಸುತ್ತಾ ಇಲ್ಲಿಗೆ ಹೋಳಿಗೋಪಾಖ್ಯಾನವು ಸಂಪೂರ್ಣವಾದುದು.

***

ಉತ್ಸಾಹ ಲಯ ಚೌಪದಿ

ಮಣಿ ಮಹೇಶ

– ಪೂರ್ಣಿಮ ಭಗವಾನ್

ಗಿರಿಯ ಶಿಖರ ಚಾರಣದಲಿ
ಗಿರಿಜೆ ಪತಿಯ ದರುಶನ
ಹಿರಿಯ ನಾಗರಿಕರ ಹರುಷ
ಬರಿದೆ ನುಡಿಯಲಾಯಿತೆ

ಮಣಿಮಹೇಶನನೆನುತಲಿ
ಅಣಿಯಾದ ಗೆಳೆಯರು
ಕಣಿ ಹೇಳಿಬರದ ವರುಣ
ಕುಣಿಸಿದನವರಾಸೆಯ

ಸುರಿಯುತಿದ್ದ ಮಳೆಗೆ ಕಲ್ಲು
ಸರಿದು ಜಲಪ್ರಳಯವು
ಮರೆತ ರವಿಯು ತನ್ನ ಕಾರ್ಯ
ಬೆರಗಿನಿಂದ ನೋಡುತ

ಹೊರಡಲೆಂದು ಸಿದ್ಧರಾಗಿ
ಕರೆಯು ಹೋಯ್ತು ಬಳಗಕೆ
ಮರೆವ ಪಟ್ಟಿ ತಿರುವಿಯಾಯ್ತು
ಸರಿಯೆಂಬ ದೃಢತೆಗೆ

ಕಾನನದೊಳಗಬ್ಧಿ ಹರಿದು
ಯಾನ ನಿಂತು ಹೋಯಿತು
ಮಾನವರದೆ ತಪ್ಪೆನುತ್ತ
ಜೇನು ಹಾಡು ಹೇಳಿತು

ಉಕ್ಕಿ ಹರಿದ ಜಲದ ರಾಶಿ
ಸೊಕ್ಕಿನಿಂದ ಹಾದಿಗೆ
ಕಿಕ್ಕಿರಿದಿಹ ಜನಗಳಲ್ಲೆ
ಬಿಕ್ಕಿ ನೋಯ್ವ ಪರಿಯಲಿ

ಸಾವು ನೋವ ಸಂಖ್ಯೆ ನೋಡಿ
ಜಾವವೆಲ್ಲವೆಚ್ಚರ
ಹಾವು ಕಚ್ಚಿದಂತೆ ನಡುಕ
ಬೇವ ಕಹಿಯು ಮನದಲಿ

ಬೇರೆಯುಪಾಯವನು ಮಾಡೆ
ಸೇರಿದರಾಲ್ಲೈನಿನೊಳಗೆ
ತೋರೆ ಜಾಗ ಸರಿಯಿಹುದನು
ಕೋರಿಕೆಗಳು ಕೂಡಿವೆ

ಹರಿಯ ಚಿತ್ತವೆನುತಲೆಲ್ಲ
ಹೊರಟು ಶುಭಘಳಿಗೆಯಲಿ
ವರವ ಕರುಣಿಸೆಂದು ನಮಿಸಿ
ಹರನ ಪೂಜೆಗೈದರು.

***

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ – 240

ಅಧ್ಯಕ್ಷರ ಅನಿಸಿಕೆಗಳು



– ಪೂರ್ಣಿಮ ಭಗವಾನ್

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ, ನೋಡಿಯೊ ಸಾಹಿತ್ಯ ದಾಸೋಹ ಕಳೆದ ಇಪ್ಪತ್ತು ವರ್ಷಗಳಿಂದ ಪ್ರತಿ ತಿಂಗಳೂ ನಡೆಸುತ್ತಾ ಬಂದಿರುವ ದಾಸೋಹ ಇಂದು ಇನ್ನೂರನಲವತ್ತನೆಯದು. ಆರಂಭದಲ್ಲಿ ಮುಖತ: ಭೇಟಿಯಾಗಿ ನಡೆಯುತ್ತಿದ್ದ ದಾಸೋಹದ ಕಾರ್ಯಕ್ರಮ ಕರೋನಾದ ಸಮಯದಿಂದ ಆನ್ಲೈನ್‌ನಲ್ಲಿ ನಡೆಯುತ್ತಿದೆ. ಬಹಳಷ್ಟು ವಿದ್ವಾಂಸರು, ನಾಟಕಕಾರರು, ಗಾಯಕರು, ಚಿತ್ರ ಕಲಾವಿದರು, ನಿರ್ದೇಶಕರು, ಹಿರಿಯ ಪ್ರತಿಭಾವಂತ ಲೇಖಕರಿಂದ ತುಂಬಿರುವ ಬಳಗವಿದು. ಇಂದಿನ ಗೂಗಲ್ ಮೀಟ್ ಸಭೆಯ ಅಧ್ಯಕ್ಷತೆ ವಹಿಸುವ ಅವಕಾಶ ನೀಡಿರುವ ಸಂಚಾಲಕ ಸಮಿತಿಯ ಎಲ್ಲ ಪದಾಧಿಕಾರಿಗಳಿಗೂ ನನ್ನ ವಂದನೆಗಳು.

ನನ್ನದೊಂದು ಉತ್ಸಾಹ ಲಯ ಚೌಪದಿಯನ್ನು ಪ್ರಸ್ತುತಪಡಿಸಿ, ನಂತರ ಇಂದು ಪ್ರಸ್ತುತಿ ಮಾಡಿರುವ ಲೇಖನಗಳನ್ನು ಕುರಿತು ನನ್ನ ಕೆಲವು ಅನಿಸಿಕೆಗಳನ್ನು ಹೇಳುತ್ತೇನೆ. *(ಉತ್ಸಾಹ ಲಯ ಚೌಪದಿಯನ್ನು ಪ್ರತ್ಯೇಕವಾಗಿ ಹಿಂದಿನ ಪುಟದಲ್ಲಿ ಪ್ರಕಟಿಸಿದೆ-ಸಂ)*

ಸಮನ್ವಯ ಸಮಿತಿ ಕನ್ನಡವೇ ಸತ್ಯ ಬಳಗದ ಬಹಳಷ್ಟು ಲೇಖಕರ ಪರಿಚಯವನ್ನು ಶ್ರೀಯುತ ಇಜೇರಿಯವರು ವಿಸ್ತೃತವಾಗಿ ಮಾಡಿದ್ದಾರೆ. ಹಾಗಾಗಿ ಲೇಖಕರ ಪರಿಚಯ ಮಾಡುತ್ತಿರುವುದು ಔಪಚಾರಿಕ ಮಾತ್ರ. ಇಂದು ಲೇಖಕರು ಪ್ರಸ್ತುತಪಡಿಸಿದ ಬರಹಗಳನ್ನು ನನ್ನ ಅರ್ಥವ್ಯಾಪ್ತಿಗೆ ನಿಲುಕಿದಷ್ಟನ್ನು ಯತಾಮತಿ: ವಿಶ್ಲೇಷಿಸುವ ಪ್ರಯತ್ನ ಮಾಡುತ್ತೇನೆ. ಕಥೆ, ಕವನ, ಲೇಖನ, ವಿಡಂಬನೆ, ಹರಟೆ ಚೂರುಗಳ ಅವಲೋಕನ.

೦೧. ಹರಿದ್ವಾರದ ಪತಂಜಲಿ ಯೋಗಗ್ರಾಮ – ಮನೋಹರ ಗೋಖಲೆ

ಶ್ರೀಯುತ ಮನೋಹರ ಗೋಖಲೆಯವರು ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಕನ್ನಡ ಬಳಗದಲ್ಲಿ ಕ್ರಿಯಾಶೀಲರಾಗಿದ್ದರು. ಅನುವಾದ, ನಾಟಕ, ಯಕ್ಷಗಾನಗಳಲ್ಲಿ ಭಾಗವಹಿಸುವುದು ಅವರ ಹವ್ಯಾಸ. 'ಶಿಶಿಲ ನನ್ನೂರು ನೆನಪು ನೂರಾರು' ಅವರ ಕೃತಿ. ತಮ್ಮ ಪತಂಜಲಿ ಗ್ರಾಮ ಎನ್ನುವ ಲೇಖನದಲ್ಲಿ ಹರಿದ್ವಾರದ ಸಮೀಪದಲ್ಲಿ ತಾವು ಇತ್ತೀಚೆಗೆ ಭೇಟಿ ನೀಡಿದ ಯೋಗಗ್ರಾಮದ ಚಟುವಟಿಕೆಗಳನ್ನು ಸಮಗ್ರವಾಗಿ ಪರಿಚಯಿಸಿದ್ದಾರೆ ಯೋಗ ಗ್ರಾಮ ಎಂಬ ಅದ್ಭುತ ಲೋಕಕ್ಕೆ ಹೋಗಿ ಸ್ವಾಸ್ಥ್ಯಪರ ಚಟುವಟಿಕೆಗಳಲ್ಲಿ ಭಾಗವಹಿಸಿ, ತಮ್ಮ ಅನುಭವಗಳನ್ನು ಸವಿಸ್ತಾರವಾಗಿ ಹಂಚಿಕೊಂಡಿದ್ದಾರೆ. ಭಾರತದ ಸನಾತನ ಸಂಸ್ಕೃತಿ, ಯೋಗದ ಮಹತ್ವ ಎಲ್ಲವೂ ಗುಪ್ತಗಾಮಿನಿಯಾಗಿ ಪ್ರವಹಿಸುತ್ತಿದೆ ಎನ್ನುತ್ತಾ ಯೋಗ ಪರಂಪರೆಯ ಬಗೆಗೆ ಬೆಳಕು ಚೆಲ್ಲಿದ್ದಾರೆ. ಸ್ವದೇಶಿ ಉತ್ಪನ್ನಗಳನ್ನು ಖರೀದಿಸಿ, ವಿದೇಶಿ ವಸ್ತುಗಳ ಬಳಕೆಯನ್ನು ಕಡಿಮೆ ಮಾಡಿ ಎನ್ನುವ ಘೋಷಣೆ ಭಾರತಾದ್ಯಂತ ಮೊಳಗುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಅವರ ಲೇಖನವು ಎಲ್ಲರಲ್ಲೂ ಜಾಗೃತಿ ಮೂಡಿಸುತ್ತದೆ. ಗೋಖಲೆಯವರಿಗೆ ಧನ್ಯವಾದಗಳು.

ಪೂರ್ಣಿಮ ಭಗವಾನ್

ಹಾಸನ ಜಿಲ್ಲೆಯ ಹೊಳೆನರಸೀಪುರದಲ್ಲಿ ಜನನ. ಮೈಸೂರಿನಲ್ಲಿ ವಿದ್ಯಾಭ್ಯಾಸ. ಮಹಾರಾಣಿ ಕಾಲೇಜಿನಲ್ಲಿ ವಿಜ್ಞಾನ ಪದವಿ ಮತ್ತು ಮಾನಸ ಗಂಗೋತ್ರಿಯಲ್ಲಿ ರಸಾಯನ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಗಳಿಕೆ.

ಕೆಲಕಾಲ ಹೊಳೆನರಸೀಪುರದ ಸರ್ಕಾರಿ ಪದವಿ ಕಾಲೇಜಿನಲ್ಲಿ ರಸಾಯನ ಶಾಸ್ತ್ರದ ಪ್ರಾಧ್ಯಾಪಕಿಯಾಗಿ ಸೇವೆ. 1981ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ವಿದ್ಯಾರಣ್ಯಪುರ ಶಾಖೆಯಲ್ಲಿ ಉದ್ಯೋಗಿಯಾಗಿ ಸೇರ್ಪಡೆ. 31.03.2017ರಂದು ಮೈಸೂರು ಬ್ಯಾಂಕು ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ವಿಲೀನವಾದ ಸಮಯದಲ್ಲಿ ಬೆಂಗಳೂರಿನ ಬಸವರಾಜ ಮಾರುಕಟ್ಟೆ ಶಾಖೆಯಿಂದ ಸ್ವಯಂ ನಿವೃತ್ತಿ. ಪ್ರಸ್ತುತ ಬೆಂಗಳೂರಿನಲ್ಲಿ ವಾಸ.

ಪೂರ್ಣಿಮ ಅವರಿಗೆ ಬಾಲ್ಯದಿಂದಲೂ ಕನ್ನಡ ಸಾಹಿತ್ಯದಲ್ಲಿ ಆಸಕ್ತಿ. ಹಲವು ಆಧ್ಯಾತ್ಮಿಕ ಗ್ರಂಥಗಳ ಅಧ್ಯಯನ. ಶಾಲಾ ಕಾಲೇಜಿನ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಗಳಿಕೆ. ಬ್ಯಾಂಕ್ ಉದ್ಯೋಗದ ಜೊತೆಯಲ್ಲಿಯೇ ಹಿಂದಿ ಪ್ರವೇಶ, ಪ್ರಬೋಧ, ಪ್ರಾಜ್ಞ ಮುಂತಾದ ಪರೀಕ್ಷೆಗಳಲ್ಲಿ ತೇರ್ಗಡೆ. ನಿವೃತ್ತಿಯ ನಂತರ ಬೆಂಗಳೂರಿನ ಸಂಸ್ಕೃತ ಭಾರತಿಯಲ್ಲಿ ಅಧ್ಯಯನ. ಸಂಸ್ಕೃತ ಪ್ರವೇಶ, ಪರಿಚಯ, ಶಿಕ್ಷಾ, ಕೋವಿದ –ಹೀಗೆ ನಾಲ್ಕು ಪರೀಕ್ಷೆಗಳು ಮಾತ್ರವಲ್ಲದೆ ಗೀತಾ ಸೋಪಾನಂ ಮತ್ತು ಗೀತಾ ಪ್ರವೇಶದ ತಲಾ ಎರಡು ಪರೀಕ್ಷೆಗಳಲ್ಲೂ ಉತ್ತೀರ್ಣ.

ಪೂರ್ಣಿಮ ಅವರು ತಮ್ಮ ಸಾಹಿತ್ಯಕ ಚಟುವಟಿಕೆಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡದ್ದು ಕೋವಿಡ್ ಕಾಲಘಟ್ಟದಲ್ಲಿ. ಅವರು ರಚಿಸಿದ ಸಾಹಿತ್ಯ ಸಂಪತ್ತು ಅಗಾಧ. ಸುಮಾರು 1000ಕ್ಕೂ ಹೆಚ್ಚು ಕವಿತೆಗಳು, 800ಕ್ಕೂ ಹೆಚ್ಚು ವಚನಗಳು, ಸಾವಿರಾರು ಮುಕ್ತಕಗಳನ್ನು ರಚಿಸಿದುವುದಲ್ಲದೆ, ಸೃಜನ ಸಾಹಿತ್ಯ, ಛಂದೋಬದ್ಧ ರಚನೆಗಳು, ಸಣ್ಣ ಕತೆಗಳನ್ನು ಬರೆದಿದ್ದು, ಚಿತ್ರಕಲೆಯಲ್ಲೂ ನೈಪುಣ್ಯತೆ ಗಳಿಸಿದ್ದಾರೆ. ತಮ್ಮದೇ ಆದ ಯುಟ್ಯೂಬ್ ಚಾನೆಲ್ ಹೊಂದಿದ್ದು, ತಮ್ಮ ಕವನಗಳನ್ನು ಹಲವು ಗಾಯಕಿಯರಿಂದ ಹಾಡಿಸಿ ಪ್ರಚುರಪಡಿಸಿದ್ದಾರೆ. ಅಂಚೆಚೀಟಿ ಮತ್ತು ನಾಣ್ಯಗಳ ಸಂಗ್ರಹ, ಪ್ರವಾಸ, ಚಿತ್ರಕಲೆ ಮತ್ತು ಪರಿಸರ ಕಾಳಜಿ ಇವರ ಹವ್ಯಾಸ.

'ಸಂಚಲನ-ಸಂವಹನ' (30 ಸ್ವರಚಿತ ಕವನಗಳ ಸಂಗ್ರಹ), 'ಸಂವಹನ-ಸಂವರ್ಧನ' (109 ಸ್ವರಚಿತ ಕವನಗಳ ಸಂಗ್ರಹ) ಹಾಗೂ 'ವಚನ ಪೌರ್ಣಮಿ' (365 ಸ್ವರಚಿತ ವಚನಗಳ ಸಂಗ್ರಹ) – ಇವು ಪೂರ್ಣಿಮ ಅವರ ಪ್ರಕಟಿತ ಕೃತಿಗಳು.. ಇವರು ತಮ್ಮ ಸಾಹಿತ್ಯ ರಚನೆಗಾಗಿ ಗಳಿಸಿದ ಪ್ರಶಸ್ತಿ, ಬಹುಮಾನಗಳು ಹಲವು. ಬೆಂಗಳೂರಿನ ಸಾಹಿತ್ಯ ಸಾಧಕ್ ಮಂಚ್ ಸಂಸ್ಥೆಯಿಂದ 'ಭಾಷಾ ಪ್ರಹರಿ ಸಮ್ಮಾನ್' ಪ್ರಶಸ್ತಿ, ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತಿನ ಎಂಟನೆಯ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಮ್ಮೇಳನದಲ್ಲಿ ಸನ್ಮಾನ, ಹೈದರಾಬಾದಿನಲ್ಲಿ ಕಥಾಬಿಂದು ಪ್ರಕಾಶನ ಮತ್ತು ಶ್ರೀ ಶ್ರೀ ಕಲಾವೇದಿಕೆ ಏರ್ಪಡಿಸಿದ್ದ ದ್ವಿಭಾಷಾ ಕವಿಗೋಷ್ಠಿಯಲ್ಲಿ ಕನ್ನಡ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸುವ ಭಾಗ್ಯ – ಇಷ್ಟೇ ಅಲ್ಲ, ಇನ್ನೂ ಬಹಳ ಉದ್ದವಿದೆ, ಪೂರ್ಣಿಮರ ಸಾಧನೆಯ ಹಾದಿ.

ಪೂರ್ಣಿಮ ಅವರ ತಾಯಿಯ ಹೆಸರು ನೇತ್ರಾವತಿ, ತಂದೆಯ ಹೆಸರು ಭಗವಾನ್ – ಹಾಗಾಗಿ ಇವರ ಕವನಗಳು 'ನೇತ್ರತನಯೆ' ಎಂದೂ, ವಚನಗಳು 'ಭಗವಾನ್' ಎಂದೂ ಅಂತ್ಯಸಾಲಿನ ಕೊನೆಯಲ್ಲಿ ಮುಕ್ತಾಯವಾಗುವುದು ವಿಶೇಷ.

***

೦೨. 'ಅಮೃತಧಾರೆ' ಕವನ – ಗಿರಿಜಾ ರಾಜ್

ಹಿರಿಯ ಉತ್ತಮ ಲೇಖಕಿ ಶ್ರೀಮತಿ ಗಿರಿಜಾರಾಜ್‌ರವರು ಇಂದು ಪ್ರಸ್ತುತಪಡಿಸಿದ ತಮ್ಮ ಕವನ 'ಅಮೃತಧಾರೆ'ಯಲ್ಲಿ ದೈನಂದಿನ ಸಾಮಾನ್ಯ ಘಟನೆಯೊಂದಕ್ಕೆ ಅಸದೃಶ ಕಲ್ಪನೆಯ ತಿರುವನ್ನು ನೀಡಿದ್ದಾರೆ. ಮನೆಯೊಡೆಯರ ತೊಡೆದಿಂಬಿನ ಮೇಲೆ ಮಲಗಿದ ನಾಯಿ ಒಡೆಯನ ಪುಸ್ತಕದ ಓದಿನ ಜೋಗುಳದಲ್ಲಿ ಮೈಮರೆತು ನಿದ್ರಿಸುವ ದೃಶ್ಯದಲ್ಲಿ ಪ್ರೀತಿಯ ಅಮೃತಧಾರೆ ಹರಿದಿದೆ. ಕೊನೆಯ ಚರಣದಲ್ಲಿ ಪ್ರಕೃತಿಯ ಕಣಕಣದಲ್ಲಿರುವ ಭಾವನಾತ್ಮಕ ಕಾವ್ಯದ ದೃಶ್ಯ ಒಲುಮೆಯ

ಮಹಿಮೆಯ ಅರಿತವರಿಗೆ ವೇದ್ಯ ಎನ್ನುವ ಸಾಲುಗಳು ಮನಮುಟ್ಟಿ ತಮ್ಮನ್ನು ತಾವು ಪರೀಕ್ಷೆಗೆ ಒಳಪಡಿಸಿಕೊಳ್ಳಲು ಪ್ರೇರೇಪಿಸುತ್ತದೆ. ಧನ್ಯವಾದಗಳು ಮೇಡಂ ಗಿರಿಜಾರವರಿಗೆ.

೦೩. 'ಪಾದ್ರಿ ಹಯಾಸಿಂತನ ಕತೆ' – ವಿಠ್ಠಲ ಇಜೇರಿ

ಶ್ರೀಯುತ ವಿಠ್ಠಲ ಇಜೇರಿಯವರು ಈ ವೇದಿಕೆಯಲ್ಲಿ ಚಿರಪರಿಚಿತರು. ಅನೇಕ ಸಾಹಿತಿಗಳನ್ನು ವಿಸ್ತೃತವಾಗಿ ಪರಿಚಯಿಸಿದ್ದಾರೆ. ವೇದಿಕೆಯಲ್ಲಿ ಪ್ರತಿಯೊಬ್ಬರ ಬರಹಗಳನ್ನೂ ಓದಿ ಪ್ರತಿಕ್ರಿಯಿಸಿ ಪ್ರೋತ್ಸಾಹ ನೀಡುವ ಅವರ ಉತ್ಸಾಹ ಅನುಕರಣೀಯ. ಅವರ 'ಪಾದ್ರಿ ಹಯಾಸಿಂತನ ಕತೆ'ಯಲ್ಲಿ ಅನೇಕ ಕುತೂಹಲಕಾರಿ ವಿಷಯಗಳನ್ನು ತಿಳಿಸಿದ್ದಾರೆ. ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿ ಕಾನ್‌ಸ್ಟಾಂಟಿನೋಪಲ್‌ಗೆ ಹೋದಾಗ ಅಲ್ಲಿನ ಹಯಾಸಿಂತ್ ದಂಪತಿಗಳು ವಿವೇಕಾನಂದರ ವ್ಯಕ್ತಿತ್ವದಿಂದ ಪ್ರಭಾವಿತರಾಗಿ ಅವರ ಜೊತೆಗೂಡುತ್ತಾರೆ. ಪಾದ್ರಿಯಾಗಿದ್ದ ಹಯಾಸಿಂತರು ಚರ್ಚುಗಳ ಸಂಬಂಧ ತೊರೆದಿದ್ದರೂ ಜನರ ನಡುವಿನ ಸಂಪರ್ಕ ಸೇತುವೆಯಾಗಿ ತಮ್ಮ ಕೆಲಸ ಮುಂದುವರಿಸಿರುತ್ತಾರೆ. ಹಯಾಸಿಂತರ ಪರಿಚಯದ ಜೊತೆಜೊತೆಗೆ ಕ್ಯಾಥೊಲಿಕ್, ಪ್ರಾಟೆಸ್ಟೆಂಟ್ ಸಂಪ್ರದಾಯಗಳ ನಡುವಿನ ಕೆಲವು ವ್ಯತ್ಯಾಸಗಳನ್ನು ತಿಳಿಸುತ್ತಾರೆ. ಲೇಖನದ ನಡುವೆ ಹಾಸ್ಯದ ಎಳೆಯೂ ಇದೆ. ಅಭಿನಂದನೆಗಳು ಇಜೇರಿ ಸರ್.

೦೪. 'ಅಶ್ವತ್ಥಾಮೋ ಹತಃ' (ಕಥಾ ಸಂಕಲನ) – ಪುಸ್ತಕ ಪರಿಚಯ – ಶೀಲಾ ಅರಕಲಗೂಡು

ಹಿರಿಯ ಲೇಖಕಿ, ಅಖಿಲ ಭಾರತ ಸಾಹಿತ್ಯ ಪರಿಷತ್ತಿನ ದಕ್ಷಿಣ ವಿಭಾಗದ ಮಹಿಳಾ ಘಟಕದ.ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ಶೀಲಾರವರು ತಮ್ಮ 'ಕಕಾರ ಕವನ'ದಿಂದ ಕನ್ನಡ ಸಾರಸ್ವತ ಲೋಕದಲ್ಲಿ ವಿಜೃಂಭಿಸಿದ್ದಾರೆ. ಮೈಸೂರು ದಸರೆಯ ಕವಿಗೋಷ್ಠಿಯಲ್ಲಿ ಭಾಗವಹಿಸುವ ಅವಕಾಶ ದೊರೆತ ಹೆಮ್ಮೆಯ ಕವಯಿತ್ರಿ/ಲೇಖಕಿ. ವಾಟ್ಸಾಪ್ ಬಳಗವೊಂದರಲ್ಲಿ ಜಿ.ಪಿ. ರಾಮಣ್ಣ ಎನ್ನುವ ಅದ್ಭುತ ಧ್ವನಿ ಕಲಾವಿದರು ಓದಿದ್ದ 'ಅಶ್ವತ್ಥಾಮೋ ಹತಃ' ಎಂಬ ಕತೆಯನ್ನು ಕೇಳಿ ಪ್ರಭಾವಿತರಾಗಿ, ಮತ್ತೆ ಓದಿ ಈ ಪುಸ್ತಕವನ್ನು ಪರಿಚಯಿಸಿದ್ದಾರೆ. ಮೂರು ಪೌರಾಣಿಕ, ಮೂರು ಐತಿಹಾಸಿಕ, ಐದು ಸಾಮಾಜಿಕ, ಮತ್ತು ಒಂದು ಹರಿಹರ ರಾಘವಾಂಕರ ಕಥೆಗಳನ್ನೊಳಗೊಂಡ ಹನ್ನೆರಡು ಕಥೆಗಳ ಕಥಾ ಸಂಕಲನ 'ಅಶ್ವತ್ಥಾಮೋ ಹತ:'. ಶೀಲಾರವರು ಕಥೆಗಳ ಆಂತರ್ಯ, ಒಳನೋಟವನ್ನು ಸೆರೆಹಿಡಿದು ಪುಸ್ತಕದ ಸಂಕ್ಷಿಪ್ತ ಪರಿಚಯವನ್ನು ಅಮೋಘವಾಗಿ ಕಟ್ಟಿಕೊಟ್ಟಿದ್ದಾರೆ. ಪುಸ್ತಕವನ್ನು ಓದಬೇಕೆನ್ನುವ ಕುತೂಹಲವು ಗರಿಗೆದರಿ ನರ್ತಿಸುತ್ತದೆ. ಸಂಗ್ರಹಯೋಗ್ಯ ಪುಸ್ತಕವೊಂದರ ಪರಿಚಯ ಮಾಡಿಸಿದ್ದೀರಿ. ಧನ್ಯವಾದಗಳು ಶೀಲಾ ಮೇಡಂ.

೦೫. 'ಅಪರಾಧಿ' – ಮಾಧುರಿ ಕೃಷ್ಣ

ತಮ್ಮ ಬರಹಗಳ ವಿಶಿಷ್ಟ ಶೈಲಿಯಿಂದ ಗಮನ ಸೆಳೆಯುವ ಹಿರಿಯ ಲೇಖಕಿ ಶ್ರೀಮತಿ ಮಾಧುರಿ ಕೃಷ್ಣ. ತಮ್ಮ 'ಅಪರಾಧಿ' ಕಥೆಯಲ್ಲಿ ಐವತ್ತು ವರ್ಷಗಳ ನಂತರ ಭೇಟಿಯಾದ ಗೆಳೆಯ ಗೆಳತಿಯರ ಮನಸ್ಸಿನ ಅಂತ:ತುಮುಲವನ್ನು ನೈಜವಾಗಿ, ಭಾವಪೂರ್ಣವಾಗಿ, ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾರೆ. ಕಾರಣಗಳೇನೇ ಇದ್ದರೂ ಅಪರಾಧೀ ಪ್ರಜ್ಞೆಯಿಂದ ಪಾರಾಗಲಾಗದೆ ಒದ್ದಾಡುತ್ತಿರುವ ಕಥಾನಾಯಕಿಯ ಸುಂದರ ಚಿತ್ರಣವನ್ನು ಅಭಿವ್ಯಕ್ತಿಸಿದ್ದಾರೆ. ಭೇಟಿಯಾದ ಈರ್ವರ ಮನಸ್ಥಿತಿಯನ್ನು ತೆರೆದಿಡುವ ಸುಂದರ ಕಥೆ. ಧನ್ಯವಾದಗಳು ಮಾಧುರಿ ಮೇಡಂ.

೦೬. 'ಮೌಲ್ಯ ಪ್ರಜ್ಞೆ' – ರೇಣುಕಾ ದೇಸಾಯಿ

ಯಾವಾಗಲೂ ಲವಲವಿಕೆಯ ಚಿಲುಮೆಯಾಗಿ, ಪ್ರೇರಣಾದಾಯಕ ವ್ಯಕ್ತಿತ್ವ ಹೊಂದಿರುವ ಬಹುಮುಖ ಪ್ರತಿಭೆ ಶ್ರೀಮತಿ ರೇಣುಕಾ ದೇಸಾಯಿ. ಅವರ ಇಂದಿನ ಪ್ರಸ್ತುತಿ 'ಮೌಲ್ಯ ಪ್ರಜ್ಞೆ', ಬರೆದಂತೆ ಬದುಕಿದ, ಬದುಕಿದಂತೆ ಬರೆದ, ಆದರ್ಶ ವ್ಯಕ್ತಿತ್ವ ಹೊಂದಿರುವ ನಮ್ಮ ಕಾಲದ ಹಿರಿಯ ಮೇರು ಲೇಖಕರೂ, ಸಮಾಜ ಸೇವಾ ತತ್ಪರರೂ ಆದ ಶ್ರೀ ಎಸ್.ಎಲ್.ಭೈರಪ್ಪನವರ ವ್ಯಕ್ತಿತ್ವವನ್ನು ಕುರಿತ ಲೇಖನವಿದು. 2025ರ ಜೂನ್ 14ರಂದು ಉದ್ಘಾಟನೆಯಾದ ಭೈರಪ್ಪ ಪ್ರತಿಷ್ಠಾನದ ಕಿರುಪರಿಚಯ ದೊಂದಿಗೆ ಪ್ರತಿಷ್ಠಾನದ ಧ್ಯೇಯ, ಉದ್ದೇಶಗಳನ್ನು ತಿಳಿಸಿದ್ದಾರೆ. ಸನ್ಮಾನ್ಯ ಡಿ.ವಿ.ಗುಂಡಪ್ಪನವರನ್ನು ಸ್ಮರಿಸಿದ್ದಾರೆ. ಈ

ಸಂದರ್ಭದಲ್ಲಿ ಪುರಂದರದಾಸರ ಕೆರೆಯ ನೀರನು ಕೆರೆಗೆ ಚೆಲ್ಲಿ ಎನ್ನುವ ಹಾಡು ನೆನಪಾಗುತ್ತಿದೆ. ಸರಸ್ವತಿಯ ವರಪುತ್ರ ಭೈರಪ್ಪನವರು ತಮ್ಮೆಲ್ಲ ಗೌರವಧನ, ಸಂಪಾದನೆಯನ್ನು ಸಮಾಜ ಸೇವೆಗೆ ಮುಡಿಪಾಗಿಟ್ಟಿದ್ದಾರೆ. ತನ್ನೂರಾದ ಸಂತೆಶಿವರದಲ್ಲಿ ವಿಶಾಲವಾದ ಕೆರೆಕಟ್ಟಿಸಿ ಅಲ್ಲಿನ ಜನರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಮೇರು ವ್ಯಕ್ತಿತ್ವದ ಸಾಹಿತಿ ಭೈರಪ್ಪನವರನ್ನು ಸ್ಮರಿಸಿ ಅವರ ಆದರ್ಶಗಳನ್ನು ಮೈಗೂಡಿಸಿಕೊಂಡಾಗ ಜೀವನ ಪಾವನ. ಸಾವನ್ನು ಶಾಂತವಾಗಿ ಸ್ವೀಕರಿಸುವ ಸ್ವಭಾವ ಕಲಿಸುವುದೇ ಬದುಕು ಎನ್ನುವ ದಾರ್ಶನಿಕತೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಎಷ್ಟು ಜನರಿಗೆ ಸಾಧ್ಯ. ಅಂತಹ ಧೀಮಂತ ವ್ಯಕ್ತಿಯನ್ನು ಈ ವೇದಿಕೆಯಲ್ಲಿ ಸ್ಮರಿಸಿಕೊಳ್ಳುವ ಅವಕಾಶ ಕಲ್ಪಿಸಿದ್ದೀರಿ.ಧನ್ಯವಾದಗಳು ರೇಣುಕಾ ಮೇಡಂ.

೦೭. 'ಬೌ.. ಬೌ.. ಬಿರಿಯಾನಿ' (ನಗೆಲೇಖನ) – ನಾಗರತ್ನ ಚಂದ್ರಶೇಖರ್.

ಹಿರಿಯ ಬರಹಗಾರ್ತಿ ಶ್ರೀಮತಿ ನಾಗರತ್ನ ಚಂದ್ರಶೇಖರ್‌ರವರು ತಮ್ಮ ನಗೆಲೇಖನ 'ಬೌ.. ಬೌ.. ಬಿರಿಯಾನಿ'ಯಲ್ಲಿ ಬೀದಿ ನಾಯಿಗಳಿಗೆ ಆಹಾರ ಒದಗಿಸುವ ಯೋಚನೆ, ಯೋಜನೆಯ ವಿಷಯ ಆಧರಿಸಿ ದೈನಂದಿನ ಜೀವನದಲ್ಲಿ ನಡೆಯುವ ಸಂಭಾಷಣೆಯನ್ನು ಹಾಸ್ಯೋಕ್ತಿಯಲ್ಲಿ ಓದುಗರಿಗೆ ತಲುಪಿಸಿದ್ದಾರೆ. ಭಾರತೀಯ ಬೀದಿನಾಯಿಗಳು, ಸಾಕುನಾಯಿಗಳು, ವಿದೇಶದಲ್ಲಿ ಸಾಕಿದ ನಾಯಿಗಳ ಸ್ವಭಾವ, ಆಹಾರಗಳ ತುಲನೆ ಮಾಡಿದ್ದಾರೆ. ಕಲಬೆರಕೆ ವ್ಯವಸ್ಥೆಯಲ್ಲಿ ನಾಯಿಮಾಂಸವನ್ನೇ ಬಿರ್ಯಾನಿ ಮಾಡಿ ನಾಯಿಗಳಿಗೇ ತಿನ್ನಿಸಬಹುದಾದ ಪ್ರಸಂಗವೂ ಎದುರಾಗಬಹುದೆನ್ನುತ್ತಾ ನಾಯಿಬಾಲ ಡೊಂಕು ಎನ್ನುವುದು ಎಷ್ಟು ಸಹಜ ಎಂದಿದ್ದಾರೆ. ಅಭಿನಂದನೆಗಳು ನಾಗರತ್ನ ಮೇಡಂ.

೦೮. 'ಹಸಿವೆಂಬ ಗಾರುಡಿಗ' – ಸಿ.ಆರ್.ಕಮಲಾಕ್ಷಿ

ಒಳ್ಳೆಯ ಬರಹಗಾರ್ತಿಯಾದ ಶ್ರೀಮತಿ ಕಮಲಾಕ್ಷಿಯವರು ತಮ್ಮ ಲೇಖನ 'ಹಸಿವೆಂಬ ಗಾರುಡಿಗ'ದಲ್ಲಿ ಎಲ್ಲ ಜೀವಿಗಳಿಗೂ ಪ್ರಧಾನ ಅಗತ್ಯವಾದ ಆಹಾರದ ಬಗ್ಗೆ ಡಿವಿಜಿಯವರ ಕಗ್ಗ, ಜೇಡರ ದಾಸಿಮಯ್ಯನವರ ವಚನಗಳನ್ನು ಉದಾಹರಿಸುತ್ತಾ, ಅನೇಕ ಪ್ರಮುಖ ವ್ಯಕ್ತಿಗಳು ಆಹಾರದ ವಿಷಯದಲ್ಲಿ ಏನು ಹೇಳಿದ್ದಾರೆ ಎನ್ನುವ ಪ್ರಸ್ತಾಪ ಮಾಡುತ್ತಾರೆ. ಹೊಟ್ಟೆ ಹಸಿವು ತೀರಿದ ನಂತರ ಉಂಟಾಗುವ ಇತರ ಹಸಿವುಗಳಾದ ಸ್ವಾತಂತ್ರ್ಯದ ಹಸಿವು, ಅಧಿಕಾರದ ಹಸಿವು, ಜ್ಞಾನದ ಹಸಿವು, ಆಧ್ಯಾತ್ಮಿಕ ಹಸಿವುಗಳ ಬಗೆಗೆ ಬೆಳಕು ಚೆಲ್ಲಿದ್ದಾರೆ. ಧನಾತ್ಮಕ ಹಸಿವು ಸಾಧನೆಗಳ ಹಾದಿಯನ್ನು ತೋರಿದರೆ ಋಣಾತ್ಮಕ ಹಸಿವು ಅವನತಿಯೆಡೆಗೆ ಒಯ್ಯುತ್ತದೆ. ಮಾನವ ಕಲ್ಯಾಣದತ್ತ ಒಯ್ಯುವ ಹಸಿವು ನಮ್ಮದಾಗಬೇಕು ಎನ್ನುವ ಒಳ್ಳೆಯ ಸಂದೇಶ ನೀಡಿದ್ದಾರೆ. ಧನ್ಯವಾದಗಳು ಕಮಲಾಕ್ಷಿ ಮೇಡಂ.

೦೯. 'ಭುವಿಯಲ್ಲಿ ಗಣಪನ ಪಯಣ ಪಕ್ಷಿನೋಟ' – ಮಾಲತಿ ಶ್ರೀನಿವಾಸನ್

ತಮ್ಮ ವಿಭಿನ್ನ ಕಥಾವಸ್ತು, ಶೈಲಿಗಳಿಂದ ಸಾಹಿತ್ಯಲೋಕಕ್ಕೆ ವಿಶಿಷ್ಟ ಕೊಡುಗೆ ನೀಡುತ್ತಿರುವ ಶ್ರೀಮತಿ ಮಾಲತಿ ಶ್ರೀನಿವಾಸನ್ ರವರ ಶ್ರಾವಣ ಮಕ್ಕಳ ಕಥೆಗಳ ವಿಷಯ ಗಣಪ. ಇಂದು 'ಭುವಿಯಲ್ಲಿ ಗಣಪನ ಪಯಣದ ಪಕ್ಷೀನೋಟ'ವನ್ನು ತೆರೆದಿಟ್ಟಿದ್ದಾರೆ. ಭಗವಾನ್ ವಿಷ್ಣುವು ರಾಮ, ಕೃಷ್ಣರ ಅವತಾರದಲ್ಲಿ ಧರೆಗಿಳಿದು ಬಂದು ದುಷ್ಟ ಸಂಹಾರ ಮಾಡಿದ ರಾಮಾಯಣ, ಮಹಾಭಾರತಗಳು ಚಿರಪರಿಚಿತ. ಮಾಲತಿಯವರು ಕೈಲಾಸದಲ್ಲಿರುವ ತಂದೆ ತಾಯಿಯ ಅನುಮತಿ ಪಡೆದು ಗಣೇಶನು ಬಾಲಕ ಗಣಪನ ರೂಪದಲ್ಲಿಯೂ, ಆತನ ವಾಹನವಾದ ಮೂಷಿಕವು ನಾಯಿಯ ರೂಪದಲ್ಲಿಯೂ ಭೂಮಿಗೆ ಬಂದು ಜನರಿಗೆ ಸಹಾಯ ಮಾಡುತ್ತಾ, ಭೂಮಿಯಲ್ಲಿ ಜನರಿಂದ ಆಗುತ್ತಿರುವ ಲೋಪಗಳನ್ನು ತಿದ್ದುತ್ತಿರುವಂತೆ ಸುಂದರ ಕತೆಗಳನ್ನು ಶ್ರಾವಣದ ಮಕ್ಕಳ ಕಥೆಗಳ ಅಭಿಯಾನದಲ್ಲಿ ಮೂವತ್ತು ದಿನಗಳೂ ಬರೆದಿದ್ದಾರೆ. ಗೆಳೆಯ ಮಧುವಿನ ಕಾಲಿನ ಊನತೆಯನ್ನು ಎತ್ತಿ ಆಡಿ ಅವನನ್ನು ಅಣಕಿಸುತ್ತಿದ್ದವರಿಗೆ ಪಾಠ ಕಲಿಸುತ್ತಾನೆ ಬಾಲ ಗಣಪ. ಸೊಗಸಾದ ಕಾಲ್ಪನಿಕ ಕಥಾ ವಸ್ತು, ಶೈಲಿ, ನಿರೂಪಣೆ. ಬಹಳಷ್ಟು ಕತೆಗಳ ಸಾರಾಂಶವನ್ನು ಭುವಿಯಲ್ಲಿ ಗಣೇಶನ ಪಯಣದ ಪಕ್ಷಿನೋಟದಲ್ಲಿ ತಿಳಿಸಿ ಕತೆಗಳನ್ನು ಮತ್ತೊಮ್ಮೆ ಓದಲು ಪ್ರೇರೇಪಿಸಿದ್ದಾರೆ.

ಗಣಪನನ್ನು ಕುರಿತ ಅವರ ಕವನವೂ ಬಹಳ ಚೆನ್ನಾಗಿದೆ. ಅಭಿನಂದನೆಗಳು ಮಾಲತಿ ಮೇಡಂ.

೧೦. 'ಜಿ.ಎಂ. ಒಂದು ಆವಿಷ್ಕಾರ ' – ಹೆಚ್. ಶ್ರೀಧರ ರಾವ್

ಬಹುಮುಖ ಪ್ರತಿಭೆಯ ಗಣಿಯಾದ ಶ್ರೀಧರ್ ರಾವ್‌ರವರು ತಮ್ಮ ಲೇಖನ 'ಜಿ. ಎಂ. ಒಂದು ಆವಿಷ್ಕಾರ'ದಲ್ಲಿ ಕಳೆದ ಇಪ್ಪತ್ತೈದು ವರ್ಷಗಳಿಂದ ಬೆಂಗಳೂರು ನಗರದಲ್ಲಿ ಆಗುತ್ತಿರುವ ಬದಲಾವಣೆಗಳು, ಬೆಳವಣಿಗೆ, ಜನನಿಬಿಡ ವಸತಿ ಸಮುಚ್ಚಯಗಳು, ವಾಹನ ಸಂಚಾರ, ಜನಜೀವನದ ಅಸ್ತವ್ಯಸ್ತತೆಯನ್ನು ಹಂತಹಂತವಾಗಿ ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದಾರೆ. ಹೆಚ್ಚುತ್ತಿರುವ ಅಪಘಾತಗಳಿಗೆ ಮೂಲ ಕಾರಣವಾದ ರಸ್ತೆಗಳು, ರಸ್ತೆಗಳಲ್ಲಿನ ಉಬ್ಬುತಗ್ಗುಗಳು, ಗುಂಡಿಗಳು, ಹೇಳದೇ ಕೇಳದೇ ಬರುವ ವರುಣನ ಆರ್ಭಟ ಸೃಷ್ಟಿಸುವ ಮೂಲಭೂತ ಸೌಕರ್ಯದ ಸಮಸ್ಯೆಗಳು, ಅವ್ಯವಸ್ಥೆಗಳ ಆಗರದ ಪರಿಹಾರಾರ್ಥವಾಗಿ ವಿದ್ಯಾರ್ಥಿ ಸಮುದಾಯವೊಂದು ಮಾಡಿದ ಸಂಶೋಧನೆ, ಯೋಜನೆಯ ರೂಪುರೇಷೆಗಳನ್ನು ನೈಜತೆಯೊಂದಿಗೆ ಅಭಿವ್ಯಕ್ತಿಸಿದ್ದಾರೆ. ಸಂಶೋಧಿತ ಉಪಕರಣದ ಬಳಕೆ, ಜನಾಭಿಪ್ರಾಯದ ಯೋಚನೆ, ಯೋಜನೆ ಕಾರ್ಯರೂಪಕ್ಕೆ ಬಂದರೆ ಉಂಟಾಗಬಹುದಾದ ಕಾಲ್ಪನಿಕ ಸಮಸ್ಯೆಗಳ ಚಿತ್ರಣವನ್ನು ಓದುಗರ ಮುಂದೆ ತೆರೆದಿಡುತ್ತಾರೆ. ಲೇಖನದ ಕೊನೆಯವರೆಗೂ ಕುತೂಹಲ ಕಾಯ್ದಿರಿಸಿಕೊಳ್ಳುವ ಜಿ. ಎಂ, ಅದುವೇ ಗುಂಡಿ ಮೀಟರ್. ಪ್ರಸ್ತುತ ಸಮಸ್ಯೆಗಳನ್ನು ಪ್ರತಿಬಿಂಬಿಸುವ ಲೇಖನ. ಧನ್ಯವಾದಗಳು ಸರ್.

೧೧. 'ಸಿಂಬ, ಅನಿರೀಕ್ಷಿತ ಅತಿಥಿ' – ಗುರುರಾಜ ಶಾಸ್ತ್ರಿ

ಪಕ್ಷಿವೀಕ್ಷಕ, ಚಾರಣಿಗ, ಛಾಯಾಚಿತ್ರಗಾರ, ಅಭಿನಯ ಚತುರ ಮತ್ತು ಪ್ರತಿಭಾವಂತ ಲೇಖಕರೂ ಆಗಿರುವ ಗುರುರಾಜ ಶಾಸ್ತ್ರಿಯವರು ತಮ್ಮ ಲೇಖನ 'ಸಿಂಬ– ಅನಿರೀಕ್ಷಿತ ಅತಿಥಿ'ಯಲ್ಲಿ ನೀರಿನ ಋಣ, ಅನ್ನದ ಋಣ, ಭೂಮಿಯ ಋಣ ಯಾರಿಗೆ ಎಲ್ಲಿ ಇರುವುದೋ ತಿಳಿಯುವುದಿಲ್ಲ ಎನ್ನುತ್ತಾರೆ. ಅದರಂತೆಯೇ ವೈದಿಕ ಕುಟುಂಬವಾದ ತಮ್ಮ ಮನೆಯ ತಾರಸಿಯಲ್ಲಿ ದೊರೆತ ನವಜಾತ ಬೆಕ್ಕಿನಮರಿಯನ್ನು ಕಂಡು ಅದನ್ನೇನು ಮಾಡಬೇಕು ಎಂದಿದ್ದಾಗ ಸಲಹೆಗಳ ಮಹಾಪೂರವೇ ಹರಿದು ಬರುತ್ತದೆ. ಕೆಲವು ದಿನಗಳ ಕಾಲ ತಮ್ಮ ಮನೆಯಲ್ಲಿಯೇ ಬೆಕ್ಕನ್ನು ನೋಡಿಕೊಳ್ಳುವುದು ಎಂಬ ನಿರ್ಣಯಕ್ಕೆ ಬಂದಮೇಲೆ ಸಿಂಬನ ಆಗಮನದ ನಂತರ ಮನೆಯ ಸದಸ್ಯರಿಗೆ ಅವನ ಬಗೆಗುಂಟಾದ ಭಾವನೆಗಳನ್ನು ವಿಶದವಾಗಿ ತಿಳಿಸಿದ್ದಾರೆ. ಬೆಕ್ಕಿನ ಮರಿಯ ಸಹಚರ್ಯದಿಂದ ಉಂಟಾದ ಭಾವನೆಗಳ ಪಲ್ಲಟವನ್ನು ಬಹಳ ಚೆನ್ನಾಗಿ ವಿವರಿಸಿದ್ದಾರೆ. ಬೆಕ್ಕಿನ ಮರಿಯ ಮೇಲೆ ತಮ್ಮ ವೈದಿಕ ಕುಟುಂಬದ ರಿವಾಜು ಬೀರಿದ ಪರಿಣಾಮವಾಗಿ ಸಿಂಬ ಇಲಿ ಹಿಡಿಯದೆ, ಅವನ ಬೆಳವಣಿಗೆ ಕುಂಠಿತ ವಾಗಿರಬಹುದು ಎಂದುಕೊಳ್ಳುತ್ತಾರೆ. ಆಗ ಸಿಂಬನ ಬೆಳವಣಿಗೆಗೆ ಅಡ್ಡಿಯಾಗಬಾರದೆಂದು ಅವನನ್ನು ಬೇರೆಯವರಿಗೆ ಒಪ್ಪಿಸಲು ನಿರ್ಧರಿಸಿದರು. ಮೂರ್ನಾಲ್ಕು ತಿಂಗಳು ಮನೆಯಲ್ಲಿ ಜೊತೆಯಾಗಿದ್ದ ಸಿಂಬನನ್ನು ಬೀಳ್ಕೊಡುವ ಸಂದರ್ಭದಲ್ಲಿ ವರ್ಷಧಾರೆಯನ್ನು ಮೀರಿಸಿದ ಮನೆಯವರ ಕಣ್ಣೀರು ಸಿಂಬನ ಬಗ್ಗೆ ಮನೆಯವರಿಗೆ ಉಂಟಾದ ಪ್ರೀತಿಯ ದ್ಯೋತಕವಿರಬಹುದೇ. ಧನ್ಯವಾದಗಳು ಸರ್.

೧೨. 'ಗಾಳಿ ಗಂಟೆ' – ರಾಧಿಕಾ ವಿ ಗುಜ್ಜರ್

ಉತ್ತಮ ಬರಹಗಾರ್ತಿ, ಚಿತ್ರ ಕಲಾವಿದೆ ರಾಧಿಕಾ ವಿಗುಜ್ಜರ್ ಅವರ ಪ್ರತಿಭೆ ಅನುಪಮ. ಅವರ ಇಂದಿನ ಪ್ರಸ್ತುತಿ 'ಗಾಳಿ ಗಂಟೆ' ಕವನ. ತಮ್ಮ ಎಂದಿನ ವಿನೂತನ ಶೈಲಿಯಲ್ಲಿ ನಿರ್ಜೀವ ವಸ್ತುವಿಗೆ ಜೀವತುಂಬಿದ್ದಾರೆ. ಅವರ ಕವನದ ಹೊಳಹಿನ ವಿಸ್ತಾರ ನಿರೂಪಣೆ, ನಿಗೂಢತೆಯ ಅನಾವರಣ ಇನ್ನೊಬ್ಬ ಶ್ರೇಷ್ಠ ಬರಹಗಾರರಿಗೆ ಮಾತ್ರ ಸಾಧ್ಯ. ಮನೆಯ ಮುಂದಿನ ಪಾರ್ಕಿಂಗ್ ಸೂರಿನ ಕೊಕ್ಕೆಗೆ ಸಿಕ್ಕಿಸಿದ ಗಾಳಿಗಂಟೆಯ ನಿನಾದ ಗಾಳಿ ಬೀಸಿದಾಗ ಮಾತ್ರ. ಮನೆಯವರನ್ನು ಗಮನಿಸದೆ ಬಂಧಿ ಯಾಗಿದ್ದರೂ ಅದು ಮಧುರವಾಗಿ ಉಲಿಯುತ್ತದೆ. ಬಾಹ್ಯದಿಂದ ಪ್ರಚೋದಿತವಾಗದಿದ್ದಾಗ ಅಂತರಂಗದಿಂದ ಹೊರಡುವ ಧ್ವನಿ ಮಧುರ. ಹೊರಗಡೆಯ ಸದ್ದುಗದ್ದಲಗಳಿಂದ ಗೋಡೆಗಳು ಕಿವುಡಾಗಿವೆ ಎನ್ನುವ ಕಲ್ಪನೆಗೊಂದು ನಮಸ್ಕಾರ. ಗೋಡೆಗಳು ಕೇಳುವಂತಿದ್ದರೆ ಕೊನೆಯೇ ಇರದ ಜಗದ ಜಂಜಾಟ.

ಚದುರದಂತೆ ಬಿಗಿಹಿಡಿದು
ತೂಗಿ ಹೊಂದಿಕೊ ಲಯಕೆ
ನಿರ್ಭೀತ ಗಾಳಿಗಂಟೆಯಾಗು
ಏರಿಳಿತಕೆ ಅಂಜಿಕೆಯೇಕೆ – ಮನೋಜ್ಞ ಸಂದೇಶ. ಧನ್ಯವಾದಗಳು ರಾಧಿಕಾ ಮೇಡಂ.

೧೩. 'ಹರಟೆ ಚೂರುಗಳು' – ವೆಂಕಟೇಶ ಕಾಮತ್

ಒಳ್ಳೆಯ ಬರಹಗಾರರಾಗಿರುವ ಶ್ರೀಯುತ ವೆಂಕಟೇಶ ಕಾಮತ್ ಅವರು ಈ ದಿನ ಮೂರು 'ಹರಟೆ ಚೂರು'ಗಳನ್ನು ಪ್ರಸ್ತುತಿ ಪಡಿಸಿದ್ದಾರೆ. ಹರಟೆ ಚೂರು ಎನ್ನುವ ಕಲ್ಪನೆಯೇ ವಿಶಿಷ್ಟ. ಆಗಾಗ್ಗೆ ನಡೆಯುವ ಘಟನೆಗಳು, ಸಂಭಾಷಣೆಗಳಿಗೆ ವಿನೂತನ ಹೊಳಪು ನೀಡಿದ್ದಾರೆ. ಮೊದಲ ಹರಟೆ ನಾಯಿಯನ್ನು ಕುರಿತದ್ದಾಗಿದೆ . ನಾಯಿ ಬೊಗಳಿದರೆ ದೇವಲೋಕ ಹಾಳಾಗುತ್ತಾ ಎಂದು ಆರಂಭಿಸಿರುವ ಲೇಖನದಲ್ಲಿ ಮನುಷ್ಯರು ಹಲವು ಅಡ್ಡ ಹೆಸರುಗಳಿಂದ ಕರೆದರೂ ಪ್ರತಿಕ್ರಿಯೆ ನೀಡುತ್ತಾರೆ, ನಾಯಿಗಳು ತಿರುಗಿಯೂ ಸಹ ನೋಡುವುದಿಲ್ಲ ಎಂಬ ಅಂಶವನ್ನು ಗಮನಿಸಿದ್ದಾರೆ.

ಅವರ ಎರಡನೆಯ ಲೇಖನ 'ನಾಗರ ಪಂಚಮಿ ಮತ್ತು ಅಪ್ಪ'. ಅವರ ತಂದೆಯವರು ತಮ್ಮೂರಾದ ಕಾರ್ಕಳಕ್ಕೆ ನಾಗರ ಪಂಚಮಿಗೆ, ಜಾತ್ರೆಗೆ ಪ್ರತಿವರ್ಷ ತಪ್ಪಿಸದೆ ಹೋಗುತ್ತಿದ್ದ ಸಂದರ್ಭವನ್ನು, ಅವರ ಮನೆಯಲ್ಲಿ ಆಗ ನಡೆಯುತ್ತಿದ್ದ ಹಾಸ್ಯ ಸಂಭಾಷಣೆಯನ್ನು ನೆನಪಿಸಿಕೊಂಡಿದ್ದಾರೆ. ಚರಿತ್ರೆಯ ಪುಟಗಳಲ್ಲಿ ಕೆಲವರ ಹಲವು ತಲೆಮಾರುಗಳ ಹೆಸರುಗಳನ್ನು ಓದಿ ತಿಳಿಯುತ್ತೇವೆ. ನಮ್ಮ ನಮ್ಮ ಮನೆಯವರ ನಾಲ್ಕೈದು ತಲೆಮಾರಿನವರ ವಿಷಯವೇ ತಿಳಿದಿಲ್ಲ ಎನ್ನುವುದು ಎಲ್ಲರೂ ಯೋಚಿಸಿ, ದಾಖಲಿಸಿಕೊಂಡು ಬದಲಾವಣೆಯನ್ನು ಕಾರ್ಯರೂಪಕ್ಕೆ ತರಬೇಕಾದ ವಿಷಯ.

ತಮ್ಮ ಮೂರನೆಯ ಲೇಖನ 'ಅಮ್ಮ ಮತ್ತು ಆಗಸ್ಟ್ ಒಂದು' ರಲ್ಲಿ ತಮ್ಮ ಬಾಲ್ಯವನ್ನು ನೆನಪಿಸಿಕೊಳ್ಳುತ್ತಾ, ನಮ್ಮನ್ನೂ ಬಾಲ್ಯದ ನೆನಪಿನತ್ತ ಕರೆದೊಯ್ಯುತ್ತಾರೆ. ಅಕ್ಕನಿಗೆ ಜನ್ಮದಿನದ ಶುಭಾಶಯಗಳನ್ನು ತಿಳಿಸಿದ್ದಾರೆ. ಧನ್ಯವಾದಗಳು ಸರ್.

೧೪. 'ಹೋಳಿಗೆಯ ಘಮಲಿನಲಿ ಹಿಂದೆ ಸಾಗುತ್ತಾ' – ಟಿ.ಎಸ್. ಶ್ರವಣ ಕುಮಾರಿ

ಪ್ರಬುದ್ಧ ಕಥೆಗಾರ್ತಿ, ಹಿರಿಯ ಲೇಖಕಿ ಶ್ರೀಮತಿ ಶ್ರವಣ ಕುಮಾರಿಯವರು ತಮ್ಮ 'ಹೋಳಿಗೆಯ ಘಮಲಿನ ಹಿಂದೆ ಸಾಗುತ್ತಾ' ಲೇಖನದಲ್ಲಿ ತಮ್ಮ ಜೊತೆಜೊತೆಗೇ ಓದುಗರನ್ನು, ಕೇಳುಗರನ್ನೂ ಹೋಳಿಗೆಯ ರಸಾಸ್ವಾದನೆಗೆ ಕರೆದೊಯ್ಯುತ್ತಾರೆ. ಶ್ರೀಮತಿ ಶ್ರವಣ ಕುಮಾರಿಯವರು ತಮ್ಮ ನೆನಪಿನ ಹಂದರದಲ್ಲಿ ಬೆಳೆಸಿ ಜತನವಾಗಿ ಕಾಪಾಡಿದ್ದ ನೆನಪಿನ ಸುಮಗಳ ಘಮಲನ್ನು ಸಾಹಿತ್ಯಾಸಕ್ತರಿಗೆ ನೀಡುತ್ತಿದ್ದಾರೆ. ಬಾಲ್ಯದ ನೆನಪುಗಳನ್ನು ಎಳೆಎಳೆಯಾಗಿ ಬಿಚ್ಚಿಡುತ್ತಾ ನಮ್ಮ ಅನುಭವದ ಸರಣಿಯನ್ನು ಕೆದಕುವಂತೆ ಮಾಡುತ್ತಾರೆ. ಮೃದುವಾದ, ರುಚಿಕರವಾದ ಹೋಳಿಗೆ ಮಾಡುವುದರಲ್ಲಿ ಪರಿಣತಿಯನ್ನು ಪಡೆದಿದ್ದ ಮಹಿಳೆಯೋರ್ವರು ಅದನ್ನೇ ಗೃಹ ಕೈಗಾರಿಕೆಯಾಗಿ ಬೆಳೆಸಿ ತಮ್ಮ ರುಚಿಕಟ್ಟಾದ ಹೋಳಿಗೆಯಿಂದ ವಿದೇಶಗಳಲ್ಲೂ ಖ್ಯಾತಿ ಪಡೆದಿರುವುದು ನಿಜಕ್ಕೂ ಶ್ಲಾಘನೀಯ. ಇಂದಿನ ಯುವಪೀಳಿಗೆಗೆ ಮಾರ್ಗದರ್ಶಕ. ಕಾಯಕ ಯಾವುದಾದರೂ ಸರಿಯೇ, ನಿಷ್ಠೆಯಿಂದ ಪ್ರಾಮಾಣಿಕವಾಗಿ ದುಡಿದರೆ ಉನ್ನತಿಯನ್ನು ಹೊಂದಬಹುದು ಎನ್ನುವ ನಿದರ್ಶನದ ಸ್ಫೂರ್ತಿದಾಯಕ ಬದುಕು. ಮೂಲೆಗುಂಪಾಗಬಹುದಾಗಿದ್ದ ತಿಂಡಿಯೊಂದು ಜಗದ್ವಿಖ್ಯಾತವಾಗಬಹುದಾದರೆ, ಮನಸ್ಸಿದ್ದರೆ ಮಾರ್ಗ ಎನ್ನುವುದು ನಿಜವಲ್ಲವೇ. ಅಷ್ಟೋತ್ತರದಂತೆ ದೊರಕುತ್ತಿರುವ ಬಗೆಬಗೆಯ ಹೋಳಿಗೆಗಳು ಶತನಾಮಾವಳಿಯ ದೋಸೆಗಳಂತೆ ಕುಡಿಯೊಡೆಯುವ ದಿನಗಳು ದೂರವಿಲ್ಲವೆನಿಸುತ್ತದೆ. ಯುವಪೀಳಿಗೆಯು ನವರೂಪಗಳಿಂದ ಆಕರ್ಷಿತರಾದರೂ ಮೂಲ ಬೇರಿನಂತಿರುವ ಬೇಳೆ ಹೋಳಿಗೆ, ಕಾಯಿ ಹೋಳಿಗೆ, ಹಾಲೊಬ್ಬಟ್ಟು, ಸಕ್ಕರೆ ಹೋಳಿಗೆಗಳನ್ನು ನಾವು ಮರೆಯಲಾದೀತೇ. ಧನ್ಯವಾದಗಳು ಶ್ರವಣಕುಮಾರಿ ಮೇಡಂ.

ಸಮನ್ವಯ ಸಮಿತಿ ಕನ್ನಡವೇ ಸತ್ಯ, ನೋಡಿಯೋ ಸಾಹಿತ್ಯ ದಾಸೋಹದ ಎಲ್ಲ ಸಂಚಾಲಕರಿಗೂ ವಂದನೆಗಳು.

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ,
1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 240 ನಡೆದ ದಿನಾಂಕ: 31 ಆಗಸ್ಟ್ 2025
ಸಂಚಿಕೆಯ ಬಿಡುಗಡೆ ದಿನಾಂಕ: 30 ಸೆಪ್ಟೆಂಬರ್ 2025

(ವಿವಿಧ ಲೇಖನಗಳಲ್ಲಿ ಬಳಸಿರುವ ಚಿತ್ರಗಳು – ಕೃಪೆ ಆಯಾ ಲೇಖಕರು ಮತ್ತು ಅಂತರ್ಜಾಲ)